ಊ	ಮುಂಬೈ ಕರ್ನಾಟಕ ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಜಿಲ್ಲಾ ಪೊಲೀಸ್ ಕಛೇರಿಯ ಡಿ.ಸಿ.ಆರ್.ಬಿ ಘಟಕಕ್ಕೆ ಉಪ ಪೊಲೀಸ್ ಅಧೀಕ್ಷಕರನ್ನು(ನಾಗರೀಕ) ನೇಮಕ ಮಾಡಲಾಗಿದೆಯೇ:	ಮುಂಬೈ ಕರ್ನಾಟಕ ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಅಂದರೆ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆ, ದಾವಣಗೆರೆ, ಕಲಬುರಗಿ, ಮೈಸೂರು ಜಿಲ್ಲೆ, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ, ವಿಜಯಪುರ ಇಲ್ಲಿ ಡಿವೈಎಸ್‌ಪಿ ಡಿಸಿಆರ್‌ಬಿ ಹುದ್ದೆಗಳ ಮಂಜೂರಾತಿ ಬಲವಿರುತ್ತದೆ. ಪ್ರಸ್ತುತ ಬಳ್ಳಾರಿ, ಚಾಮರಾಜನಗರ, ಬಾಗಲಕೋಟೆ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಚಿಕ್ಕಮಗಳೂರು, ಇಲ್ಲಿ ಖಾಲಿಯಿರುವ ಡಿವೈಎಸ್‌ಪಿ, ಡಿಸಿಆರ್‌ಬಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಒಇ 349 ಪೊಸಿಪ 2018

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 373
2. ಸದಸ್ಯರ ಹೆಸರು : ಶ್ರೀ ಪಿ. ರಾಜೀವ್ (ಕುಡಚಿ)
3. ಉತ್ತರಿಸುವ ದಿನಾಂಕ : 11-07-2018
4. ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು

ಕ್ರ ಸಂ.	ಪ್ರಶ್ನೆ	ಉತ್ತರ
ಅ	371ಜೆ ಅಡಿಯಲ್ಲಿ, ಸರ್ಕಾರದ ಅಧಿಸೂಚನೆಯಾಗಿರುವ ಉಪ ಪೊಲೀಸ್ ಅಧೀಕ್ಷಕರ (ನಾಗರೀಕ) ಹುದ್ದೆಗಳ ಸಂಖ್ಯೆ ಎಷ್ಟು; ಮುಂಬಡ್ತಿ ನೀಡಿ ಪ್ರಸ್ತುತ ಬಾಕಿ ಇರುವ ಹುದ್ದೆಗಳು ಎಷ್ಟು; ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮಗಳೇನು;	ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 69 ಪೊಸಿಪ 2016, ದಿನಾಂಕ: 13.07.2016 ರನ್ವಯ 371ಜೆ ಅಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ 48 ಹುದ್ದೆಗಳನ್ನು ಡಿವೈಎಸ್‌ಪಿ(ಸಿವಿಲ್) (ನೇರ ನೇಮಕಾತಿ 10 ಹುದ್ದೆಗಳು ಮತ್ತು ಮುಂಬಡ್ತಿಯಿಂದ ತುಂಬಲು 38 ಹುದ್ದೆಗಳು) ವೃಂದಕ್ಕೆ ಹಂಚಿಕೆ ಮಾಡಲಾಗಿರುತ್ತದೆ. ಸ್ವತಂತ್ರ ಪ್ರಭಾರದಲ್ಲಿರುವ 6 ಹುದ್ದೆಗಳನ್ನು ಸೇರಿಸಿ ಹಂಚಿಕೆ ಮಾಡಲಾದ 38 ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಆದ್ದರಿಂದ ಪ್ರಸ್ತುತ ಮುಂಬಡ್ತಿ ಹುದ್ದೆಗಳು ಖಾಲಿಯಿರುವುದಿಲ್ಲ.
ಆ	ಈ ಹಿಂದೆ ಖಾಲಿ ಇದ್ದ 371 ಜೆ ಅಡಿ ಮೀಸಲಾತಿಯಡಿಯಲ್ಲಿ ಸರ್ಕಾರದಿಂದ ಹೊರಡಿಸಲಾದ ಯಾವ ಅಧಿಸೂಚನೆಯ ಪ್ರಕಾರ ಮೀಸಲಾತಿಗೆ ಪರಿಗಣಿಸಿ ಮುಂಬಡ್ತಿ ನೀಡಲಾಗಿದೆ; ಉಪ ಪೊಲೀಸ್ ಅಧೀಕ್ಷಕರ (ನಾಗರೀಕ) ಹುದ್ದೆಗೆ ನಾಗರೀಕ ನಿಯಮಾವಳಿಗಳನ್ನು ಮೀರಿ ಮುಂಬಡ್ತಿ ನೀಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಜನ ಸ್ಥಳೀಯರಲ್ಲದವರಿಗೆ ಬಡ್ತಿ ನೀಡಲಾಗಿದೆ; ಯಾವ ಆಧಾರದ ಮೇಲೆ ಬಡ್ತಿಗೆ ಪರಿಗಣಿಸಲಾಗಿದೆ;	ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಪಿಎಲ್‌ಎಕ್ಸ್ 2012, ದಿನಾಂಕ: 06.11.2013 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 69 ಪೊಸಿಪ 2016, ದಿನಾಂಕ: 13.07.2016 ರನ್ವಯ ಡಿವೈಎಸ್‌ಪಿ ಹುದ್ದೆಗೆ ಪಿಐ ಹುದ್ದೆಯಲ್ಲಿನ ಜೇಷ್ಠತೆಗನುಗುಣವಾಗಿ ಡಿಜಿ ಮತ್ತು ಐಜಿಪಿ ರವರ ಪ್ರಸ್ತಾವನೆಯನ್ವಯ ವೃಂದ ಮತ್ತು ನೇಮಕಾತಿಗಳು ನಿಯಮಗಳಾನುಸಾರ ಸಕ್ಷಮ ಪ್ರಾಧಿಕಾರದ ಮೂಲಕ ಮುಂಬಡ್ತಿ ನೀಡಲಾಗುತ್ತಿದೆ. ಉಪ ಪೊಲೀಸ್ ಅಧೀಕ್ಷಕರ(ನಾಗರೀಕ) ಹುದ್ದೆಗೆ ನಾಗರೀಕ ನಿಯಮಾವಳಿಗಳನ್ನು ಮೀರಿ ಮುಂಬಡ್ತಿ ನೀಡಲಾಗಿರುವುದಿಲ್ಲ. ಆದುದರಿಂದ ಎಷ್ಟು ಜನ ಸ್ಥಳೀಯರಲ್ಲದವರಿಗೆ ಬಡ್ತಿ ನೀಡಲಾಗಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.
ಇ	ಹೈದರಾಬಾದ್ ಕರ್ನಾಟಕ ಮೀಸಲಾತಿಗೆ ಇತರರು ಸುಳ್ಳು ದಾಖಲಾತಿಗಳನ್ನು ನೀಡಿ ಉಪ ಪೊಲೀಸ್ ಅಧೀಕ್ಷಕರ (ನಾಗರೀಕ) ಹುದ್ದೆಗೆ ಮುಂಬಡ್ತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೈದರಾಬಾದ್ ಕರ್ನಾಟಕ ಮೀಸಲಾತಿಯಡಿಯಲ್ಲಿನ ಡಿವೈಎಸ್‌ಪಿ ಹುದ್ದೆಯ ಮುಂಬಡ್ತಿಗೆ ಸಂಬಂಧಿಸಿದಂತೆ ಕೆಲವೊಂದು ಅಧಿಕಾರಿಗಳು ಹೈ-ಕ ವೃಂದಕ್ಕೆ ಸೇರ್ಪಡೆಗೊಳ್ಳಲು ಅಗತ್ಯವಾದ ದಾಖಲಾತಿಗಳನ್ನು ಸಲ್ಲಿಸದೇ ಹೈದರಾಬಾದ್ ಕರ್ನಾಟಕ ಸ್ಥಳೀಯ ಮೀಸಲಾತಿಯನ್ನು ಪಡೆದಿದ್ದು, ಇದರಿಂದ ನೈಜ ಹೈದರಾಬಾದ್ ಕರ್ನಾಟಕ ಅಧಿಕಾರಿಗಳಿಗೆ ಮುಂಬಡ್ತಿಯಲ್ಲಿ ಅನ್ಯಾಯವಾಗಿದೆಯೆಂದು ಆಕ್ಷೇಪಣೆಗಳು ಡಿಜಿ ಮತ್ತು ಐಜಿಪಿ ರವರ ಕಛೇರಿಯಲ್ಲಿ ಸ್ವೀಕೃತಗೊಂಡಿವೆ. ಸದರಿ ಆಕ್ಷೇಪಣೆಗಳ ಮೇರೆಗೆ ಆಕ್ಷೇಪಿತ ಅಧಿಕಾರಿಗಳು ಹೈದರಾಬಾದ್ ಕರ್ನಾಟಕ ವೃಂದದ ಮೀಸಲಾತಿ ಪಡೆಯಲು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗುತ್ತಿದೆ.
ಈ	ಇದರ ಬಗ್ಗೆ ದೂರು ಅರ್ಜಿಗಳನ್ನು ಸ್ವೀಕರಿಸಲಾಗಿದೆಯೇ; ಸರ್ಕಾರ ತೆಗೆದುಕೊಂಡ ಕ್ರಮಗಳೇನು;	
ಉ	ಹೈದರಾಬಾದ್ ಕರ್ನಾಟಕದ 4 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಯಾದಗಿರಿ, ಬೀದರ್ ಜಿಲ್ಲಾ ಪೊಲೀಸ್ ಕಛೇರಿಯ ಡಿ.ಸಿ.ಆರ್.ಬಿ ಘಟಕಕ್ಕೆ ಪೊಲೀಸ್ ಅಧೀಕ್ಷಕರನ್ನು(ನಾಗರೀಕ) ನೇಮಕ ಮಾಡದಿರಲು ಕಾರಣವೇನು;	ಪ್ರಸ್ತಾಪಿಸಿರುವ ಹೈದರಬಾದ್-ಕರ್ನಾಟಕ ವ್ಯಾಪ್ತಿಯ 4 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿ ಡಿವೈಎಸ್‌ಪಿ, ಡಿ.ಸಿ.ಆರ್.ಬಿ ಹುದ್ದೆಗಳ ಮಂಜೂರಾತಿ ಬಲವಿರುವುದಿಲ್ಲ. ಆದುದರಿಂದ ಸದರಿ ಜಿಲ್ಲೆಗಳಲ್ಲಿ ಡಿಸಿಆರ್‌ಬಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 34
ಉತ್ತರಿಸುವ ದಿನಾಂಕ	: 11.07.2018.
ಸದಸ್ಯರ ಹೆಸರು	: ಶ್ರೀ ಎಂ.ಪಿ. ರೇಣುಕಾಚಾರ್ಯ (ಹೊನ್ನಾಳಿ)
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಯವರು

ಕ್ರಸಂ.	ಪ್ರಶ್ನೆ	ಉತ್ತರ
ಅ	ಹೊನ್ನಾಳಿ ಪಟ್ಟಣದಲ್ಲಿರುವ ವ್ಯಾಯಾಮ ಶಾಲೆಗ ಜಿಮ್ ಉಪಕರಣಗಳನ್ನು ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?	ಪ್ರಸ್ತುತ ಜಿಲ್ಲಾ ಕ್ರೀಡಾಂಗಣ, ಕ್ರೀಡಾ ಶಾಲೆಗಳಿಗೆ ಒದಗಿಸಲು ಆದ್ಯತೆ ನೀಡಲಾಗುತ್ತಿದೆ.
ಇ	ಈಗಾಗಲೇ ನಿರ್ಮಾಣಗೊಂಡಿರುವ ಪುರುಷ ಹಾಗೂ ಮಹಿಳಾ ಪ್ರತ್ಯೇಕ ವ್ಯಾಯಾಮ ಶಾಲೆಗೆ ಜಿಮ್ ಉಪಕರಣಗಳನ್ನು ಸರ್ಕಾರವು ಒದಗಿಸಲು ಚಿಂತಿಸುವುದೇ; ಹಾಗಿದ್ದಲ್ಲಿ, ಯಾವಾಗ ಒದಗಿಸಲಾಗುವುದು;	ಹೊನ್ನಾಳಿ ತಾಲ್ಲೂಕು ಕ್ರೀಡಾಂಗಣದಲ್ಲಿ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಜಿಮ್ ಉಪಕರಣಗಳನ್ನು ಒದಗಿಸಲು ಆದ್ಯತೆಯ ಮೇಲೆ ಕ್ರಮವಹಿಸಲಾಗುವುದು.
ಈ	ಇದಕ್ಕಾಗಿ ವಿನಿಯೋಗಿಸುವ ಅನುದಾನವೆಷ್ಟು?	ಅನುದಾನದ ಲಭ್ಯತೆ ಮತ್ತು ಅಗತ್ಯತೆ ಅನುಗುಣವಾಗಿ ನಿಯಮಾನುಸಾರ ಜಿಮ್ ಉಪಕರಣಗಳನ್ನು ನೀಡುವ ಬಗ್ಗೆ ಕ್ರಮವಹಿಸಲಾಗುವುದು.

ಸಂಖ್ಯೆ: ಯುಸೇಇ 59 ಯುಸೇಭಾ 2018.

(ಡಾ॥ ಜಿ. ಪರಮೇಶ್ವರ)
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 29
ಉತ್ತರಿಸುವ ದಿನಾಂಕ	: 11.07.2018.
ಸದಸ್ಯರ ಹೆಸರು	: ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಯವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ ಹಾಕಿ ಟರ್ಫ್ ಮೈದಾನ ಮಂಜೂರಾಗಿದ್ದು, ಈವರೆವಿಗೂ ಕಾಮಗಾರಿ ಪೂರ್ಣಗೊಳಿಸದಿರಲು ಕಾರಣವೇನು; ಯಾವಾಗ ಪೂರ್ಣಗೊಳಿಸಲಾಗುವುದು; (ಪೂರ್ಣ ವಿವರ ನೀಡುವುದು)	ಕೊಡಗು ಜಿಲ್ಲೆ ಸೋಮವಾರಪೇಟೆಯಲ್ಲಿ ಹಾಕಿ ಟರ್ಫ್ ಮೈದಾನ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪರಿಶೀಲನೆಯಲ್ಲಿದ್ದು, ಸದರಿ ಕಾಮಗಾರಿಯನ್ನು ಪ್ರಸಕ್ತ ಸಾಲಿನ ಆರ್ಥಿಕ ವರ್ಷದ ಒಳಗಾಗಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.
ಆ	ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಗೆ ಸರ್ಕಾರದಿಂದ ಬಿಡುಗಡೆಗೊಳಿಸಲಾದ ಅನುದಾನ ಎಷ್ಟು; ಯಾವ ಯಾವ ಉದ್ದೇಶಕ್ಕೆ ಬಿಡುಗಡೆಗೊಳಿಸಲಾಗಿದೆ? (ವಿವರ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ಕೊಡಗು ಜಿಲ್ಲೆಗೆ ರೂ.2,21,74,249/-ಗಳನ್ನು ಬಿಡುಗಡೆ ಮಾಡಲಾಗಿದೆ. ಅನುದಾನದ ವಿವರ ಇಂತಿದೆ.

(ರೂ ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ	ಬಿಡುಗಡೆಯಾದ ಮೊತ್ತ
	2015-16		
1	ಸೋಮವಾರಪೇಟೆ ತಾಲ್ಲೂಕು ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಹಾಕಿ ಟರ್ಫ್ ನಿರ್ಮಿಸುವ ಸಂಬಂಧ ತಡೆಗೋಡೆ ನಿರ್ಮಿಸಲು	80.35	80.00
	2016-17		
2	ಕೂಡಿಗೆ ಕ್ರೀಡಾ ಶಾಲಾ ಆವರಣದಲ್ಲಿ ಸಿಂಥೆಟಿಕ್ ಹಾಕಿ ಟರ್ಫ್ ಅಳವಡಿಸುವುದು.	342.05	141.74
3	**2017-18ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.**		
	ಒಟ್ಟು	**422.40**	**221.74**

ಸಂಖ್ಯೆ: ಯುಸೇಇ 54 ಯುಸೇಭಾ 2018.

(ಡಾ|| ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 355
ಉತ್ತರಿಸುವ ದಿನಾಂಕ : 11.07.2018.
ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಯವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕೊಪ್ಪಳ ಜಿಲ್ಲೆ ಯಲಬುರ್ಗಾ ಪಟ್ಟಣದಲ್ಲಿರುವ ತಾಲ್ಲೂಕು ಕ್ರೀಡಾಂಗಣ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ	ಸದರಿ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆಯೇ;	ಹೌದು.
ಇ	ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು; ಯಾವಾಗ ಅಭಿವೃದ್ಧಿಪಡಿಸಲಾಗುವುದು?	ಯಲಬುರ್ಗಾ ತಾಲ್ಲೂಕು ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸುವ ಬಗ್ಗೆ ಅನುದಾನದ ಲಭ್ಯತೆ ಆಧರಿಸಿ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಯುಸೇಇ 57 ಯುಸೇಭಾ 2018.

(ಡಾ॥ ಜಿ. ಪರಮೇಶ್ವರ)
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 454

ಉತ್ತರಿಸುವ ದಿನಾಂಕ : 11.07.2018.

ಸದಸ್ಯರ ಹೆಸರು : ಶ್ರೀ ಶ್ರೀಮಂತ್ ಬಾಳಾಸಾಹೇಬ್ ಪಾಟೀಲ್ (ಕಾಗವಾಡ)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಯವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕಾಗವಾಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು; (ಹೆಸರು ಮತ್ತು ಗ್ರಾಮಗಳ ವಿವರ ನೀಡುವುದು)	ಕಾಗವಾಡ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಯಾವುದೇ ಕ್ರೀಡಾಂಗಣಗಳು ಇರುವುದಿಲ್ಲ.
ಆ	ಸದರಿ ಕ್ರೀಡಾಂಗಣಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಅನ್ವಯಿಸುವುದಿಲ್ಲ.
ಇ	ಕಳೆದ ಮೂರು ವರ್ಷಗಳಲ್ಲಿ ಈ ಕ್ರೀಡಾಂಗಣಗಳಿಗೆ ಎಷ್ಟು ಅನುದಾನವನ್ನು ನೀಡಲಾಗಿದೆ ಹಾಗೂ ಸದರಿ ಅನುದಾನದಲ್ಲಿ ಯಾವ ಯಾವ ಲೆಕ್ಕಶೀರ್ಷಿಕೆಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;	ಅನ್ವಯಿಸುವುದಿಲ್ಲ.
ಈ	ಪ್ರಸಕ್ತ ವರ್ಷದಲ್ಲಿ ಕ್ರೀಡಾಂಗಣಗಳ ಅಭಿವೃದ್ಧಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿಯನ್ನು ನೀಡುವುದು)	ಅನ್ವಯಿಸುವುದಿಲ್ಲ.

ಸಂಖ್ಯೆ: ಯುಸೇಇ 55 ಯುಸೇಭಾ 2018.

(ಡಾ॥ ಜಿ. ಪರಮೇಶ್ವರ)
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 361
ಉತ್ತರಿಸುವ ದಿನಾಂಕ : 11.07.2018.
ಸದಸ್ಯರ ಹೆಸರು : ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಯವರು

ಕ್ರಸಂ.	ಪ್ರಶ್ನೆ	ಉತ್ತರ
ಅ	ಬಂಗಾರಪೇಟೆ ತಾಲ್ಲೂಕು ಕೇಂದ್ರದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ರೂ.2.00 ಕೋಟಿಗಳ ಅನುದಾನದೊಂದಿಗೆ ತಾತ್ವಿಕ ಒಪ್ಪಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	2018-19ನೇ ಸಾಲಿನ ಅನುದಾನದಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಹಾಗೂ ಎಷ್ಟು ಅನುದಾನ ಬಿಡುಗಡೆ ಮಾಡಿದೆ;(ವಿವರ ಒದಗಿಸುವುದು)	2018-19ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಯ ಬಂಡವಾಳ ವೆಚ್ಚ ಕಾರ್ಯಕ್ರಮದಡಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು, ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಲಾಗುವುದು.
ಇ	ಟೆಂಡರ್ ಪ್ರಕ್ರಿಯೆಗಳನ್ನು ನಡೆಸಿ ಕಾಮಗಾರಿ ಪ್ರಾರಂಭಿಸಲು ಕಾಲಮಿತಿ ನಿಗಧಿಪಡಿಸಲಾಗಿದಯೇ;	ಮೇಲೆ ಪ್ರಶ್ನೆ(ಆ)ರಲ್ಲಿ ವಿವರಿಸಿರುವಂತೆ ಕ್ರಮ ಕೈಗೊಂಡು ನಂತರ ಕಾಮಗಾರಿ ಪ್ರಾರಂಭಿಸಲು ಕಾಲಮಿತಿ ನಿಗಧಿಪಡಿಸಲಾಗುವುದು.
ಈ	ಹಾಗಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಉದ್ಭವಿಸುವುದಿಲ್ಲ.

ಸಂಖ್ಯೆ: ಯುಸೇಇ 56 ಯುಸೇಭಾ 2018.

(ಡಾ|| ಜಿ. ಪರಮೇಶ್ವರ)
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	297
02.	ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ. ಉಮಾನಾಥ್ ಎ. ಕೊಟ್ಯಾನ್. (ಮೂಡಬಿದ್ರೆ)
03.	ಉತ್ತರಿಸುವ ದಿನಾಂಕ	:	11-07-2018
04.	ಉತ್ತರಿಸುವ ಸಚಿವರು.	:	ಉಪ ಮುಖ್ಯ ಮಂತ್ರಿಯವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮಹಿಳೆಯರು ಮತ್ತು ಮಕ್ಕಳು ಕಣ್ಮರೆಯಾದ ಪ್ರಕರಣಗಳು ದಾಖಲಾಗಿವೆ (ಜಿಲ್ಲಾವಾರು ಸಂಖ್ಯಾ ವಿವರಗಳನ್ನು ನೀಡುವುದು)	ವಿವರಗಳನ್ನು ಅನುಬಂಧ-1 ನಲ್ಲಿ ಲಗತ್ತಿಸಿದೆ.
ಆ	ಕಳೆದ ಮೂರು ವರ್ಷಗಳಲ್ಲಿ ರಕ್ಷಿಸಲಾದವರ ಸಂಖ್ಯೆ ಎಷ್ಟು: (ಜಿಲ್ಲಾವಾರು ಸಂಖ್ಯಾ ವಿವರಗಳನ್ನು ನೀಡುವುದು)	
ಇ	ಹೀಗೆ ಕಾಣೆಯಾಗುತ್ತಿರಲು ಕಾರಣಗಳೇನು? ಕಾಣೆಯಾದವರನ್ನು ರಕ್ಷಿಸಲು ಹಾಗೂ ಇನ್ನಿತರ ಪ್ರತಿಬಂಧಕ ಕ್ರಮಗಳನ್ನು ಜರುಗಿಸುವಲ್ಲಿ ಸರ್ಕಾರದ ಕ್ರಮಗಳು ಯಾವುವು:1	ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.
ಈ	ಅಂತರ್‌ಜಾಲ ಆಧಾರಿತ ಮಾಹಿತಿ ವ್ಯವಸ್ಥೆಯನ್ನು ರೂಪಿಸಲಾಗಿದೆಯೇ: ಆ ಕುರಿತಾದ ವಿವರಗಳೇನು:	ಅಂತರ್‌ಜಾಲ ಆಧಾರಿತ ಮಾಹಿತಿ ವ್ಯವಸ್ಥೆಯನ್ನು ರೂಪಿಸಲಾಗಿದೆ. ರಾಜ್ಯದಲ್ಲಿ ವರದಿಯಾಗುವ ಎಲ್ಲಾ ಪ್ರಕರಣಗಳ ಅಂಕಿ-ಅಂಶಗಳನ್ನು ಮಾಹೆಯಾನ ಪೊಲೀಸ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತಿದೆ. ಹಾಗೂ ರಾಜ್ಯದಲ್ಲಿ ವರದಿಯಾಗುವ ಎಲ್ಲಾ ಪ್ರಕರಣಗಳ ಪ್ರಥಮ ವರ್ತಮಾನ ವರದಿಗಳನ್ನು (ಕೆಲವು ಸೂಕ್ಷ್ಮ ಪ್ರಕರಣಗಳನ್ನು ಹೊರತು ಪಡಿಸಿ) ಪೊಲೀಸ್ ವೆಬ್‌ಸೈಟ್‌ನಲ್ಲಿ (ksp.gov.in) ಸಹ ಲಭ್ಯವಿದೆ.
ಉ	ಕಣ್ಮರೆಯಾದ ಮತ್ತು ಪತ್ತೆಯಾದ ಮಹಿಳೆಯರು/ಮಕ್ಕಳ ಬಗ್ಗೆ ಇರುವ ವೆಬ್‌ಸೈಟ್ ಬಳಕೆಯನ್ನು ಸಾರ್ವಜನಿಕರು ಸುಲಭ ಸಾಧ್ಯವಾಗಿ ಬಳಸಿಕೊಳ್ಳಲು ಸರ್ಕಾರ ದವರು ಅನುಸರಿಸುತ್ತಿರುವ ಕ್ರಮಗಳು ಯಾವುವು?	ಕಣ್ಮರೆಯಾದ ಮತ್ತು ಪತ್ತೆಯಾದ ಮಹಿಳೆಯರು/ಮಕ್ಕಳ ಬಗ್ಗೆಗಿನ ಮಾಹಿತಿಯನ್ನು ಮಾಹೆಯಾನ ಪೊಲೀಸ್ ವೆಬ್‌ಸೈಟ್‌ನ ಕ್ರಿಮಿನಲ್ ಇಂಟಲಿಜೆನ್ಸ್ ಗೆಜೆಟ್‌ನಲ್ಲಿ ಪ್ರಕಟಿಸಲಾಗುತ್ತಿದೆ ಹಾಗೂ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳಾ ಕಲ್ಯಾಣ ಇಲಾಖೆ ರವರು ಅಭಿವೃದ್ಧಿ ಪಡಿಸಿರುವ "ಟ್ರಾಕ್ ದಿ ಮಿಸ್ಸಿಂಗ್ ಚೈಲ್ಡ್ ಪೋರ್ಟಲ್" (Track the Missing Child Portal) ನಡಿಯಲ್ಲಿ "ಖೋಯಾ-ಪಾಯಾ(Khoya-Paya)" ಎಂಬ ಕಿಂಡಿಯಲ್ಲಿ ಸಾರ್ವಜನಿಕರು ಕಣ್ಮರೆಯಾದ ಮಕ್ಕಳ ಮಾಹಿತಿಯನ್ನು ಪಡೆಯಬಹುದಾಗಿದೆ.

ಒಇ 45 ಪಿಸಿಕ್ಯೂ 2018

(ಡಾ: ಜಿ.ಪರಮೇಶ್ವರ)
ಉಪ ಮುಖ್ಯ ಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**: 485**
ಉತ್ತರಿಸುವ ದಿನಾಂಕ	**: 11.07.2018.**
ಸದಸ್ಯರ ಹೆಸರು	**: ಶ್ರೀ ಬಸವರಾಜ್ ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ)**
ಉತ್ತರಿಸುವ ಸಚಿವರು	**: ಮಾನ್ಯ ಉಪ ಮುಖ್ಯಮಂತ್ರಿಯವರು**

ಕ್ರಸಂ.	ಪ್ರಶ್ನೆ	ಉತ್ತರ
ಅ	ಕಲ್ಬುರ್ಗಿ ಗ್ರಾಮೀಣ ಮತಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕೈಗೊಂಡಿರುವ ಕಾಮಗಾರಿಗಳಾವುವು; (ಕಾಮಗಾರಿಗಳವಾರು ಸಂಪೂರ್ಣ ಮಾಹಿತಿ ಒದಗಿಸುವುದು)	ಕಲಬುರಗಿ ತಾಲೂಕಾ ಮಹಾಗಾಂವ ಗ್ರಾಮದ ಸರ್ವೆ ನಂ:129ರಲ್ಲಿ 7.20ಗುಂಟೆ ನಿವೇಶನದಲ್ಲಿ ಕ್ರೀಡಾಂಗಣ ಕಾಮಗಾರಿಯನ್ನು ನಿರ್ಮಾಣ ಸಂಸ್ಥೆಯಾದ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆ.ಆರ್.ಐ.ಡಿ.ಎಲ್.) ಮೂಲಕ ಪ್ರಾರಂಭಿಸಲಾಗಿದೆ. ಬೇಸ್‌ಮೆಂಟ್ ಕಾಮಗಾರಿ ಹಂತದಲ್ಲಿ ಈ ಕಾಮಗಾರಿಗೆ ಶ್ರೀ ಶ್ರೀಮಂತ ತಂಗೀರಪ್ಪ ಕಟ್ಟಿಮನೆ ಮತ್ತು ಇತರರು ಸಿವಿಲ್ ಜಡ್ಜ್(ಜೂನಿಯರ್ ಡಿವಿಷನ್)ಕಲಬುರಗಿ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ;345/2017 ಹೂಡಿ, ಕಾಮಗಾರಿಗೆ ತಡೆಯಾಜ್ಞೆ ತಂದಿರುತ್ತಾರೆ. ಸದರಿ ದಾವೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಆ	ಸದರಿ ಕಾಮಗಾರಿಗಳಿಗೆ ನಿಗದಿಪಡಿಸಿದ, ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಅನುದಾನವೆಷ್ಟು? (ಸಂಪೂರ್ಣ ವಿವರ ಒದಗಿಸುವುದು)	ಮಾನ್ಯ ರಾಜ್ಯ ಸಭಾ ಸದಸ್ಯರಾದ ಶ್ರೀ ಕಸ್ತೂರಿ ರಂಗನ್ ಇವರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಕ್ರೀಡಾಂಗಣಭಿವೃದ್ಧಿ ಕಾಮಗಾರಿಗಾಗಿ ರೂ 25.00 ಲಕ್ಷ ಮಂಜೂರಾಗಿದ್ದು, ರೂ 12,37,500/-ಗಳು ದಿನಾಂಕ: 10.03.2011 ರಂದು ಬಿಡುಗಡೆಯಾಗಿರುತ್ತದೆ. ನ್ಯಾಯಾಲಯದ ಪ್ರಕರಣದ ಹಿನ್ನೆಲೆಯಲ್ಲಿ, ಕಾಮಗಾರಿ ಸ್ಥಗಿತಗೊಂಡಿದ್ದು, ಸದರಿ ಮೊತ್ತ ಖರ್ಚು ಆಗಿರುವುದಿಲ್ಲ. ಅಲ್ಲದೆ ಆವರಣ ಬೇಲಿ ಕಾಮಗಾರಿಗಾಗಿ ಪ್ರತ್ಯೇಕವಾಗಿ ರೂ 2.50 ಲಕ್ಷ ಬಿಡುಗಡೆಯಾಗಿದ್ದು, ಕಾಮಗಾರಿ ಪೂರ್ಣಗೊಂಡಿದ್ದು, ರೂ 2.50 ಲಕ್ಷ ವೆಚ್ಚವಾಗಿರುತ್ತದೆ.

ಸಂಖ್ಯೆ: ಯುಸೇಇ 62 ಯುಸೇಭಾ 2018.

(ಡಾ|| ಜಿ. ಪರಮೇಶ್ವರ)
ಮಾನ್ಯ ಉಪ ಮುಖ್ಯಮಂತ್ರಿಗಳು

93	ದುರ್ಗಾಮಾತಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಪರಶ್ಯಾನಟ್ಟಿ	ಪರಶ್ಯಾನಟ್ಟಿ	ಯಮಕನಮರಡಿ
94	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬೆನ್ನಾಳಿ	ಬೆನ್ನಾಳಿ	ಯಮಕನಮರಡಿ
95	ಶ್ರೀ ವೀರಭದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಕುರಿಹಾಳ	ಕುರಿಹಾಳ	ಯಮಕನಮರಡಿ

ಸಹಕಾರ ಸಂಘಗಳ ಅಪರ ನಿಬಂಧಕರು

(ಪತ್ತು)

64	ಶ್ರೀ ಮಾತಾಲಕ್ಷ್ಮಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಉಚಗಾಂವ	ಉಚಗಾಂವ	ಬೆಳಗಾವಿ ಗ್ರಾಮೀಣ
65	ಶ್ರೀ ಚನ್ನಬಸವೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಾಸ್ತಮರಡಿ ತಾ: ಬೆಳಗಾವಿ	ಮಾಸ್ತಮರಡಿ	ಬೆಳಗಾವಿ ಗ್ರಾಮೀಣ
66	ಶ್ರೀ ಆದಿತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬಾಳೇಕುಂದ್ರಿ ಕೆ. ಎಚ್	ಬಾಳೇಕುಂದ್ರಿ ಕೆ.ಎಚ., ಮಾವಿನ	ಬೆಳಗಾವಿ ಗ್ರಾಮೀಣ
67	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಅರಳಿಕಟ್ಟಿ ತಾ: ಬೆಳಗಾವಿ	ಅರಳಿಕಟ್ಟಿ	ಬೆಳಗಾವಿ ಗ್ರಾಮೀಣ
68	ಜೈ ಕಿಸಾನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬಿಜಗರ್ಣಿ	ಬಿಜಗರ್ಣಿ	ಬೆಳಗಾವಿ ಗ್ರಾಮೀಣ
69	ಶ್ರೀ ಮಹಾಲಕ್ಷ್ಮೀ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬಸರಿಕಟ್ಟಿ	ಬಸರಿಕಟ್ಟಿ	ಬೆಳಗಾವಿ ಗ್ರಾಮೀಣ
70	ಮುಂಗೇತ್ರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ವಾಗವಾಡ	ವಾಘವಡೆ	ಬೆಳಗಾವಿ ಗ್ರಾಮೀಣ
71	ಶ್ರೀ ಬ್ರಹ್ಮಲಿಂಗ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಿಲಜಿ	ನಿಲಜಿ	ಬೆಳಗಾವಿ ಗ್ರಾಮೀಣ
72	ಜ್ಯೋರ್ತಿಲಿಂಗ ಪ್ರಸನ್ನ ಕೃಷಿ ಪತ್ತಿನ ಸ.ಸಂಘ ನಿ. ತುರಮರಿ	ತುರಮರಿ	ಬೆಳಗಾವಿ ಗ್ರಾಮೀಣ
73	ಕಂಗ್ರಾಳಿ ಕೆ ಎಚ್ ಪಿ ಕೆ ಪಿ ಎಸ್ ಕಂಗ್ರಾಳಿ ಕೆ ಎಚ್	ಕಂಗ್ರಾಳಿ ಕೆ.ಎಚ.	ಬೆಳಗಾವಿ ಗ್ರಾಮೀಣ
74	ಶ್ರೀ ಸಂಗಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಭೆಂಡಿಗೇರಿ	ಬೆಂಡಿಗೇರಿ	ಬೆಳಗಾವಿ ಗ್ರಾಮೀಣ
75	ಮಡಿವಾಳೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಬಡಸ ಕೆ.ಹೆಚ್	ಬಡಸ ಕೆ.ಎಚ.	ಬೆಳಗಾವಿ ಗ್ರಾಮೀಣ
76	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ವಿರಪನಕೊಪ್ಪ	ವಿರಪನಕೊಪ್ಪ	ಬೆಳಗಾವಿ ಗ್ರಾಮೀಣ
77	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ,ಹಾಲಗಿಮರಡಿ	ಹಾಲಗಿಮರಡಿ	ಬೆಳಗಾವಿ ಗ್ರಾಮೀಣ
78	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಕುಕಡೊಳ್ಳಿ	ಕುಕಡೊಳ್ಳಿ	ಬೆಳಗಾವಿ ಗ್ರಾಮೀಣ
79	ಶ್ರೀ ಸೊಮೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಕೆ.ಕೆ.ಕೊಪ್ಪ	ಕೆ.ಕೆ.ಕೊಪ್ಪ	ಬೆಳಗಾವಿ ಗ್ರಾಮೀಣ
80	ಶ್ರೀ ಮೈಲಾರಲಿಂಗೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬಡಾಲಅಂಕಲಗಿ	ಬಡಾಲ ಅಂಕಲಗಿ, ಹುಲಿಕವಿ	ಬೆಳಗಾವಿ ಗ್ರಾಮೀಣ
81	ಶ್ರೀ ರೇಣುಕಾದೇವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ದೇಸೂರ	ದೇಸೂರ	ಬೆಳಗಾವಿ ಗ್ರಾಮೀಣ
82	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಹಿರೇಬಾಗೇವಡಿ	ಹಿರೇಬಾಗೇವಾಡಿ	ಬೆಳಗಾವಿ ಗ್ರಾಮೀಣ
83	ಲಕ್ಷ್ಮಿದೇವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಬೆಳವಟ್ಟಿ	ಬೆಳವಟ್ಟಿ	ಬೆಳಗಾವಿ ಗ್ರಾಮೀಣ
84	ಕಾಕತಿ ಫ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಕಾಕತಿ	ಕಾಕತಿ,	ಯಮಕನಮರಡಿ
85	ಹುದಲಿ ಪ್ರಾಥಮಿಕ ಕೃಷಿ ಪತ್ತಿ ಸಹಕಾರಿ ಸಂಘ ನಿ. ಹುದಲಿ	ಹುದಲಿ, ರಾಮಾಪೂರ	ಯಮಕನಮರಡಿ
86	ಅಷ್ಟೇ ಫ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಅಷ್ಟೇ.	ಅಷ್ಟೆ	ಯಮಕನಮರಡಿ
87	ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸುತಗಟ್ಟಿ	ಸುತಗಟ್ಟಿ	ಯಮಕನಮರಡಿ
88	ಬ್ರಹ್ಮದೇವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಹೊಸ ಇದ್ದಲಹೊಂಡ	ಹೊಸ ಇದ್ದಲಹೊಂಡ	ಯಮಕನಮರಡಿ
89	ಶ್ರೀ ಬಸವಣ್ಣಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಜಾಫರವಾಡಿ ತಾ: ಬೆಳಗಾವಿ	ಜಾಫರವಾಡಿ	ಯಮಕನಮರಡಿ
90	ಹೊನಗಾ ಫ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಹೊನಗಾ	ಹೊನಗಾ	ಯಮಕನಮರಡಿ
91	ಸೂರ್ಯೋದಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ,ಬಂಬರಗಾ	ಬಂಬರಗಾ	ಯಮಕನಮರಡಿ
92	ಹಾಲಭಾವಿ ಹಾಲಮ್ಮಾದೇವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಹಾಲಭಾವಿ	ಹಾಲಭಾವಿ	ಯಮಕನಮರಡಿ

32	ಕ.ಕೆ. ಕೊಪ್ಪ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಕೆ.ಕೆ.ಕೊಪ್ಪ	ಕೆ.ಕೆ.ಕೊಪ್ಪ, ನಾಗೇರಹಾಳ	ಬೆಳಗಾವಿ ಗ್ರಾಮೀಣ
	ಹಂದಿಗನೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಹಂದಿಗನೂರ	ಹಂದಿಗನೂರ, ಕುರಿಹಾಳ ಕೆ.ಎಚ., ಮೊಡಕ್ಯಾನಟ್ಟಿ	ಬೆಳಗಾವಿ ಗ್ರಾಮೀಣ
34	ಮಂಜಗಾಂವ ಪ್ರಾಥಮಿಕ ಕೃಷಿ ಪತ್ತಿನ ಸ. ಸಂಘ ನಿ. ಮಜಗಾಂವ.	ಮಜಗಾಂವ	ಬೆಳಗಾವಿ ಗ್ರಾಮೀಣ
35	ಕಲ್ಲೇಹೋಳ ಪ್ರಾಥಮಿಕ ಕೃಷಿ ಪತ್ತಿನ ಸ. ಸಂಘ ನಿ. ಕಲ್ಲೇಹೋಳ	ಕಲ್ಲೆಹೊಳ,	ಬೆಳಗಾವಿ ಗ್ರಾಮೀಣ
36	ಮಂಡೋಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ಮಂಡೋಳ್ಳಿ	ಮಂಡೊಳ್ಳಿ, ಹಂಗರಗೆ	ಬೆಳಗಾವಿ ಗ್ರಾಮೀಣ
37	ಗಜಪತಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಗಜಪತಿ	ಗ್ಗಜಪತಿ, ಬಡಸ ಖಾಲಸಾ	ಬೆಳಗಾವಿ ಗ್ರಾಮೀಣ
38	ಕರ್ಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಕರ್ಲೆ	ಕರ್ಲೆ, ನಾವಗೆ, ಧಾಮಣೆವಾಡಿ	ಬೆಳಗಾವಿ ಗ್ರಾಮೀಣ
39	ಅಗಸಗಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಅಗಸಗಾ	ಅಗಸಗಾ, ಚಲವೆನಟ್ಟಿ, ಮಾಳೆನ	ಬೆಳಗಾವಿ ಗ್ರಾಮೀಣ
40	ಗೌಂಡವಾಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಗೌಂಡವಾಡ	ಗೌಂಡವಾಡ	ಬೆಳಗಾವಿ ಗ್ರಾಮೀಣ
41	ಬೆಂಡಿಗೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬೆಂಡಿಗೇರಿ	ಬೆಂಡಿಗೇರಿ	ಬೆಳಗಾವಿ ಗ್ರಾಮೀಣ
42	ಯಳ್ಳೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಯಳ್ಳೂರ	ಯಳ್ಳೂರ, ಅವಚಾರಟ್ಟಿ	ಬೆಳಗಾವಿ ಗ್ರಾಮೀಣ
43	ಸಾಂಬ್ರಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಸಾಂಬ್ರಾ	ಸಾಂಬ್ರಾ	ಬೆಳಗಾವಿ ಗ್ರಾಮೀಣ
44	ತುಮ್ಮರಗುಡ್ಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ತುಮ್ಮರಗುಡ್ಡಿ	ತುಮ್ಮರಗುದ್ದಿ, ಸೊಮನಟ್ಟಿ, ಭೀಮಗಡ, ಕವಲಾಪೂರ, ಹಳ್ಳೂರ	ಬೆಳಗಾವಿ ಗ್ರಾಮೀಣ
45	ಬಸ್ತವಾಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬಸ್ತವಾಡ	ಬಸ್ತವಾಡ ಕೊಂಡಸಕೊಪ್ಪ, ಕವ	ಬೆಳಗಾವಿ ಗ್ರಾಮೀಣ
46	ಕ್ರಾಂತಿವೀರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ದೇಸೂರ	ದೇಸೂರ	ಬೆಳಗಾವಿ ಗ್ರಾಮೀಣ
47	ಧರ್ಮವೀರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬೆಳವಟ್ಟಿ	ಬೆಳವಟ್ಟಿ	ಬೆಳಗಾವಿ ಗ್ರಾಮೀಣ
48	ಜನಕಲ್ಯಾಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ' ನಿ. ಮಣ್ಣೂರ	ಮಣೂರ, ಗೋಜಗೆ	ಬೆಳಗಾವಿ ಗ್ರಾಮೀಣ
49	ಶ್ರೀ. ಜ್ಯೋರ್ತಿಲಿಂಗ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಅಂಬೇವಾಡಿ	ಅಂಬೇವಾಡಿ	ಬೆಳಗಾವಿ ಗ್ರಾಮೀಣ
50	ಶ್ರೀ ಅಷ್ಟವಿನಾಯಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಬಿಜಗರ್ಣಿ	ಬಿಜಗರ್ಣಿ	ಬೆಳಗಾವಿ ಗ್ರಾಮೀಣ
51	ದುರ್ಗಾಮಾತಾ ಕೃಷಿ ಪತ್ತಿನ ಸ.ಸಂಘ ನಿ. ಸೊನೊಲಿ	ಸೊನೊಲಿ	ಬೆಳಗಾವಿ ಗ್ರಾಮೀಣ
52	ಶಿವನೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬೆಳಗುಂದಿ	ಬೆಳಗುಂದಿ, ಬೊಕನೂರ	ಬೆಳಗಾವಿ ಗ್ರಾಮೀಣ
53	ಭಾವೇಕೆಶ್ವರಿ ಕೃಷಿ ಪತ್ತಿನ ಸ.ಸಂಘ ನಿ. ಸುಳಗಾ(ವಾಯ)	ಸುಳವಾ (ವಾಯ), ರಾಜಹಂ	ಬೆಳಗಾವಿ ಗ್ರಾಮೀಣ
54	ಬಡಸ (ಕೆ.ಎಚ)ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬಡಸ ಕೆ.ಎಚ.	ಬಡಸ ಕೆ.ಎಚ.	ಬೆಳಗಾವಿ ಗ್ರಾಮೀಣ
55	ಶ್ರೀ ಭಾವೇಶ್ವರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬಿಜಗರ್ಣಿ	ಬಿಜಗರ್ಣಿ	ಬೆಳಗಾವಿ ಗ್ರಾಮೀಣ
56	ಶಿವನೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಕಂಗ್ರಾಳಿ ಬಿ.ಕೆ	ಕಂಗ್ರಾಳಿ ಬಿ.ಕೆ., ಗೌಂಡವಾಡ	ಬೆಳಗಾವಿ ಗ್ರಾಮೀಣ
57	ಬಾಲವೀರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಬೆಳಗುಂದಿ	ಬೆಳಗುಂದಿ	ಬೆಳಗಾವಿ ಗ್ರಾಮೀಣ
58	ಶ್ರೀ ನಾಗನಾಥ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಬೆಕ್ಕಿಕೆರಿ	ಬೆಕ್ಕಿನಕೇರಿ	ಬೆಳಗಾವಿ ಗ್ರಾಮೀಣ
59	ಗಾಯತ್ರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಸಾವಗಾಂವ	ಸಾವಗಾಂವ	ಬೆಳಗಾವಿ ಗ್ರಾಮೀಣ
60	ಚವಾಟಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಕುದ್ರೆಮನಿ	ಕುದ್ರೆಮನಿ	ಬೆಳಗಾವಿ ಗ್ರಾಮೀಣ
61	ಶ್ರೀ ಸಾತೇರಿದೇವಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಅತಿವಾಡ	ಅತಿವಾಡ	ಬೆಳಗಾವಿ ಗ್ರಾಮೀಣ
62	ಶ್ರೀ ಪಂಚರಾಶಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ರಾಕಸಕೊಪ್ಪ	ರಾಕಸಕೊಪ್ಪ	ಬೆಳಗಾವಿ ಗ್ರಾಮೀಣ
63	ಶ್ರೀ ಸಿದ್ಧಿವಿನಾಯಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಕಂಗ್ರಾಳಿ ಕೆ ಎಚ್	ಕಂಗ್ರಾಳಿ ಕೆ.ಎಚ.	ಬೆಳಗಾವಿ ಗ್ರಾಮೀಣ

ಬೆಳಗಾವಿ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವಾರು ಮಾಹಿತಿ ಎಲ.ಎ.ಕ್ಯೂ.491

[illegible]	ಸಂಘದ ಹೆಸರು	ಗ್ರಾಮಗಳ ವಿವರ	ಮತಕ್ಷೇತ್ರ
1	ಕುಡಚಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಕುಡಚಿ	ಬಸವನ ಕುಡಚಿ	ಬೆಳಗಾವಿ ಉತ್ತರ
2	ಬೆಳಗಾವಿ ಸಿಟಿ ಮತ್ತು ದಂಡು ಪ್ರದೇಶದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬೆಳಗಾವಿ	ಬೆಳಗಾವಿ ದುಂಡು ಪ್ರದೇಶ	ಬೆಳಗಾವಿ ಉತ್ತರ
3	ಕಣಬರ್ಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಕಣಬರ್ಗಿ	ಕಣಬರ್ಗಿ	ಬೆಳಗಾವಿ ಉತ್ತರ
4	ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಮುಚ್ಚಂಡಿ	ಮುಚ್ಚಂಡಿ	ಬೆಳಗಾವಿ ಉತ್ತರ
5	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಅಲಾರವಾಡ	ಅಲಾರವಾಡ	ಬೆಳಗಾವಿ ಉತ್ತರ
6	ಶ್ರೀ ಮಹಾಲಕ್ಷ್ಮೀ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಕಿಣಯೆ	ಕಿಣಯೆ, ಬಾದರವಾಡಿ, ರಣಕು	ಬೆಳಗಾವಿ ದಕ್ಷಿಣ
7	ಶ್ರೀ ಸುಳಗಾ (ಯು) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಸುಳಗಾ	ಸುಳವಾ (ವಾಯ)	ಬೆಳಗಾವಿ ದಕ್ಷಿಣ
8	ವಡಗಾಂವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ವಡಗಾಂವ	ವಡಗಾಂವ	ಬೆಳಗಾವಿ ದಕ್ಷಿಣ
9	ಅನಗೋಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಅನಿಗೋಳ	ಅನಿಗೋಳ	ಬೆಳಗಾವಿ ದಕ್ಷಿಣ
10	ಮಚ್ಚೆ ವಿವಿಧ ಕಾರ್ಯಕಾರಿ ಸಹಕಾರ ಸಂಘ ನಿ. ಮಚ್ಚೆ	ಮಚ್ಚೆ, ಕುಟ್ಟಲವಾಡಿ, ಬಾಳಗಮ	ಬೆಳಗಾವಿ ದಕ್ಷಿಣ
11	ಧಾಮಣೆ (ಎಸ.) ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಧಾಮಣೆ(ಎಸ)	ಧಾಮಣೆ (ಎಸ), ಮಾಸಗೌಡನ	ಬೆಳಗಾವಿ ದಕ್ಷಿಣ
12	ಕುದ್ರೇಮನಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಕುದ್ರೇಮನಿ	ಕುದ್ರೆಮನಿ	ಬೆಳಗಾವಿ ದಕ್ಷಿಣ
13	ಉಚಗಾಂವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಉಚಗಾಂವ	ಉಚಗಾಂವ	ಬೆಳಗಾವಿ ದಕ್ಷಿಣ
14	ಶೇತಕರಿ ವಿಕಾಸ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಯಳ್ಳೂರ	ಯಳ್ಳೂರ	ಬೆಳಗಾವಿ ದಕ್ಷಿಣ
15	ಪೀರನವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಪೀರಣವಾಡಿ	ಪೀರಣವಾಡಿ, ಖಾದರವಾಡಿ	ಬೆಳಗಾವಿ ದಕ್ಷಿಣ
16	ಶ್ರೀಮಹಾಲಕ್ಷ್ಮೀ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ,ಪೀರನವಾಡಿ	ಪೀರಣವಾಡಿ	ಬೆಳಗಾವಿ ದಕ್ಷಿಣ
17	ಹಿರೇಬಾಗೇವಾಡಿ ರೈತರ ಸೇ.ಸ. ಸಂಘ ನಿ. ಹಿರೇಬಾಗೇವಾಡಿ	ಹಿರೇಬಾಗೇವಾಡಿ	ಬೆಳಗಾವಿ ಗ್ರಾಮೀಣ
18	ಹಿಂಡಲಗಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಹಿಂಡಲಗಾ.	ಹಿಂಡಲಗಾ	ಬೆಳಗಾವಿ ಗ್ರಾಮೀಣ
19	ಕಡೋಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಕಡೋಲಿ	ಕಡೋಲಿ	ಬೆಳಗಾವಿ ಗ್ರಾಮೀಣ
20	ಮುತ್ನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಮುತ್ನಾಳ	ಮುತ್ನಾಳ,	ಬೆಳಗಾವಿ ಗ್ರಾಮೀಣ
21	ಹಲಗಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಹಲಗಾ	ಹಲಗಾ	ಬೆಳಗಾವಿ ಗ್ರಾಮೀಣ
22	ಮಾರಿಹಾಳ ಪ್ರಾಥಮಿಕ ಕೃಷಿ ಸಹಕಾರಿ ಸಂಘ ನಿ. ಮಾರಿಹಾಳ	ಮಾರಿಹಾಳ, ಕರಡಿಗುದ್ದಿ	ಬೆಳಗಾವಿ ಗ್ರಾಮೀಣ
23	ಸಿಂದೋಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ಸಿಂದೋಳ್ಳಿ	ಶಿಂದೊಳ್ಳಿ , ನಿಲಜಿ	ಬೆಳಗಾವಿ ಗ್ರಾಮೀಣ
24	ತಾರೀಹಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ತಾರೀಹಾಳ	ತಾರಿಹಾಳ, ಕೊಳಿಕೊಪ್ಪ, ಚಂದನಹೊಸುರ	ಬೆಳಗಾವಿ ಗ್ರಾಮೀಣ
25	ಮುತಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಮುತಗೆ	ಮುತಗೆ	ಬೆಳಗಾವಿ ಗ್ರಾಮೀಣ
26	ಸಂತಿಬಸ್ತವಾಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಸಂತಿಬಸ್ತವಾಡ	ಸಂತಿಬಸ್ತವಾಡ, ಕಾಳೇನಟ್ಟಿ	ಬೆಳಗಾವಿ ಗ್ರಾಮೀಣ
27	ನಂದಿಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ.. ನಂದಿಹಳ್ಳಿ .	ನಂದಿಹಳ್ಳಿ , ನಾಗೇನಹಟ್ಟಿ	ಬೆಳಗಾವಿ ಗ್ರಾಮೀಣ
28	ಮೋದಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಮೋದಗೆ	ಮೊದಗಾ, ಹೊನ್ನಿಹಾಳ	ಬೆಳಗಾವಿ ಗ್ರಾಮೀಣ
29	ಅಂಕಲಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಅಂಕಲಗಿ	ಬಡಾಲ ಅಂಕಲಗಿ, ಹುಲಿಕವಿ	ಬೆಳಗಾವಿ ಗ್ರಾಮೀಣ
30	ಕಲಕಾಂಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಕಲಕಾಂಬಾ	ಕಲಕಾಂಬ	ಬೆಳಗಾವಿ ಗ್ರಾಮೀಣ
31	ಬಸ್ಸಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಬಸ್ಸಾಪೂರ	ಬಸ್ಸಾಪೂರ	ಬೆಳಗಾವಿ ಗ್ರಾಮೀಣ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 491
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್
ಉತ್ತರಿಸಬೇಕಾದ ದಿನಾಂಕ : 11.07.2018

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ತಾಲೂಕಿನಲ್ಲಿರುವ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಯಾವುವು; ಅವುಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಯಾವುವು; (ಮತಕ್ಷೇತ್ರವಾರು, ಸಂಘವಾರು, ಗ್ರಾಮವಾರು ವಿವರ ನೀಡುವುದು) ;	ಬೆಳಗಾವಿ ಉಪವಿಭಾಗದ ಬೆಳಗಾವಿ ತಾಲೂಕಿನಲ್ಲಿ 04 ಮತಕ್ಷೇತ್ರಗಳಾದ ಬೆಳಗಾವಿ ಉತ್ತರ, ಬೆಳಗಾವಿ ದಕ್ಷಿಣ, ಬೆಳಗಾವಿ ಗ್ರಾಮೀಣ, ಯಮಕನಮರಡಿ, ಈ ಕ್ಷೇತ್ರಗಳಲ್ಲಿ ಬರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಯಾದಿಯನ್ನು ಲಗತ್ತಿಸಿದೆ.
ಆ)	ಹೊಸದಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೊಂದಣಿ ಮಾಡಲು ಅವಕಾಶವಿದೆಯೇ; ಇದ್ದಲ್ಲಿ ನೊಂದಣಿಗಾಗಿ ಅನುಸರಿಸಬೇಕಾಗಿರುವ ಮಾನದಂಡಗಳೇನು; ಇಲ್ಲವಾದಲ್ಲಿ ನೊಂದಣಿ ಕಾರ್ಯವನ್ನು ಯಾವಾಗ ಆರಂಭಿಸಲಾಗುವುದು ?	ಈ ಕೆಳಕಂಡ ಮಾನದಂಡಗಳ ಆಧಾರದ ಮೇಲೆ ಹೊಸದಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೊಂದಣಿ ಮಾಡಲು ಅವಕಾಶಗಳು ಇರುತ್ತವೆ. ➢ ನಬಾರ್ಡ್ ಮಾರ್ಗಸೂಚಿಗಳಿಗನುಗುಣವಾಗಿ ಪ್ರತಿಯೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಕನಿಷ್ಠ 4000 ಎಕರೆಗಳಷ್ಟು ಸಾಗುವಳಿ ಭೂಮಿಯನ್ನು ಹೊಂದಿರುವ, ಕನಿಷ್ಠ 5 ಕಿ.ಮೀ ಪರಿಧಿಯನ್ನು ಹೊಂದಿರುವ, ಕನಿಷ್ಠ 600 ಕುಟುಂಬಗಳನ್ನು ಹೊಂದಿರುವ ಗ್ರಾಮಗಳನ್ನು ಒಳಗೊಂಡಿರತ್ತದ್ದು. ➢ ಸಾಮಾನ್ಯವಾಗಿ ಒಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಂದು ಸಂಘವನ್ನು ಸ್ಥಾಪಿಸುವುದು. ➢ ಕಡಿಮೆಯೆಂದರೆ ಕನಿಷ್ಟ ರೂ.20.00 ಲಕ್ಷಗಳಷ್ಟು ಅಲ್ಪಾವಧಿ ಸಾಲವನ್ನು ನೀಡುವ ಸಾಮರ್ಥ್ಯ ಹೊಂದಿರಬೇಕು. ➢ ಸಂಘಗಳ ಕಾರ್ಯಕ್ಷೇತ್ರವನ್ನು ಅತಿಕ್ರಮ (overlap) ಮೇಲೆ ವ್ಯಾಪಿಸತಕ್ಕದ್ದಲ್ಲ. ➢ ಹೊಸದಾಗಿ ನೊಂದಣಿ ಮಾಡುವ ಅವಶ್ಯಕತೆ ಕಂಡುಬಂದಲ್ಲಿ ಮೇಲ್ಕಂಡ ಮಾರ್ಗಸೂಚಿಗಳನ್ನು ಪಾಲನೆ ಸಾಮರ್ಥ್ಯ ಹೊಂದಿರಬೇಕು ಹಾಗೂ ಕನಿಷ್ಟ ರೂ.2.00 ಲಕ್ಷ ಷೇರು ಹಣ ಸಂಗ್ರಹಿಸಬೇಕು. ➢ ಸಕ್ಷಮ ನಿಬಂಧಕರು ಸಂಘವು ಆರ್ಥಿಕ ಸಬಲತೆಯನ್ನು ಹೊಂದುವ ಬಗ್ಗೆ ಪರಿಶೀಲಿಸತಕ್ಕದ್ದು.

ಸಂಖ್ಯೆ: ಸಿಒ 129 ಸಿಎಲ್ಎಸ್ 2018

(ಬಂಡೆಪ್ಪ ಖಾಶೆಂಪೂರ)
ಸಹಕಾರ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	689
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ರಾಜೇಶ್ ನಾಯಕ್ ಯು. (ಬಂಟ್ವಾಳ)
ಉತ್ತರಿಸಬೇಕಾದ ದಿನಾಂಕ	:	11.07.2018.
ಉತ್ತರಿಸುವ ಸಚಿವರು	:	ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ & ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನಲ್ಲಿ ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಪಡಿತರ ಚೀಟಿಯಲ್ಲಿ ಹೆಸರು ಸೇರ್ಪಡೆ ಮತ್ತು ರದ್ದತಿ ಮಾಡಲು ತಾಂತ್ರಿಕ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಈ ರೀತಿಯ ಯಾವುದೇ ತಾಂತ್ರಿಕ ಸಮಸ್ಯೆ ಇರುವುದಿಲ್ಲ. ಆದರೆ ಚುನಾವಣೆ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಈ ಕಾರ್ಯವನ್ನು ಸ್ಥಗಿತಗೊಳಿಸಲಾಗಿತ್ತು.
ಆ)	ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು? (ವಿವರವನ್ನು ನೀಡುವುದು)	ಪಡಿತರ ಚೀಟಿಯಲ್ಲಿ ಹೆಸರು ಸೇರ್ಪಡೆ ಮತ್ತು ರದ್ದತಿ ಇತ್ಯಾದಿ ಮಾರ್ಪಾಡುಗಳ ಸೇವೆಯನ್ನು ಈಗ ಪುನಃ ಆರಂಭಿಸಲಾಗುವುದು.

ಆನಾಸ 165 ಡಿಆರ್‌ಎ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು

ಊ)	ಅಗ್ನಿಶಾಮಕ ಠಾಣೆಯ ನಿರ್ಮಾಣದಲ್ಲಿ ಆಗಿರುವ ಲೋಪದೋಷಗಳ ಕುರಿತು ಅಗ್ನಿಶಾಮಕ ಇಲಾಖೆಯವರು ಮೇಲಾಧಿಕಾರಿಗಳಿಗೆ ವರದಿ ಮಾಡಿದ್ದಾರೆಯೇ?	ಅಗ್ನಿಶಾಮಕ ಠಾಣೆ ನಿರ್ಮಾಣ ಕಾರ್ಯದಲ್ಲಿ ಕೆಲವೊಂದು ನ್ಯೂನ್ಯತೆಗಳ ಕುರಿತು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಅಧಿಕಾರಿಗಳು ಗುರುತಿಸಿದ್ದು ಈ ನ್ಯೂನ್ಯತೆಗಳನ್ನು ಸರಿಪಡಿಸಿಕೊಡುವಂತೆ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ರವರನ್ನು ಕೋರಲಾಗಿದೆ.
ಋ)	ಹಾಗಿದ್ದಲ್ಲಿ ಸಂಬಂಧಪಟ್ಟ ಅಭಿಯಂತರರ ಮೇಲೆ ಕ್ರಮವನ್ನು ಕೈಗೊಳ್ಳಲಾಗಿದೆಯೇ?	ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.
ಎ)	ಹಾಗಿಲ್ಲದಿದ್ದಲ್ಲಿ ಅವರ ಮೇಲೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?	ಅನ್ವಯಿಸುವುದಿಲ್ಲ

ಸಂಖ್ಯೆ: ಒಇ 134 ಕಅಸೇ 2018

(ಡಾ॥ ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 308
2. ವಿಧಾನ ಸಭಾ ಸದಸ್ಯರ ಹೆಸರು : ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)
3. ಉತ್ತರಿಸುವ ದಿನಾಂಕ : 11-07-2018
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನಿಪ್ಪಾಣಿ ನಗರದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣ ಕಾರ್ಯ ನಡೆಯುತ್ತಿದೆಯೇ?	ಹೌದು.
ಆ)	ಈ ಕಾಮಗಾರಿಗಳನ್ನು ಯಾವ ಇಲಾಖೆಯ ಮೂಲಕ ಕೈಗೊಳ್ಳಲಾಗುತ್ತಿದೆ?	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಕೈಗೊಳ್ಳಲಾಗುತ್ತಿದೆ.
ಇ)	ಈ ಅಗ್ನಿಶಾಮಕ ಠಾಣೆಯನ್ನು ಈವರೆಗೆ ಅಗ್ನಿಶಾಮಕ ಇಲಾಖೆಗೆ ಹಸ್ತಾಂತರ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಸ್ತಾಂತರ ಮಾಡಿದ್ದಲ್ಲಿ ಯಾವಾಗ ಮಾಡಲಾಗಿದೆ?	ಹೌದು.
ಈ)	ಹಾಗಿಲ್ಲದಿದ್ದಲ್ಲಿ, ಹಸ್ತಾಂತರ ಮಾಡುವ ಕುರಿತು ಯಾರು, ಯಾರು ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ; ಯಾವಾಗ ಹಸ್ತಾಂತರ ಮಾಡಲಾಗುವುದು?	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಅಧಿಕಾರಿಗಳು ಈ ಕಟ್ಟಡವನ್ನು ಹಸ್ತಾಂತರಿಸಿಕೊಳ್ಳುವಂತೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯನ್ನು ಕೋರಿರುತ್ತಾರೆ. ಇಲಾಖಾ ಅಧಿಕಾರಿಗಳು ಕಟ್ಟಡವನ್ನು ಪರಿಶೀಲಿಸಿದಾಗ ಕೆಲವೊಂದು ನ್ಯೂನ್ಯತೆಗಳಿರುವುದು ಕಂಡು ಬಂದಿದ್ದು, ಅವುಗಳನ್ನು ಸರಿಪಡಿಸಲು ನಿಗಮದ ಕಾರ್ಯಪಾಲಕ ಅಭಿಯಂತರರಿಂದ ಗುತ್ತಿಗೆದಾರರಿಗೆ ತಿಳಿಸಲಾಗಿರುತ್ತದೆ. ಈ ನ್ಯೂನ್ಯತೆಗಳನ್ನು ಸರಿಪಡಿಸಿದ ನಂತರ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ರವರಿಂದ ಕಟ್ಟಡವನ್ನು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಹಸ್ತಾಂತರಿಸಬೇಕಾಗುತ್ತದೆ.
ಉ)	ಈ ಕಾಮಗಾರಿಗೆ ಕಳಪೆ ಗುಣಮಟ್ಟದ ಸಾಮಾಗ್ರಿಗಳನ್ನು ಬಳಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರವು ಯಾವ ಕ್ರಮವನ್ನು ಅನುಸರಿಸುವುದು?	ಕಾಮಗಾರಿಯಲ್ಲಿ ಕಳಪೆ ಗುಣಮಟ್ಟದ ಸಾಮಾಗ್ರಿಗಳನ್ನು ಬಳಸಿರುವ ಬಗ್ಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ. ಆದರೆ, ಕಾಮಗಾರಿಯಲ್ಲಿ ಕೆಲವೊಂದು ನ್ಯೂನ್ಯತೆಗಳು ಇರುವುದನ್ನು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಹುಬ್ಬಳ್ಳಿ ವಲಯ ರವರು ವರದಿ ನೀಡಿದ್ದರ ಹಿನ್ನೆಲೆಯಲ್ಲಿ ಈ ನ್ಯೂನ್ಯತೆಗಳನ್ನು ಶೀಘ್ರವಾಗಿ ಸರಿಪಡಿಸಿಕೊಡುವಂತೆ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ರವರನ್ನು ಕೋರಲಾಗಿದೆ.

		ಭೂಸ್ವಾಧೀನ ಕಾಯ್ದೆಯನುಸಾರ ಭೂಸ್ವಾಧೀನಾಧಿಕಾರಿಗಳು ದಿನಾಂಕ 02.02.2015 ರಲ್ಲಿ ಒಟ್ಟಾರೆ ರೂ.718.08 ಲಕ್ಷಗಳನ್ನು ಪಾವತಿಸಲು ಕೋರಿದ್ದರು. ಈ ಸಂಬಂಧ ಹೆಚ್ಚುವರಿ ಮೊತ್ತವನ್ನು ಭರಣ ಮಾಡಲು ದಿನಾಂಕ 3.7.2015ರಲ್ಲಿ ಪೌರಾಡಳಿತ ನಿರ್ದೇಶಕರಿಗೆ ಕೋರಲಾಗಿತ್ತು. • ಈ ಮಧ್ಯೆ ಮುಖ್ಯಾಧಿಕಾರಿಗಳು, ಪುರಸಭೆ, ಬಾಗೇಪಲ್ಲಿ ಇವರು ದಿನಾಂಕ 1.4.2015 ರಂದು ಸಂಬಂಧಪಟ್ಟ ರೈತರೊಂದಿಗೆ ಚರ್ಚಿಸಿ, ಪ್ರತಿ ಎಕರೆಗೆ ರೂ.30 ಲಕ್ಷಗಳನ್ನು ನೀಡಲು ರೈತರು ಒಪ್ಪಿರುವುದಾಗಿ ತಿಳಿಸಿ, ಅದರಂತೆ ಭೂಸ್ವಾಧೀನ ವೆಚ್ಚವು ಸುಮಾರು ರೂ.300 ಲಕ್ಷಗಳು ಆಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದುದರಿಂದ, ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಿ, ಮಂಡಳಿವತಿಯಿಂದ ಪಾವತಿಸಲಾಗಿದ್ದ ರೂ.211.57 ಲಕ್ಷಗಳ ಮೊತ್ತವನ್ನು ಹಿಂದಿರುಗಿಸಲು ದಿನಾಂಕ 13.8.2015 ರಲ್ಲಿ ಮುಖ್ಯಾಧಿಕಾರಿಗಳು, ಪುರಸಭೆ, ಬಾಗೇಪಲ್ಲಿ ಇವರು ಭೂಸ್ವಾಧೀನಾಧಿಕಾರಿಗಳಿಗೆ ಪತ್ರ ಬರೆದುಕೋರಿದ್ದರು. ಅದರಂತೆ, ಭೂಸ್ವಾಧೀನಾಧಿಕಾರಿಗಳು, ಚಿಕ್ಕಬಳ್ಳಾಪುರ ರವರು ಆಡಳಿತಾತ್ಮಕ ವೆಚ್ಚ, ಪತ್ರಿಕಾ ಪ್ರಕಟಣೆ ವೆಚ್ಚ ಕಡಿತಗೊಳಿಸಿ ರೂ.139.76 ಲಕ್ಷಗಳನ್ನು ಮಂಡಳಿಗೆ ದಿನಾಂಕ 7.10.2016 ರಲ್ಲಿ ಹಿಂದಿರುಗಿಸಿರುತ್ತಾರೆ. • ಪರಿಷ್ಕೃತ ಅಂದಾಜು ಪಟ್ಟಿಗೆ ಸರ್ಕಾರದಿಂದ ಅನುಮೋದನೆ ಪಡೆಯಲು ಮಂಡಳಿಯ 274ನೇ ಸಭೆಯಲ್ಲಿ ಚರ್ಚಿಸಿದ್ದು, ಸಭೆಯಲ್ಲಿ ಕಡಿಮೆ ವಿಸ್ತೀರ್ಣದಲ್ಲಿ ನೂತನ ತಂತ್ರಜ್ಞಾನ ಬಳಸಿಕೊಂಡು ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಿಸಲು ನಿರ್ಧರಿಸಿದ ಕಾರಣ, ನೂತನ ತಂತ್ರಜ್ಞಾನಕ್ಕೆ ಅಗತ್ಯವಿರುವ 3 ಎಕರೆಜಮೀನನ್ನು ಹಸ್ತಾಂತರಿಸಲು ಪುರಸಭೆಗೆ ತಿಳಿಸಲಾಗಿರುತ್ತದೆ. ದಿನಾಂಕ 3-1-2017 ರಂದು ಜಿಲ್ಲಾಧಿಕಾರಿಗಳು, ಮಾನ್ಯ ಶಾಸಕರು ಸ್ಥಳೀಯ ಸಂಸ್ಥೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, 3 ಎಕರೆ ಜಮೀನನ್ನು ಸರ್ಕಾರದ ನಿಯಮಾವಳಿಗಳ ಅನುಸಾರ ಖರೀದಿಸಲು ಉದ್ದೇಶಿಸಿದ್ದು, ಭೂಸ್ವಾಧೀನ ಪ್ರಸ್ತಾವನೆಯನ್ನು ತಹಸೀಲ್ದಾರ್, ಬಾಗೇಪಲ್ಲಿ ತಾಲ್ಲೂಕು ಇವರಿಂದ ದಿನಾಂಕ 29.05.2018ರಂದು ಉಪ-ವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ಜಮೀನಿನ ಚೆಕ್ಕುಬಂದಿ ಮತ್ತು ನಕ್ಷೆಗಳನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ. ಪುರಸಭೆಯಿಂದ ಜಮೀನನ್ನು ಹಸ್ತಾಂತರಿಸಿದ್ದಲ್ಲಿ ಕ್ರಮವಹಿಸಲಾಗುವುದು.

ನಅಇ 50 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಇ	ಬಂದಿದ್ದಲ್ಲಿ, ಡಿ.ಪಿ.ಆರ್.ನಲ್ಲಿ ಕೈಬಿಟ್ಟಿರುವ ಪ್ರದೇಶಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಬಾಗೇಪಲ್ಲಿ ಪಟ್ಟಣದ ಒಳಚರಂಡಿ ಯೋಜನಾ ವರದಿಯನ್ನು 2010–11ರಲ್ಲಿ ತಯಾರಿಸಲಾಗಿದ್ದು, ಅಂದಾಜು ಪಟ್ಟಿಯನ್ನು ತಯಾರಿಸುವಾಗ ಅಭಿವೃದ್ಧಿ ಹೊಂದಿರುವ ಪ್ರದೇಶಗಳನ್ನು ಮಾತ್ರ ಪರಿಗಣಿಸಿ, ಸದರಿ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಅನುವು ಮಾಡಲಾಗಿತ್ತು. ಪ್ರಸ್ತುತ ಪಟ್ಟಣದಲ್ಲಿ ಕೆಲವು ಹೊಸದಾಗಿ ಬಡಾವಣೆಗಳು ಅಭಿವೃದ್ಧಿಯಾಗಿರುವುದರಿಂದ ಅನುಮೋದಿತ ಯೋಜನಾ ವರದಿಯಲ್ಲಿ ಬಿಟ್ಟು ಹೋಗಿರುವ ಸ್ಥಳಗಳಲ್ಲಿ ಹಾಗು ಹೊಸದಾಗಿ ಅಭಿವೃದ್ಧಿಯಾಗಿರುವ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಮತ್ತು ನೂತನ ಮಾದರಿಯ ಮಲಿನ ನೀರಿನ ಶುದ್ಧೀಕರಣ ಘಟಕವನ್ನು ನಿರ್ಮಿಸಲು ಸ್ಥಳೀಯ ಸಂಸ್ಥೆಯ ಕೋರಿಕೆಯ ಮೇರೆಗೆ ರೂ.2770 ಲಕ್ಷಗಳ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿದ್ದು ಸರ್ಕಾರದ ಹಂತದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ.
ಈ	ಒಳಚರಂಡಿ ಕಾಮಗಾರಿ ಪೂರ್ಣಗೊಳ್ಳದೇ ಇರುವ ಕಾರಣ ಇತರೆ ಅನುದಾನದಲ್ಲಿ ಪಟ್ಟಣದ ರಸ್ತೆಗಳ ಅಭಿವೃದ್ಧಿ ಮಾಡಲು ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ನಗರ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಆಯೋಗಗಳ ಅನುದಾನ, ನಗರೋತ್ಥಾನ ಯೋಜನೆ ಮತ್ತು ಇತರೆ ಅನುದಾನಗಳನ್ನು ಒದಗಿಸಲಾಗುತ್ತಿದೆ. ಸದರಿ ಅನುದಾನಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಿದೆ.
ಉ	ಈ ಒಳಚರಂಡಿ ನೀರಿನ ಶುದ್ಧೀಕರಣಘಟಕ ಸ್ಥಾಪಿಸಲು ಜಮೀನು ಪಡೆಯಲಾಗಿದೆಯೇ? ಇಲ್ಲವಾದಲ್ಲಿ ಕಾರಣಗಳೇನು?	ಇಲ್ಲ. • ಅನುಮೋದಿತ ಬಾಗೇಪಲ್ಲಿ ಪಟ್ಟಣದ ಒಳಚರಂಡಿ ಯೋಜನೆ ಅಂದಾಜು ಪಟ್ಟಿಯಲ್ಲಿ4.3 ಎಂ.ಎಲ್.ಡಿ. ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಿಸಲು ಉದ್ದೇಶಿಸಿದ್ದರಿಂದ, ಭೂಸ್ವಾಧೀನ ವೆಚ್ಚ ರೂ.96 ಲಕ್ಷಗಳಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಆದರೆ ಭೂಸ್ವಾಧೀನಾಧಿಕಾರಿಗಳ ಕೋರಿಕೆಯ ಮೇರೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಯೋಜನೆಯನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ಭೂಸ್ವಾಧೀನ ಪ್ರಕ್ರಿಯೆಗೆ ಮಂಡಳಿವತಿಯಿಂದ ರೂ.211.57 ಲಕ್ಷಗಳನ್ನು ಪಾವತಿಸಲಾಗಿತ್ತು. • ಈ ಯೋಜನೆಯಡಿಯಲ್ಲಿ ಆಂತರಿಕ ಮತ್ತು ಮುಖ್ಯ ಕೊಳವೆ ಮಾರ್ಗದ ಕಾಮಗಾರಿಗಳನ್ನು ವಿವಾದ ಮುಕ್ತ ರಸ್ತೆಗಳಲ್ಲಿ ಸುಮಾರು 50 ಕಿ.ಮೀ. ನಷ್ಟು ಕೊಳವೆ ಮಾರ್ಗವನ್ನು ಕೈಗೊಂಡು ದಿನಾಂಕ 25.6.2015 ರಂದು ಪೂರ್ಣಗೊಳಿಸಲಾಗಿದ್ದು, ಸದರಿ ಟೆಂಡರ್ ಗುತ್ತಿಗೆಯನ್ನು ಈಗಾಗಲೇ ಮಂಡಳಿಯ 272ನೇ ಸಭೆಯಲ್ಲಿ ಮಂಡಿಸಿ ಗುತ್ತಿಗೆಯನ್ನು ಪೂರ್ವಾನ್ವಯವಾಗುವಂತೆ ದಿನಾಂಕ 17.06.2016 ರಂದು ಮುಕ್ತಾಯ ಮಾಡಲಾಗಿದ್ದರೂ 'ಸಹಾ ಮಲಿನ ನೀರಿನ ಶುದ್ಧೀಕರಣ ಘಟಕದ ನಿರ್ಮಾಣಕ್ಕೆ ಅಗತ್ಯವಿರುವ ಜಮೀನನ್ನು ಮಂಡಳಿಗೆ ಹಸ್ತಾಂತರವಾಗಿರುವುದಿಲ್ಲ. • ಸದರಿ ಉದ್ದೇಶಿತ ಮಲಿನ ನೀರು ಶುದ್ಧೀಕರಣ ಘಟಕಕ್ಕೆ 10 ಎಕರೆ 23 ಗುಂಟೆ ಜಮೀನನ್ನು ಹಸ್ತಾಂತರಿಸಿಕೊಳ್ಳಲು 6(1) ಅಧಿಸೂಚನೆಯನ್ನು ಹೊರಡಿಸಲಾಗಿತ್ತು, ಆದರೆ ನೂತನ

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ. ಎಸ್.ಎನ್. ಸುಬ್ಬಾರೆಡ್ಡಿ (ಬಾಗೇಪಲ್ಲಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	339
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಹಾಗೂ ವಸತಿ ಸಚಿವರು
ಉತ್ತರಿಸಬೇಕಾದ ದಿನಾಂಕ	:	11.07.2018

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬಾಗೇಪಲ್ಲಿ ಪಟ್ಟಣಕ್ಕೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಒಳಚರಂಡಿ ಸಂಪರ್ಕ ಕಲ್ಪಿಸಲು ಅನುದಾನ ಬಿಡುಗಡೆ ಮಾಡಲಾಗಿದೆಯೇ; ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ;</td><td>ಹೌದು.
ಬಾಗೇಪಲ್ಲಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ರೂ.1779.60 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರದಿಂದ ಈ ಕೆಳಕಂಡ ಆರ್ಥಿಕ ಮಾದರಿಯಂತೆ ದಿನಾಂಕ 8.11.2011ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ:

<table><tr><th></th><th>ಆರ್ಥಿಕ ಮಾದರಿ (ರೂ. ಲಕ್ಷಗಳಲ್ಲಿ)</th><th>ಬಿಡುಗಡೆಯಾಗಿರುವ ಮೊತ್ತ (ರೂ. ಲಕ್ಷಗಳಲ್ಲಿ)</th></tr><tr><td>ಸರ್ಕಾರದ ಅನುದಾನ (75%)</td><td>1334.70</td><td>1061.65</td></tr><tr><td>ಆರ್ಥಿಕ ಸಂಸ್ಥೆಗಳಿಂದ ಸಾಲ (20%)</td><td>355.92</td><td>355.92</td></tr><tr><td>ಸ್ಥಳೀಯ ಸಂಸ್ಥೆಯ ಪಾಲು (5%)</td><td>88.98</td><td>83.98</td></tr><tr><td>ಒಟ್ಟು</td><td>1779.60</td><td>1501.55</td></tr></table>
ಬಾಗೇಪಲ್ಲಿ ಪಟ್ಟಣದಲ್ಲಿ ಅನುವು ಮಾಡಲಾಗಿರುವ 54.50 ಕಿ.ಮೀ. ಉದ್ದದ ಆಂತರಿಕ ಮತ್ತು ಮುಖ್ಯ ಹೊರ ಹರಿವು ಕೊಳವೆ ಮಾರ್ಗಗಳಲ್ಲಿ, 50 ಕಿ.ಮೀ. ಉದ್ದದ ಕೊಳವೆ ಮಾರ್ಗಗಳನ್ನು ಅಳವಡಿಸಲಾಗಿದೆ. ಹಾಗೂ 1908 ಸಂಖ್ಯೆ ಆಳುಗುಂಡಿಗಳ ಪೈಕಿ 1752 ಸಂಖ್ಯೆ ಆಳು ಗುಂಡಿಗಳನ್ನು ನಿರ್ಮಿಸಲಾಗಿದೆ.
ಅಲ್ಲದೇ, 8 ಮೀ ವ್ಯಾಸದ ವೆಟ್‌ವೆಲ್ ಮತ್ತು 4.30 ಎಂ.ಎಲ್.ಡಿ. ಸಾಮರ್ಥ್ಯದಮಲ್ಲಿನ ನೀರಿನ ಶುದ್ಧೀಕರಣ ಘಟಕ ನಿರ್ಮಿಸಲು ಹಾಗು ಇತರೆ ಪೂರಕ ಕಾಮಗಾರಿಗಳನ್ನು ನಿರ್ಮಿಸಲು ಈ ಯೋಜನೆಯಡಿಯಲ್ಲಿ ಅನುವು ಮಾಡಲಾಗಿದ್ದರೂ ಸಹ ಈ ಕಾಮಗಾರಿಗಳಿಗೆ ಅಗತ್ಯವಿರುವ ಜಮೀನನ್ನು ಸ್ಥಳೀಯ ಸಂಸ್ಥೆ ಮಂಡಳಿಗೆ ಈವರೆವಿಗೂ ಹಸ್ತಾಂತರಿಸದ ಕಾರಣ ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ.</td></tr>
<tr><td>ಆ</td><td>ಬಾಗೇಪಲ್ಲಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಗೆ ತಯಾರಿಸಿರುವ ಡಿ.ಪಿ.ಆರ್.ನಲ್ಲಿ ಕೆಲ ಬೀದಿಗಳನ್ನು ಸೇರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td>ಬಂದಿದೆ.</td></tr>
</table>

		ನಿವೇಶನ ಹಸ್ತಾಂತರವಾಗದಿದ್ದಲ್ಲಿ ಯೋಜನಾ ಪ್ರಾಧಿಕಾರದವರು ಕಟ್ಟಡ ರಚಿಸಲು ತಾಂತ್ರಿಕ ಅನುಮೋದನೆ ನೀಡಲು ಕ್ರಮ ಕೈಗೊಳ್ಳುವುದು ಸಮಂಜಸವಾಗಿರುವುದಿಲ್ಲ. ನಿವೇಶನದಲ್ಲಿ ವಾಸದ ಮನೆ ರಚನೆ ಆದ ನಂತರ ಅಲ್ಲಿಯ ನಿವಾಸಿಗಳು ಬಡಾವಣೆಯ ರಸ್ತೆಗಳನ್ನು ಅಭಿವೃದ್ಧಿ ಪಡಿಸಿ, ಚರಂಡಿ ರಚಿಸಿ, ರಸ್ತೆ ಡಾಂಬರೀಕರಣ ಮಾಡಲು ಮತ್ತು ಮೂಲಭೂತ ಸೌಕರ್ಯ ಒದಗಿಸಲು ಆಗಾಗ ಒತ್ತಾಯಿಸಿದ ಮೇರೆಗೆ ಪ್ರತಿ ವರ್ಷ ಪುರಸಭೆಗೆ ಮನೆ ಕಟ್ಟಡ ತೆರಿಗೆ ಮತ್ತು ಇತರೆ ತೆರಿಗೆಗಳನ್ನು ಪಾವತಿ ಮಾಡಿದ ಕಾರಣ ಪುರಸಭೆ ವತಿಯಿಂದ ಮೂಲಭೂತ ಸೌಕರ್ಯ ಒದಗಿಸುವ ಕೆಲಸ ಆದ್ಯ ಕರ್ತವ್ಯವಾಗಿರುತ್ತದೆ.
(ಇ)	ಹಾಗಿದ್ದಲ್ಲಿ, ಖಾಸಗಿ ರಸ್ತೆ ಅಭಿವೃದ್ಧಿಗೆ ಸರ್ಕಾರದ ಅನುದಾನ ಬಳಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರಿ ಆದೇಶ ಸಂಖ್ಯೆ. ನಅಇ 151 ಎಸ್.ಎಫ್.ಸಿ 2014 ಬೆಂಗಳೂರು ದಿನಾಂಕ 17.03.2015ರಂತೆ ಬಂಟ್ವಾಳ ಪುರಸಭೆಗೆ 2014-15ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಿವೇಚನಾ ನಿಧಿ ಎಸ್.ಎಫ್.ಸಿ ವಿಶೇಷ ಅನುದಾನದಡಿ ರೂ. 500 ಲಕ್ಷ ಮಂಜೂರಾಗಿದ್ದು, ಒಟ್ಟು 52 ಕಾಮಗಾರಿಗಳು ಮಂಜೂರಾಗಿರುತ್ತವೆ. ಕ್ರಿಯಾ ಯೋಜನೆಯು ಸರ್ಕಾರದ ಆದೇಶದ ಪ್ರಕಾರ ಅನುಮೋದನೆಯಾಗಿರುತ್ತದೆ.
(ಈ)	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು? (ವಿವರವನ್ನು ನೀಡುವುದು)	ಈ ಬಗ್ಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ದಕ್ಷಿಣ ಕನ್ನಡ ಇವರು ಸಮಗ್ರ ಮಾಹಿತಿ ನೀಡುವ ಬಗ್ಗೆ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ 15.09.2017ರಂದು ಪತ್ರ ಬರೆದಿರುತ್ತಾರೆ. ಬಡಾವಣೆಯಲ್ಲಿರುವ ನಿವಾಸಿಗಳು 2003ರ ನಂತರ ವಾಸದ ಮನೆಗಳನ್ನು ರಚಿಸಿ ಪುರಸಭೆಗೆ ತೆರಿಗೆ ಪಾವತಿ ಮಾಡುತ್ತಿದ್ದು, ಅಲ್ಲಿಯ ನಿವಾಸಿಗಳು ಸದರಿ ರಸ್ತೆಗಳನ್ನು ಬಳಸುತ್ತಿದ್ದು ಯಾವುದೇ ತಕರಾರುಗಳು 2003 ರಿಂದ 05 ವರ್ಷಗಳ ವರೆಗೆ ಬಾರದ ಕಾರಣ ಸದರಿ ರಸ್ತೆಗಳು ತನ್ನಿಂದ ತಾನೇ ಸಾರ್ವಜನಿಕ ರಸ್ತೆಗಳಾಗಿ ಮಾರ್ಪಾಡಾಗುತ್ತವೆ.

ಸಂಖ್ಯೆ: ನಅಇ 162 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	692
ಸದಸ್ಯರ ಹೆಸರು	**ಶ್ರೀ ರಾಜೇಶ್ ನಾಯಕ್ .ಯು (ಬಂಟ್ವಾಳ)**
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ಪುರಸಭೆಯ ಬಿ.ಮೂಡ ಗ್ರಾಮದ ಸರ್ವೆ ನಂಬರ್ 147, 148, 151, 152, 252 ರಲ್ಲಿ ವಸತಿ ಬಡಾವಣೆಗೆ ಸಂಬಂಧಿಸಿದ 12.84 ಎಕರೆ ಸ್ಥಳದಲ್ಲಿ ಉದ್ಯಾನವನಕ್ಕೆ ಮೀಸಲಿರಿಸಿರುವ 1.28 ಎಕರೆ ಸ್ಥಳವನ್ನು ಪುರಸಭೆಗೆ ಹಸ್ತಾಂತರಿಸಲಾಗಿದೆಯೇ; (ಸಂಪೂರ್ಣ ವಿವರವನ್ನು ನೀಡುವುದು)	ಬಂಟ್ವಾಳ ಪುರಸಭೆಯ ಮುಖ್ಯಾಧಿಕಾರಿಗಳು ಹಸ್ತಾಂತರವಾಗಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ. ನಗರ ಯೋಜನಾ ಸಹಾಯಕ ನಿರ್ದೇಶಕರು, ಮಂಗಳೂರು ಇವರು ವಿನ್ಯಾಸ ನಕ್ಷೆಯನ್ನು ತಾಂತ್ರಿಕವಾಗಿ ಅನುಮೋದಿಸಿರುವುದರಿಂದ ಆಗಿನ ನಗರ ಪಂಚಾಯತ್ ಕಛೇರಿಯಿಂದ ಅನುಮತಿ ಸಂ.32/2003-04 ದಿನಾಂಕ 20.06.2003ರಂತೆ ವಸತಿ ವಿನ್ಯಾಸಕ್ಕೆ ಪರವಾನಗೆ ನೀಡಲಾಗಿದೆ.
(ಆ)	ಸದರಿ ಸ್ಥಳದಲ್ಲಿ ರಸ್ತೆಗೆ ಮೀಸಲಿರಿಸಿದ 4.5 ಎಕರೆ ಪ್ರದೇಶದಲ್ಲಿ ಸರಕಾರದ ಅನುದಾನ ರೂ.27.00ಲಕ್ಷ ಬಳಸಿ ರಸ್ತೆ ಅಭಿವೃದ್ಧಿ ಮಾಡಲಾಗಿದೆಯೇ; (ವಿವರ ನೀಡುವುದು)	ಸದರಿ ಸ್ಥಳದಲ್ಲಿ ರಸ್ತೆಗೆ ಮೀಸಲಿರಿಸಿದ 4.5 ಎಕರೆ ಪ್ರದೇಶದಲ್ಲಿ ಸರ್ಕಾರದ ಅನುದಾನ ರೂ.28.00 ಲಕ್ಷ ಬಳಸಿ ರಸ್ತೆ ಅಭಿವೃದ್ಧಿ ಪಡಿಸಲಾಗಿದೆ. ಬಿ.ಮೂಡ ಗ್ರಾಮದ ತಲಪಾಡಿ ಪ್ರದೇಶದ ಬಳಿ ಸರ್ವೆ ನಂ.147, 148, 152, 252 ಮತ್ತು 151 ರ ಪೈಕಿ 12.84 ಎಕರೆ ಸ್ಥಳದಲ್ಲಿ ಒಟ್ಟು 107 ನಗರ ಯೋಜನಾ ಪ್ರಾಧಿಕಾರ ಮಂಗಳೂರು ಇವರು ನಕ್ಷೆಗೆ ಅನುಮೋದನೆ ನೀಡಿದ್ದು, ನಿಯಮಾವಳಿಯಂತೆ ಬಡಾವಣೆ ರಚಿಸಿರುವುದು ಕಂಡು ಬಂದಿದೆ. ಪ್ರಸ್ತುತ ಬಡಾವಣೆಯಲ್ಲಿ ಬಹಳಷ್ಟು ವಾಸದ ಮನೆ, ವಸತಿ ಸಮುಚ್ಛಯ, ಅಂಗಡಿ ಮಳಿಗೆಗಳು ಸಹ ನಿರ್ಮಾಣವಾಗಿವೆ. ಕಡತಗಳನ್ನು ಪರಿಶೀಲಿಸಿದಾಗ ನಿವೇಶನದಲ್ಲಿ ರಸ್ತೆಗೆ 4.50 ಎಕರೆ ಉದ್ಯಾನವನಕ್ಕೆ 1.28 ಎಕರೆ ವಿಸ್ತೀರ್ಣ ವಿಂಗಡಿಸಿರುವುದು ಕಂಡು ಬರುತ್ತದೆ. ದಿ: 20.06.2013ರ ನಂತರ ನಿವೇಶನಗಳಲ್ಲಿ ಕಟ್ಟಡಗಳನ್ನು ರಚಿಸಲು ಯೋಜನಾ ಪ್ರಾಧಿಕಾರ, ಬಂಟ್ವಾಳರವರು ತಾಂತ್ರಿಕ ಅನುಮೋದನೆ ನೀಡಿದ್ದು, ಅದರ ಪ್ರಕಾರ ಪುರಸಭೆಯಿಂದ ಕಟ್ಟಡ ರಚಿಸಲು ಪರವಾನಗೆ ನೀಡಲಾಗಿದೆ.

		2) Lower Ground Floor 148 Shops 3) Upper Ground Floor 148 Shops 4) First Floor ~~56~~ Show Rooms ಮೇಘಾ ಮಾರ್ಕೆಟ್ ನಿರ್ಮಾಣಕ್ಕೆ ಅಂದಾಜು ಮೊತ್ತ 30.00ಕೋಟಿ ರೂಗಳಿಗೆ ತಯಾರಿಸಲಾಗಿದೆ.
(ಈ)	ಈ ಕಾಮಗಾರಿಯನ್ನು ಕೈಗೊಳ್ಳುಲು ಸರ್ಕಾರವು ವಿಶೇಷ ಅನುದಾನವನ್ನು ಒದಗಿಸುವ ಆಸಕ್ತಿಯನ್ನು ಹೊಂದಿದೆಯೇ ಹಾಗಿದ್ದಲ್ಲಿ ಎಷ್ಟು ಅನುದಾನವನ್ನು ಮಂಜೂರು ಮಾಡಲಾಗುವುದು. (ವಿವರ ನೀಡುವುದು)	ಈ ಕಾಮಗಾರಿಯನ್ನು ಕೈಗೊಳ್ಳಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರಿಂದ ಪ್ರಸ್ತಾವನೆ ಬಂದಲ್ಲಿ ಅನುದಾನದ ಲಭ್ಯತೆ ಅನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

(ಸಂಖ್ಯೆ: ನಅಇ 155 ಜಿಇಎಲ್ 2018)

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	345
ಸದಸ್ಯರ ಹೆಸರು	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	11/7/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ಇಂಡಿ ಪಟ್ಟಣದಲ್ಲಿ ವ್ಯಾಪಾರಸ್ಥರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮೇಘಾ ಮಾರ್ಕೆಟ್ ನಿರ್ಮಾಣ ಮಾಡಲು ಇಂಡಿ ಪುರಸಭೆಗೆ ಜಮೀನು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ರವರ ಆದೇಶ ಸಂಖ್ಯೆ: ಆರ್.ಬಿ/ಎಲ್.ಎನ್.ಡಿ/ಸಿಆರ್/16/2014-15 ದಿನಾಂಕ: /03/2015ರ ಇಂಡಿ ಪಟ್ಟಣದ ಸರ್ಕಾರಿ ಗ್ರಾಮ ಠಾಣ ಜಮೀನಿನ ರಿ.ಸನಂ:626 ಕ್ಷೇತ್ರ ರ ಪೈಕಿ 1ಎಕರೆ .06 ಗುಂಟಾ (4676 ಚ.ಮೀ) ಮಂಜೂರಾಗಿರುತ್ತದೆ.
(ಆ)	ಹಾಗಿದ್ದಲ್ಲಿ, ಸದರಿ ಮೇಘಾ ಮಾರ್ಕೆಟ್ ನಿರ್ಮಾಣ ಮಾಡುವ ವಿಸ್ತೃತ ಯೋಜನಾ ವರದಿಯು ತಯಾರು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ಇದು ಯಾವ ಹಂತದಲ್ಲಿದೆ;	ಸದರಿ ಮೇಘಾ ಮಾರ್ಕೆಟ್ ನಿರ್ಮಾಣ ಮಾಡಲು ಡಿ.ಪಿ.ಆರ್ ತಯಾರಿಸಿ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಜಯಪುರ ರವರಿಂದ ಮಂಜೂರಾತಿ ಪಡೆದುಕೊಂಡಿದ್ದು, ಸದರಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ದಿನಾಂಕ: 04-11-2017 ರಂದು ಸಲ್ಲಿಸಲಾಗಿತ್ತು. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ದಿನಾಂಕ:20-11-2017 ರಂದು ಪತ್ರ ಬರೆದು ಹಣಕಾಸು ಕ್ರೋಢೀಕರಿಸುವ ಕುರಿತು ವಿವರಣೆ ಕೋರಿದ್ದು ಸದರಿ ಯೋಜನೆಗೆ ವಿವಿಧ ಹಣಕಾಸಿನ ಸಂಸ್ಥೆಗಳಿಂದ ಅನುದಾನ ಸಂಗ್ರಹಿಸಿಸಲು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ವಿವಿಧ ಹಣಕಾಸಿನ ಸಂಸ್ಥೆಗಳಿಂದ ಅನುದಾನ ಸಂಗ್ರಹಿಸಲು ಕ್ರಮ ವಹಿಸಲಾಗುತ್ತಿದೆ.

ಅ.ನಂ	ವಿವರ	ಮೊತ್ತ
1	ಕೆ.ಯು.ಐ.ಡಿ.ಎಫ್.ಸಿ ಬೆಂಗಳೂರು 45% ಸಾಲ	13.50
2	ಮಳಿಗೆದಾರರಿಂದ ವಂತಿಕೆ (ಠೇವಣಿ) ಮೊತ್ತ 25%	06.50
3	ಸರಕಾರದಿಂದ ವಿಶೇಷ ಅನುದಾನ	10.00
	ಒಟ್ಟು	30.00

(ಇ)	ಈ ಯೋಜನೆಯ ರೂಪುರೇಷೆಗಳೇನು; ಅದಕ್ಕಾಗಿ ಅವಶ್ಯಕವಿರುವ ಯೋಜನಾ ವೆಚ್ಚ ಎಷ್ಟು;	ಸದರಿ ಡಿ.ಪಿ.ಆರ್‌ಅನ್ವಯ ಇಂಡಿ ಪುರಸಭೆಯ ಮೇಘಾ ಮಾರ್ಕೆಟ್ ನಿರ್ಮಾಣದ ರೂಪರೇಷೆ ವಿವರಗಳು; 1) Basement Car Parking 88 No.

		ತುರ್ತಾಗಿ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ರೂ.350.00 ಲಕ್ಷಗಳು ಅಂದಾಜು ವೆಚ್ಚದ ಕಟ್ಟಡಕ್ಕೆ ಈಗಾಗಲೇ ರೂ. 100.00 ಲಕ್ಷಗಳು ಬಿಡುಗಡೆಯಾಗಿದ್ದು, ಉಳಿದ ರೂ.250.00 ಲಕ್ಷಗಳನ್ನು ಪಟ್ಟಣ ಪಂಚಾಯಿತಿ ವತಿಯಿಂದ ಭರಿಸಲು ಸಾಧ್ಯವಾಗದ ಕಾರಣ ಸರ್ಕಾರದಿಂದ ರೂ.200.00 ಲಕ್ಷಗಳ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುತ್ತದೆ. ಕಟ್ಟಡ ನಿರ್ಮಿಸಲು ನಿವೇಶನ ಮತ್ತು ಅನುದಾನ ಲಭ್ಯತೆಯ ಅನುಗುಣವಾಗಿ ನಿಗದಿತ ಕಾಲಮಿತಿಯಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 161 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	201
ಸದಸ್ಯರ ಹೆಸರು	ಶ್ರೀ ಆರ್. ನರೇಂದ್ರ (ಹನೂರು)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣ ಪಂಚಾಯಿತಿಯಾಗಿ 15 ವರ್ಷಗಳು ಕಳೆದರೂ ಕಛೇರಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಬಂದಿದ್ದಲ್ಲಿ, ಸ್ವಂತ ಕಟ್ಟಡ ಮಂಜೂರು ಮಾಡಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು; (ವಿವರ ನೀಡುವುದು)	ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ 160 ಎಸ್‌ಎಫ್‌ಸಿ 2016, ಬೆಂಗಳೂರು, ದಿನಾಂಕ: 15.06.2016 ರಂದು ಹನೂರು ಪಟ್ಟಣ ಪಂಚಾಯ್ತಿಗೆ ಕೋರಿರುವ ರೂ.350.00 ಲಕ್ಷಗಳ ಅನುದಾನದಲ್ಲಿ ರೂ.100.00 ಲಕ್ಷಗಳನ್ನು ಸ್ವಂತ ಕಟ್ಟಡ ನಿರ್ಮಾಣ ಮಾಡಲು ಬಿಡುಗಡೆ ಮಾಡಲಾಗಿರುತ್ತದೆ.
(ಇ)	ಹನೂರು ಪಟ್ಟಣ ಪಂಚಾಯಿತಿಗೆ ಸ್ವಂತ ಕಟ್ಟಡವನ್ನು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು? (ವಿವರ ನೀಡುವುದು)	ಹನೂರು ಪಟ್ಟಣ ಪಂಚಾಯಿತಿ ನೂತನ ಸ್ವಂತ ಕಛೇರಿಯ ಕಟ್ಟಡ ನಿರ್ಮಾಣಕ್ಕಾಗಿ ತಾಲ್ಲೂಕು ಕಛೇರಿ ಬಳಿ ಇರುವ ಸ.ನಂ. 247 ರಲ್ಲಿ 1 ಎಕರೆ 45 ಸೆಂಟ್ಸ್ ಸರ್ಕಾರಿ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ಉದ್ದೇಶಿತ ಜಾಗದಲ್ಲಿ ಈಗಾಗಲೇ ಹನೂರು ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಸರ್ಕಾರವು ಘೋಷಣೆ ಮಾಡಿರುವುದರಿಂದ ಸದರಿ ನಿವೇಶನದಲ್ಲಿ ನೂತನ ತಾಲ್ಲೂಕು ಕಛೇರಿ ಕಟ್ಟಡಗಳ ಸಮುಚ್ಛಯ ನಿರ್ಮಾಣ ಮಾಡಲು ಈ ಜಮೀನನ್ನು ಕಾಯ್ದಿರಿಸಿ ತೀರ್ಮಾನಿಸಲಾಗಿರುತ್ತದೆ. ಹನೂರು ಪಟ್ಟಣ ಪಂಚಾಯಿತಿಯ ಆಡಳಿತ ಕಛೇರಿ ಕಟ್ಟಡ ನಿರ್ಮಾಣಕ್ಕೆ ಜಮೀನು ಲಭ್ಯತೆ ಇಲ್ಲದೆ ಇರುವುದರಿಂದ ಬೇರೆ ಸರ್ಕಾರಿ ಜಮೀನನ್ನು ಗುರುತಿಸಿ ಆಡಳಿತ ಕಛೇರಿ ನಿರ್ಮಿಸಲು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಆರ್. ನರೇಂದ್ರ (ಹನೂರು),
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 203
ಉತ್ತರಿಸಬೇಕಾದವರು : ನಗರಾಭಿವೃದ್ಧಿ ಹಾಗೂ ವಸತಿ ಸಚಿವರು
ಉತ್ತರಿಸಬೇಕಾದ ದಿನಾಂಕ : 11-07-2018

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ (ಯು.ಜಿ.ಡಿ) ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಹಾಗಿದ್ದಲ್ಲಿ, ಹನೂರು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು;	ಚಾಮರಾಜನಗರ ಜಿಲ್ಲೆ ಹನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಒಳಚರಂಡಿ (ಯುಜಿಡಿ) ವ್ಯವಸ್ಥೆ ಕಲ್ಪಿಸುವ ಪ್ರಸ್ತಾವನೆಗೆ ವಿವರವಾದ ಯೋಜನಾ ವರದಿ ತಯಾರಿಸಲು ಸರ್ವೆ ಮಾಡುವ ಸಲುವಾಗಿ ರೂ.12.00 ಲಕ್ಷಗಳನ್ನು ದಿನಾಂಕ 03-02-2017 ರಂದು ಮಂಡಳಿಗೆ ಪಾವತಿಸಿರುತ್ತದೆ. ಅದರಂತೆ ಸರ್ವೆ ಕಾರ್ಯ ಕೈಗೊಂಡು ವಿವರವಾದ ಅಂದಾಜು ಪಟ್ಟಿಯನ್ನು ರೂ. 60.65 ಕೋಟಿಗೆ ತಯಾರಿಸಲಾಗಿದೆ. ಸರ್ಕಾರವು ಮುಂದಿನ 3 ವರ್ಷಗಳವರೆಗೆ ಯಾವುದೇ ಹೊಸ ಯೋಜನೆಯನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಬಾರದೆಂದು ಏಪ್ರಿಲ್ 2018ರಲ್ಲಿ ಸೂಚಿಸಿರುವ ಪ್ರಯುಕ್ತ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ.
ಇ	ಒಳಚರಂಡಿ ವ್ಯವಸ್ಥೆಯನ್ನು ಮಂಜೂರು ಮಾಡಿ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

ನಅಇ 50 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

(ಆ)	ಹಾಗಿದ್ದಲ್ಲಿ, ಪುರಸಭೆಯ ಅಭಿವೃದ್ಧಿ ಪ್ರಾಧಿಕಾರದ ನೀತಿಯಲ್ಲಿ ಸರಳೀಕರಣ ಮಾಡಲು. ಅವಕಾಶವಿದೆಯೇ? ಇದ್ದರೆ , ಈ ಬಗ್ಗೆ ಸರ್ಕಾರದ ನಿಲುವೇನು.	ಮೇಲ್ಕಂಡ ಸುತ್ತೋಲೆ ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ, ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿದ್ದು, ಅಕ್ರಮ-ಸಕ್ರಮ ಯೋಜನೆಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಈ ಹಂತದಲ್ಲಿ ಇಂತಹ ಪ್ರಕರಣಗಳ ಕುರಿತು ಕ್ರಮಕೈಗೊಳ್ಳಲು ಅವಕಾಶವಿರುವುದಿಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯ ನೀಡಿರುತ್ತದೆ. ಪ್ರಸ್ತುತದಲ್ಲಿ, ಸದರಿ ಸುತ್ತೋಲೆಗಳ ಕುರಿತು ಅಡ್ವೋಕೇಟ್ ಜನರಲ್ ಇವರ ಅಭಿಪ್ರಾಯ ಕೋರಲಾಗಿದೆ.

ಸಂಖ್ಯೆ: ನಅಇ 160 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	632
ಸದಸ್ಯರ ಹೆಸರು	ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
(ಅ)	ಉಡುಪಿ ಜಿಲ್ಲೆಯ ಕಾಪು ಪುರಸಭೆ ವ್ಯಾಪ್ತಿಯಲ್ಲಿ ಬಡವರು, ಮಧ್ಯಮ ವರ್ಗದವರು ಮನೆಗಳನ್ನು ನಿರ್ಮಿಸಲು ಪರವಾನಿಗೆ ಪಡೆಯುವುದು ತುಂಬಾ ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾಪು ಪಟ್ಟಣಕ್ಕೆ ಸರ್ಕಾರವು ದಿ:30-03-2016 ರಂದು ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿದ್ದು ಸದರಿ ಪ್ರದೇಶದಲ್ಲಿನ ಅಭಿವೃದ್ಧಿಗಳಿಗೆ ಕಾಪು ಯೋಜನಾ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಕಟ್ಟಡ ಪರವಾನಿಗೆಯನ್ನು ಕರ್ನಾಟಕ ಪೌರಕಾಯ್ದೆ, 1964ರನ್ವಯ ಪುರಸಭೆಯಿಂದ ನೀಡಬೇಕಾಗಿದ್ದು, ಪುರಸಭೆಯಿಂದ ಕಟ್ಟಡ ಪರವಾನಿಗೆ ನೀಡಲು ಕೆ.ಟಿ.ಸಿ.ಪಿ. ಕಾಯ್ದೆ, 1961ರಡಿಯಲ್ಲಿ ಕಾಪು ನಗರ ಯೋಜನಾ ಪ್ರಾಧಿಕಾರದಿಂದ ತಾಂತ್ರಿಕ ಅಭಿಪ್ರಾಯ ಪಡೆಯಬೇಕಾಗಿರುತ್ತದೆ. ಕಾಪು ಸ್ಥಳೀಯ ಯೋಜನಾ ಪ್ರದೇಶದ ಘೋಷಣೆಯ ಪೂರ್ವದಲ್ಲಿ ಭೂ ಪರಿವರ್ತನೆಗೊಂಡ ಜಮೀನುಗಳಿಗೆ ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಅನುಮೋದನೆ ಪಡೆದಿರುವ ವಿನ್ಯಾಸಗಳಲ್ಲಿನ ನಿವೇಶನಗಳಿಗೆ ಕಟ್ಟಡ ಪರವಾನಿಗೆ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಲು ಯಾವುದೇ ನಿರ್ಬಂಧವಿರುವುದಿಲ್ಲ ಆದರೆ ದಿನಾಂಕ: 08-12-1976ರ ನಂತರ ವಿನ್ಯಾಸ ನಕ್ಷೆ ಅನುಮೋದನೆ ಪಡೆಯದೇ ಅನಧಿಕೃತವಾಗಿ ವಿಭಜಿಸಿ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದಿರುವ ನಿವೇಶನಗಳಿಗೆ ಕಟ್ಟಡ ಪರವಾನಗಿ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಲು ಅವಕಾಶವಿರುವುದಿಲ್ಲ. ದಿನಾಂಕ :04-05-2017ರ ಸುತ್ತೋಲೆಯಲ್ಲಿ ತಾಂತ್ರಿಕ ಅಭಿಪ್ರಾಯ ನೀಡುವ ಕುರಿತು ಅಗತ್ಯ ನಿರ್ದೇಶನ ನೀಡಲಾಗಿರುತ್ತದೆ. ಸುತ್ತೋಲೆ ಅನುಷ್ಠಾನದಲ್ಲಿ ಸಮಸ್ಯೆಗಳನ್ನು ವಿವರಿಸಿ ಕೆಲವು ಪ್ರಾಧಿಕಾರಗಳು ಸ್ಪಷ್ಟೀಕರಣ, ಮಾರ್ಗದರ್ಶನವನ್ನು ನೀಡುವಂತೆ ಕೋರಿದ್ದು ಹಾಗೂ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರಿಂದ ಮನವಿಗಳು ಸ್ವೀಕೃತವಾಗಿವೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	631
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ. ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ	:	11.07.2018.
ಉತ್ತರಿಸುವ ಸಚಿವರು	:	ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ & ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	2017-18ನೇ ಸಾಲಿನಲ್ಲಿ ಅನಿಲಭಾಗ್ಯ ಯೋಜನೆ ಜಾರಿಗೆ ತಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ,ರಾಜ್ಯದಲ್ಲಿಎಸ್.ಸಿ/ ಎಸ್.ಟಿ. ಜನಾಂಗದವರನ್ನು ಹೊರತುಪಡಿಸಿ ಇತರೇ ಜನಾಂಗದವರಿಗೆ ಅನಿಲ ಭಾಗ್ಯ ಯೋಜನೆ ಒದಗಿಸಲಾಗಿದೆಯೇ;	"ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆ" ಯಡಿಯಲ್ಲಿ 2017-18ನೇ ಸಾಲಿನಲ್ಲಿ 10ಲಕ್ಷ ಫಲಾನುಭವಿಗಳಿಗೆ ಅನಿಲಭಾಗ್ಯ ಸಂಪರ್ಕ ನೀಡಲು ಉದ್ದೇಶಿಸಲಾಗಿತ್ತು. 9,71,612 ಫಲಾನುಭವಿಗಳನ್ನು ಮೊದಲನೆಯ ಹಂತದಲ್ಲಿ ಆಯ್ಕೆ ಮಾಡಲಾಗಿದ್ದು, ಈ ಪೈಕಿ ಒಟ್ಟು 3,30,017 ಫಲಾನುಭವಿಗಳು ಪಂಚಾಯತಿ ಕೇಂದ್ರಗಳಲ್ಲಿ ಮತ್ತು ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇಲಾಖೆಯಿಂದ ನೀಡಲಾದ ಮಾರ್ಗಸೂಚನೆಗಳಂತೆ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಸಮಿತಿಯು ಫಲಾನುಭವಿಗಳ ಆಯ್ಕೆಯಲ್ಲಿ ಶೇಕಡ 25% ಎಸ್.ಸಿ/ಎಸ್.ಟಿ ಫಲಾನುಭವಿಗಳು ಇರಬೇಕೆಂದು ಸೂಚನೆ ನೀಡಲಾಗಿದೆ. ಅದರಂತೆ ಇದುವರೆಗೂ ಅರ್ಜಿ ಸಲ್ಲಿಸಿದ ಫಲಾನುಭವಿಗಳ ವಿವರ ಈ ಕೆಳಕಂಡಂತೆ ಇರುತ್ತದೆ. ವರ್ಗ — ಅರ್ಜಿಗಳ ಸಂಖ್ಯೆ 1) ಎಸ್.ಸಿ — 55,530 2) ಎಸ್.ಟಿ — 25,478 3) ಇತರರು — 2,49,009 **ಒಟ್ಟು** — **3,30,017** ಫಲಾನುಭವಿಗಳು ಮುಖ್ಯ ಮಂತ್ರಿ ಅನಿಲಭಾಗ್ಯ ಯೋಜನೆಯಡಿ ಉಚಿತ ಅನಿಲ ಸಂಪರ್ಕ ಪಡೆಯಲು ಮನವಿಯನ್ನು ಸಲ್ಲಿಸಿರುತ್ತಾರೆ.
ಇ)	ಇದುವರೆಗೂ ಎಷ್ಟು ಜನರಿಗೆ ವಿತರಿಸಲಾಗಿದೆ: ಉಳಿದ ಫಲಾನುಭವಿಗಳಿಗೆ ಯಾವಾಗ ವಿತರಿಸಲಾಗುವುದು?	2017-18ನೇ ಸಾಲಿಗೆ "ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆ"ಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದ್ದ ಸಮಯದಲ್ಲಿ ರಾಜ್ಯ ವಿಧಾನ ಸಭಾ ಚುನಾವಣೆ-2018 ಘೋಷಣೆಯಾಗಿ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆ ಕಾರ್ಯವನ್ನು ಸ್ಥಗಿತಗೊಳಿಸಲಾಗಿರುತ್ತದೆ. 2018-19 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಮುಖ್ಯಮಂತ್ರಿಗಳ ಅನಿಲಭಾಗ್ಯ ಯೋಜನೆಯಡಿ ಆಯ್ಕೆಯಾದ ಅರ್ಹ ಫಲಾನುಭವಿಗಳಿಗೆ ಉಚಿತ ಅನಿಲ ಸಂಪರ್ಕವನ್ನು ವಿತರಿಸಲಾಗುವುದು.

ಆನಾಸ 167 ಡಿಆರ್‌ಎ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

		ಘಟಕದವರೆಗೆ 559 ಮಿ.ಮೀ. ವ್ಯಾಸದ ಕಚ್ಚಾ ನೀರಿನ ಏರುಕೊಳವೆ ಮಾರ್ಗ ಒದಗಿಸಿ, ಅಳವಡಿಸುವುದು (ಉದ್ದ 32.10 ಕಿ.ಮೀ.). 5. ಹಾಲಿ ಜಲಶುದ್ಧೀಕರಣ ಘಟಕದ ಹತ್ತಿರ 5.00 ದಶಲಕ್ಷ ಲೀ. ಸಾಮರ್ಥ್ಯದ ಜಲ ಶುದ್ಧೀಕರಣ ಘಟಕ ನಿರ್ಮಿಸುವುದು. 6. ಪಟ್ಟಣದಲ್ಲಿ ವಿತರಣಾ ವ್ಯವಸ್ಥೆಯನ್ನು ಒದಗಿಸುವುದು ಮತ್ತು ಸಂಪಿನಿಂದ ಮೇಲ್ಮಟ್ಟದ ಜಲಸಂಗ್ರಹಾಗಾರಗಳಿಗೆ ಫೀಡರ್‌ಮೇನ್ ಗಳನ್ನು ಒದಗಿಸಿ, ಅಳವಡಿಸುವುದು. (96.31 ಕಿ.ಮೀ.). 7. 10 ಲಕ್ಷ ಲೀಟರ್ ಸಾಮರ್ಥ್ಯದ (1 ಸಂಖ್ಯೆ), 1 ಲಕ್ಷ ಲೀಟರ್ (2 ಸಂಖ್ಯೆ) ಸಾಮರ್ಥ್ಯದ ಆರ್.ಸಿ.ಸಿ. ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವುದು. 8. ಹಾಲಿ ಇರುವ 9.08 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರ ದುರಸ್ತಿ. 9. ಸ್ಕಾಡಾ ಸಿಸ್ಟಮ್ ಒದಗಿಸುವುದು. 10. ಸದರಿ ಯೋಜನೆಯ ನಿರ್ವಹಣೆ ಮತ್ತು ದುರಸ್ತಿಯನ್ನು 5 ವರ್ಷಗಳ ಅವಧಿಯವರೆಗೆ ನಿರ್ವಹಿಸುವುದು. ಈ ಯೋಜನೆಗೆ ಪ್ರಕಟಣೆ ಸಂಖ್ಯೆ 2522 ದಿನಾಂಕ 08.03.2018 ರಲ್ಲಿ ಟೆಂಡರ್ ಆಹ್ವಾನಿಸಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. **ಆ) ಒಳಚರಂಡಿ ಯೋಜನೆ:** ಪಟ್ಟಣದಲ್ಲಿ 8900 ಸಂಖ್ಯೆಯ ಒಳಚರಂಡಿ ಗೃಹ ಸಂಪರ್ಕಗಳನ್ನು ಒದಗಿಸುವ ಕಾಮಗಾರಿಗೆ ಪ್ರಕಟಣೆ ಸಂಖ್ಯೆ 2335 ದಿನಾಂಕ 16.02.2018 ರಲ್ಲಿ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.
ಇ	ಈ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು; ಯಾವ ಕಾಲಮಿತಿಯೊಳಗೆ ಸಂಪೂರ್ಣಗೊಳಿಸಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?	ಈ ಯೋಜನೆಗಳಿಗೆ ಗುತ್ತಿಗೆದಾರರನ್ನು ನೇಮಿಸಿದ ನಂತರ, ಕಾಮಗಾರಿಗಳನ್ನು ಪ್ರಾರಂಭಗೊಳಿಸಲಾಗುವುದು. ನೀರು ಸರಬರಾಜು ಯೋಜನೆಯನ್ನು 2 ವರ್ಷಗಳ ಅವಧಿಯಲ್ಲಿ ಹಾಗೂ ಒಳಚರಂಡಿ ಗೃಹ ಸಂಪರ್ಕ ಯೋಜನೆಯನ್ನು 1 ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ನಅಇ 44 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ).
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 342
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಹಾಗೂ ವಸತಿ ಸಚಿವರು
ಉತ್ತರಿಸಬೇಕಾದ ದಿನಾಂಕ : 11-07-2018

ಕ್ರ ಸಂ	ಪ್ರಶ್ನೆ	ಉತ್ತರ
ಅ	ಇಂಡಿ ಪಟ್ಟಣಕ್ಕೆ 24x7 ನಿರಂತರ ನೀರು ಸರಬರಾಜು ಯೋಜನೆಯನ್ನು ಹಾಗೂ 8900 ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕವನ್ನು ಕಲ್ಪಿಸುವ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆಯೇ;	ಹೌದು. ಇಂಡಿ ಪಟ್ಟಣಕ್ಕೆ ಟಾಕಳೆ-ಧೂಳಖೇಡ ಬ್ಯಾರೇಜಿನಿಂದ ನಿರಂತರ ಒತ್ತಡಯುಕ್ತ ನೀರು ಪೂರೈಕೆ ಮತ್ತು ನೀರಿನ ಮೂಲ ಸುಧಾರಣೆ ಮಾಡುವ ಯೋಜನೆಯ ರೂ.9049.00 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 07 ಯುಬ್ಲ್ಯೂಎಸ್ 2016, ಬೆಂಗಳೂರು, ದಿನಾಂಕ: 12-01-2018ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇಂಡಿ ಪಟ್ಟಣದಲ್ಲಿ ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕಗಳನ್ನು ಕಲ್ಪಿಸುವ ರೂ.832.00 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 20 ಯುಡಬ್ಲ್ಯೂಎಸ್ 2014, ಬೆಂಗಳೂರು, ದಿನಾಂಕ: 13-12-2017ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
ಆ	ಈ ಯೋಜನೆಯ ರೂಪುರೇಷೆಗಳೇನು; ಈ ಯೋಜನೆಗಳ ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ; ಸದರಿ ಕಾಮಗಾರಿಗಳನ್ನು ಯಾವ ಏಜೆನ್ಸಿ/ ಗುತ್ತಿಗೆದಾರರಿಗೆ ನೀಡಲಾಗಿದೆ;	ಈ ಯೋಜನೆಗಳ ರೂಪುರೇಷೆಗಳು ಈ ಕೆಳಗಿನಂತಿದೆ; **ಅ) <u>ನೀರು ಸರಬರಾಜು ಯೋಜನೆ:</u>** 1. ಟಾಕಳಿ ಧೂಳಖೇಡ ಬ್ಯಾರೇಜ್ ಹತ್ತಿರ ಮೂಲ ಸ್ಥಾವರ ನಿರ್ಮಾಣ. (4 ಮೀ. ವ್ಯಾಸದ ಇನ್‌ಟೇಕ್ ವೆಲ್, 700 ಮಿ.ಮೀ. ವ್ಯಾಸದ ಕನೆಕ್ಟಿಂಗ್ ಪೈಪ್‌ಲೈನ್ (0.2 ಕಿ.ಮೀ.) ಮತ್ತು ಜಾಕ್‌ವೆಲ್ (8 ಮೀ.) ಕಮ್ ಪಂಪ್ ಹೌಸ್ (8 ಮೀ.), ಅಪ್ರೋಚ್ ಬ್ರಿಡ್ಜ್ ಮತ್ತು ಸ್ವಿಚ್ ಗೇರ್ ರೂಂ ನಿರ್ಮಾಣ). 2. ಹೆಚ್‌ಟಿ ವಿದ್ಯುತ್ ಮಾರ್ಗವನ್ನು ಜಾಕ್ ವೆಲ್‌ಗೆ ಒದಗಿಸುವುದು (ಉದ್ದ 18 ಕಿ.ಮೀ.) 3. ಜಾಕ್‌ವೆಲ್‌ನಲ್ಲಿ 315 ಅಶ್ವಶಕ್ತಿಯ ಅಥವಾ ಸೂಕ್ತ ಸಾಮರ್ಥ್ಯದ ಡಿಡಬ್ಲ್ಯೂಟಿ ಪಂಪ್‌ಸೆಟ್ ಒದಗಿಸಿ, ಅಳವಡಿಸುವುದು (2 ಸಂಖ್ಯೆ). 4. ಟಾಕಳಿ ಧೂಳಖೇಡದಲ್ಲಿರುವ ಜಾಕ್‌ವೆಲ್‌ನಿಂದ ಇಂಡಿ ಪಟ್ಟಣದಲ್ಲಿನ ಜಲಶುದ್ಧೀಕರಣ

	ಕಳಪೆಯಾಗಿದ್ದು, ಈಗಾಗಲೇ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಈ	ಈ ಎಲ್ಲಾ ಸಮಸ್ಯೆಗಳನ್ನು ಸರಿಪಡಿಸಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ಒದಗಿಸುವುದು)	ಯೋಜನೆಯ ಜಾಗಗಳು ಲಭ್ಯವಿರುವ ಔಟ್‌ಫಾಲ್ ಕೊಳವೆ ಮಾರ್ಗವನ್ನು ಅಳವಡಿಸುವ ಜೊತೆಗೆ ಎಸ್.ಟಿ.ಪಿ ಕಾಮಗಾರಿ ಸಹ ಡಿಸೆಂಬರ್ 2018 ರಲ್ಲಿ ಭಾಗಶ: ಚಾಲನೆಗೊಳಿಸಲು ಉದ್ದೇಶಿಸಲಾಗಿದೆ. ಬಾಕಿ ಕಾಮಗಾರಿಗಳನ್ನು ಔಟ್‌ಫಾಲ್ ಅಳವಡಿಸುವ ಮಾರ್ಗದ ಜಾಗಗಳನ್ನು ತೆರವುಗೊಳಿಸಿದ ನಂತರ ಸದರಿ ಯೋಜನೆಯನ್ನು ಪೂರ್ಣವಾಗಿ ಚಾಲನೆಗೊಳಿಸಲು ಕ್ರಮವಹಿಸಲಾಗುವುದು.

ನಅಇ 42 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

<table>
<tr><td></td><td></td><td>
<table>
<tr><td>ಪ್ಯಾಕೇಜ್ 4 (ಪಂಪಿಂಗ್ ಮೆಷಿನರಿ)</td><td>ಮೆ॥ ಶುಭೋದಯ ಇಂಜಿನಿಯರ್ಸ್, ಮಂಗಳೂರು</td><td>9 ತಿಂಗಳು (31.03.2018 ರವರೆಗೆ ದಂಡ ಸಹಿತ ಕಾಲಾವಧಿ ವಿಸ್ತರಣೆಯನ್ನು ನೀಡಲಾಗಿರುತ್ತದೆ)</td><td>ದಿನಾಂಕ: 02.05.2016 ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.</td></tr>
</table>
</td></tr>
<tr><td>ಆ</td><td>ಇದುವರೆಗೂ ಕಾಮಗಾರಿ ಪೂರ್ಣಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕಾಮಗಾರಿ ವಿಳಂಬಕ್ಕೆ ಕಾರಣಗಳೇನು ಹಾಗೂ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಮೇಲೆ ಸರ್ಕಾರ ಯಾವ ಕ್ರಮಕ್ಕೈಗೊಂಡಿದೆ; (ವಿವರ ನೀಡುವುದು)</td><td>ಬಂದಿದೆ.
ಕಾಮಗಾರಿಯ ವಿಳಂಬಕ್ಕೆ ಕಾರಣಗಳು ಈ ಕೆಳಗಿನಂತಿವೆ.
<table>
<tr><th>ಪ್ಯಾಕೇಜ್ ವಿವರ</th><th>ಕಾಮಗಾರಿಯ ವಿಳಂಬಕ್ಕೆ ಕಾರಣಗಳು</th></tr>
<tr><td>ಪ್ಯಾಕೇಜ್–1</td><td>ಕೆಲವು ಔಟ್‌ಫಾಲ್ ಕೊಳವೆ ಮಾರ್ಗಗಳನ್ನು (580ಮೀಟರ್ ಉದ್ದ) ಅಳವಡಿಸಲು ಜಾಗಗಳ ಸಮಸ್ಯೆಯಿಂದ ಹಾಗೂ 1 ಸೆಪ್ಟಿಕ್ ಟ್ಯಾಂಕ್ ನಿರ್ಮಿಸಲು ಜಾಗದ ಲಭ್ಯತೆ ಇಲ್ಲದೆ ಮತ್ತು ಗುತ್ತಿಗೆದಾರರು ಸಹ ವಿಳಂಬ ಮಾಡಿರುತ್ತಾರೆ. ಸದರಿ ಕಾಮಗಾರಿಯ ವಿಳಂಬಕ್ಕೆ ಗುತ್ತಿಗೆದಾರರಿಗೆ ಈವರೆಗೂ ರೂ. 45.91 ಲಕ್ಷಗಳ ದಂಡವನ್ನು ವಿಧಿಸಲಾಗಿದೆ.</td></tr>
<tr><td>ಪ್ಯಾಕೇಜ್–2</td><td>1.50 ಕಿ.ಮೀ ಉದ್ದ ಔಟ್ ಫಾಲ್ ಕೊಳವೆ ಮಾರ್ಗವನ್ನು ಅಳವಡಿಸಲು ಜಾಗದ ಸಮಸ್ಯೆಯಿಂದ ಹಾಗೂ ಹಲವು ಕಡೆಗಳಲ್ಲಿ ಜಾಗಗಳ ಲಭ್ಯತೆ ಇಲ್ಲದ್ದರಿಂದ ಮತ್ತು ಗುತ್ತಿಗೆದಾರರು ಸಹ ವಿಳಂಬ ಮಾಡಿರುತ್ತಾರೆ. ಹಿರೇಮಗಳೂರು ಬಳಿಯ ವೆಟ್‌ವೆಲ್‌ಗಾಗಿ ಸ್ಥಳವನ್ನು ಜುಲೈ 2017 ರಲ್ಲಿ ಒದಗಿಸಲಾಗಿದೆ. ಈವರೆಗೂ ರೂ.4.27 ಲಕ್ಷಗಳ ದಂಡವನ್ನು ವಿಧಿಸಲಾಗಿದೆ.</td></tr>
<tr><td>ಪ್ಯಾಕೇಜ್–3</td><td>ಟ್ರಾನ್ಸ್ ಫಾರ್ಮರ್ ಸಾಮರ್ಥ್ಯವನ್ನು 400 ಕೆವಿಎ ಯಿಂದ 600 ಕೆ.ವಿ.ಎಗೆ ಹೆಚ್ಚಿಸಿ ಮೆಸ್ಕಾಂ ಇಲಾಖೆಯಿಂದ ದಿನಾಂಕ:02–01–2018 ರಂದು ತಪಾಸಣೆ ಮಾಡಿ ಅನುಮತಿ ನೀಡಿರುತ್ತಾರೆ. ಹಾಗೂ ದಿ: 07–04–2018 ರಂದು HT Electrical drawingಗೆ ಅನುಮತಿ ನೀಡಿರುತ್ತಾರೆ. ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ. ಸದರಿ ಕಾಮಗಾರಿಯ ವಿಳಂಬಕ್ಕೆ ಗುತ್ತಿಗೆದಾರರಿಗೆ ಈವರೆಗೂ ರೂ.8.91 ಲಕ್ಷಗಳ ದಂಡವನ್ನು ವಿಧಿಸಲಾಗಿದೆ.</td></tr>
<tr><td>ಪ್ಯಾಕೇಜ್–4</td><td>ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ.</td></tr>
</table>
</td></tr>
<tr><td>ಇ</td><td>ಕಾಮಗಾರಿಯಲ್ಲಿ ಮ್ಯಾನ್‌ಹೋಲ್ ಹಾಗೂ ರಿಸೀವಿಂಗ್ ಚೇಂಬರ್ ಮುಚ್ಚಳಗಳು</td><td>ಬಂದಿದೆ.
ಈ ದುರಸ್ಥಿ ಕಾಮಗಾರಿಯನ್ನು ಮೂಲ ಗುತ್ತಿಗೆದಾರರಿಂದಲೇ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ದುರಸ್ಥಿಪಡಿಸಲು ಕ್ರಮ ವಹಿಸಲಾಗುತ್ತಿದೆ.</td></tr>
</table>

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 444

ಉತ್ತರಿಸಬೇಕಾದವರು : ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11.07.2018

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ	ಚಿಕ್ಕಮಗಳೂರು ನಗರದಲ್ಲಿ ಒಳಚರಂಡಿ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ; ಅದರ ಅಂದಾಜು ಮೊತ್ತವೆಷ್ಟು; ಯಾವಾಗ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು;	ಚಿಕ್ಕಮಗಳೂರು ನಗರದ ಒಳಚರಂಡಿ ಯೋಜನೆಯನ್ನು ನವೆಂಬರ್ 2011ರಲ್ಲಿ ಪ್ರಾರಂಭಿಸಲಾಗಿರುತ್ತದೆ. ಅಂದಾಜು ಮೊತ್ತ: ರೂ.5700.00 ಲಕ್ಷಗಳು. ಪರಿಷ್ಕೃತ ಅಂದಾಜು ಮೊತ್ತ ರೂ.8200.00 ಲಕ್ಷಗಳಿಗೆ ದಿನಾಂಕ: 12-03-2018 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಯೋಜನೆಯನ್ನು ಮುಖ್ಯವಾಗಿ ಈ ಕೆಳಗಿನಂತೆ ನಾಲ್ಕು ಭಾಗಗಳನ್ನಾಗಿ ಮಾಡಲಾಗಿದ್ದು, ಅವುಗಳ ಕಾಲಾವಧಿಗಳು ಈ ಕೆಳಗಿನಂತಿವೆ.

ಪ್ಯಾಕೇಜ್ ವಿವರ	ಗುತ್ತಿಗೆದಾರರ ವಿವರ	ಗುತ್ತಿಗೆ ಕರಾರು ಅವಧಿ	ಟೆಂಡರ್ ಕರಾರಿನ ಪ್ರಕಾರ ಪೂರ್ಣಗೊಳಿಸಬೇಕಾದ ದಿನಾಂಕ
ಪ್ಯಾಕೇಜ್ 1 (ವಿತರಣಾ ಜಾಲ)	ಮೆ॥ ಅಭಿರಾಮ್ ಇನ್ಫ್ರಾಪ್ರಾಜೆಕ್ಟ್ಸ್ ಪ್ರೈ ಲಿ., ಹೈದರಾಬಾದ್	24 ತಿಂಗಳು (31.01.2018 ರವರೆಗೆ ದಂಡ ಸಹಿತ ಕಾಲಾವಧಿ ವಿಸ್ತರಣೆಯನ್ನು ನೀಡಲಾಗಿರುತ್ತದೆ)	ದಿನಾಂಕ: 10-11-2013
ಪ್ಯಾಕೇಜ್ 2 (ವಿತರಣಾ ಜಾಲ)	ಶ್ರೀ.ಹೆಚ್.ಕೆ. ಕಾಂತರಾಜು, ಹಾಸನ	18 ತಿಂಗಳು (30.11.2017 ರವರೆಗೆ ದಂಡ ರಹಿತ ಕಾಲಾವಧಿ ವಿಸ್ತರಣೆಯನ್ನು ನೀಡಲಾಗಿರುತ್ತದೆ)	ದಿನಾಂಕ: 10-05-2013
ಪ್ಯಾಕೇಜ್ 3 (ಮಲಿನ ನೀರು ಶುದ್ದೀಕರಣ ಘಟಕ)	ಮೆ॥ ಓಯಸಿಸ್ ಇಪಿಸಿ ಸಲ್ಯೂಶನ್ಸ್, ಅಹಮದಾಬಾದ್	18 ತಿಂಗಳು (15.03.2018 ರವರೆಗೆ ದಂಡ ಸಹಿತ ಕಾಲಾವಧಿ ವಿಸ್ತರಣೆಯನ್ನು ನೀಡಲಾಗಿರುತ್ತದೆ)	ದಿನಾಂಕ: 18.09.2016 ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	690
ಸದಸ್ಯರ ಹೆಸರು	ಶ್ರೀ ರಾಜೇಶ್ ನಾಯಕ್ .ಯು (ಬಂಟ್ವಾಳ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ ಸಂ.	ವಿಷಯ	ಉತ್ತರ
1	ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ಪುರಸಭೆಯಲ್ಲಿ ಹಿರಿಯ ಆರೋಗ್ಯ ನಿರೀಕ್ಷಕರು, ಕಿರಿಯ ಆರೋಗ್ಯ ನಿರೀಕ್ಷಕರು, ಪರಿಸರ ಅಭಿಯಂತರರು ಹಾಗೂ ಇತರೇ ವೃಂದದ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
2	ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಅವಧಿಯೊಳಗೆ ಭರ್ತಿ ಮಾಡಲಾಗುವುದು; (ವಿವರ ನೀಡುವುದು)	ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಒಟ್ಟು **1129** ಗ್ರೂಪ್ 'ಸಿ' ಮತ್ತು 'ಬಿ' ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕೊಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗದಿಂದ ಸ್ವೀಕೃತವಾಗಿರುವ ಆಯ್ಕೆ ಪಟ್ಟಿ ರೀತ್ಯಾ **260** ಹುದ್ದೆಗಳಿಗೆ ನೇಮಕಾತಿ ಆದೇಶಗಳನ್ನು ನೀಡಲಾಗಿರುತ್ತದೆ. ಉಳಿದಂತೆ **869** ಹುದ್ದೆಗಳನ್ನು ನೇಮಕಾತಿ- ಪ್ರಕ್ರಿಯೆ ಲೋಕ ಸೇವಾ ಆಯೋಗದಲ್ಲಿ ಬಾಕಿ ಇದ್ದು, ಅಂತಿಮ ಆಯ್ಕೆಪಟ್ಟಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಪುರಸಭೆಗಳ (ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ ಪೌರಕಾರ್ಮಿಕರ ನೇಮಕಾತಿ)(ವಿಶೇಷ) ನಿಯಮಗಳು 2017ರ ನಿಯಮಗಳ ರೀತ್ಯಾ ನೇರ ನೇಮಕಾತಿ ಕೋಟಾದಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳ ಹಂತದಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸಂಖ್ಯೆ: ನಅಇ 159 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಎಚ್ ಹಾಲಪ್ಪ (ಸಾಗರ).

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 354

ಉತ್ತರಿಸಬೇಕಾದವರು : ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-07-2018

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಶಿವಮೊಗ್ಗ ಜಿಲ್ಲೆ, ಸಾಗರ ನಗರ ಸಭೆಯ ವ್ಯಾಪ್ತಿಯಲ್ಲಿ Sewage treatment plant ನಿರ್ಮಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆಯೇ;	ಸಾಗರ ನಗರದ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/20/ಯುಡಬ್ಲ್ಯೂಎಸ್/2010 ದಿನಾಂಕ 02/03/2010 ರಲ್ಲಿ ರೂ.7100.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯಡಿಯಲ್ಲಿ 9.0 ಎಂಎಲ್.ಡಿ ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣಕ್ಕಾಗಿ ಅನುವು ಮಾಡಲಾಗಿದೆ.
ಆ	ಸದರಿ ಪ್ಲಾಂಟ್ ನಿರ್ಮಿಸಲು ಜಾಗವನ್ನು ಗುರುತಿಸಲಾಗಿದೆಯೇ; ಜಾಗ ಮಂಜೂರಾತಿಯಾಗಿ ವಶಕ್ಕೆ ಪಡೆಯಲಾಗಿದೆಯೇ; (ಪೂರ್ಣ ವಿವರ ಒದಗಿಸುವುದು)	ಹೌದು. ಅನುಮೋದಿತ ಅಂದಾಜಿನಲ್ಲಿ ಮಲಿನ ನೀರು ಶುದ್ಧೀಕರಣ ಘಟಕವನ್ನು ಶಿರವಾಳ ಗ್ರಾಮದ ಸರ್ವೆ ನಂ.43ರಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ ಯೋಜನೆ ಅನುಮೋದನೆಯಾದ ನಂತರ ಸದರಿ ಶುದ್ಧೀಕರಣ ಘಟಕವನ್ನು ನಿರ್ಮಿಸಲು ಸರ್ಕಾರದ ಜಾಗವಾದ ಶಿರವಾಳ ಗ್ರಾಮದಲ್ಲಿ ಸರ್ವೆ ನಂ.46 ರಲ್ಲಿ 3 ಎಕರೆ ಜಾಗವನ್ನು ತಹಸೀಲ್ದಾರ್, ಸಾಗರ ಇವರು ತಮ್ಮ ಪತ್ರ ದಿನಾಂಕ 20.08.2014 ರಲ್ಲಿ ನಗರಸಭೆ, ಸಾಗರ ಇವರಿಗೆ ಹಸ್ತಾಂತರಿಸಿದ್ದು, ನಂತರ ಪೌರಾಯುಕ್ತರು, ನಗರಸಭೆ, ಸಾಗರ ಇವರು ತಮ್ಮ ಪತ್ರ ದಿನಾಂಕ 11.09.2014 ರಲ್ಲಿ ಮಂಡಳಿಗೆ ಹಸ್ತಾಂತರಿಸಿದ ನಂತರ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ವಿವರವಾದ ಉಪ ಅಂದಾಜು ಪಟ್ಟಿಯನ್ನು ರೂ.1404 ಲಕ್ಷಗಳಿಗೆ ತಯಾರಿಸಿ ಮಂಡಳಿಯಿಂದ ದಿನಾಂಕ 27.10.2017ರಲ್ಲಿ ಅನುಮೋದನೆ ನೀಡಲಾಗಿದೆ.
ಇ	ಸದರಿ ಕಾಮಗಾರಿಯನ್ನು ಇದುವರೆವಿಗೂ ಪ್ರಾರಂಭಿಸದಿರಲು ಕಾರಣವೇನು; ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಿಸಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು)	ಈ ಯೋಜನೆಯಡಿಯಲ್ಲಿ 9.00 ಎಂ.ಎಲ್.ಡಿ. ಸಾಮರ್ಥ್ಯದ ಮಲಿನ ನೀರಿನ ಶುದ್ಧೀಕರಣ ಘಟಕ ಕಾಮಗಾರಿಯನ್ನು ಪ್ಯಾಕೇಜ್ ಟೆಂಡರ್ ಮುಖಾಂತರ ದಿನಾಂಕ 14.06.2018 ರಲ್ಲಿ ಮೆ॥ ಜಿ. ಮಸ್ತಾನಯ್ಯ, ಗುತ್ತಿಗೆದಾರರು, ವಿಜಾಪುರ ರವರಿಗೆ ವಹಿಸಲಾಗಿದ್ದು ದಿನಾಂಕ 13.09.2018 ರೊಳಗೆ (15 ತಿಂಗಳು, ಮಳೆಗಾಲ ಸೇರಿದಂತೆ) ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿಯನ್ನು ನಿಗಧಿಪಡಿಸಲಾಗಿರುತ್ತದೆ. ಸದ್ಯದಲ್ಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

ನಅಇ 58 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)

ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 462
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಟಿ.ಡಿ ರಾಜೇಗೌಡ (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ : 11.07.2018.
ಉತ್ತರಿಸುವ ಸಚಿವರು : ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ & ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶೃಂಗೇರಿ-ಕೊಪ್ಪ-ಎನ್.ಆರ್ ಪುರ ತಾಲ್ಲೂಕುಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಆ)	ಹಾಗಿದ್ದಲ್ಲಿ; ನೂತನವಾಗಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ; (ಮಾಹಿತಿ ಒದಗಿಸುವುದು)	2018ರ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶದಂತೆ ಅವಶ್ಯಕತೆಗೆ ಅನುಗುಣವಾಗಿ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಕ್ರಮವಹಿಸಲಾಗುವುದು.
ಇ)	ಕಳೆದ ಮೂರು ವರ್ಷಗಳಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ (ಸಮರ್ಪಕವಾಗಿ) ಕಾರ್ಯನಿರ್ವಹಿಸದೆ ಇರುವ ನ್ಯಾಯಬೆಲೆ ಅಂಗಡಿಗಳು ಯಾವುವು; (ಮಾಹಿತಿ ಒದಗಿಸುವುದು)	ಕಳೆದ ಮೂರು ವರ್ಷಗಳಿಂದ ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳ ನ್ಯಾಯಬೆಲೆ ಅಂಗಡಿಗಳಲ್ಲಿ ಅಸಮರ್ಪಕ ಪಡಿತರ ವಿತರಣೆ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.
ಈ)	ಸಮರ್ಪಕವಾಗಿ ಕಾರ್ಯನಿರ್ವಹಿಸದೆ ಇರುವ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕೈಗೊಂಡಿರುವ ಕ್ರಮವೇನು? (ಮಾಹಿತಿ ಒದಗಿಸುವುದು)	ಅಸಮರ್ಪಕ ಪಡಿತರ ವಿತರಣೆ ಬಗ್ಗೆ ದೂರುಗಳು ಬಂದಲ್ಲಿ ನ್ಯಾಯಬೆಲೆ ಅಂಗಡಿ ವಿರುದ್ಧ ಕ್ರಮವಹಿಸಲಾಗುವುದು.

ಆನಾಸ 67 ಎಫ್‌ಪಿಎಸ್ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	694
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಕೆ. ಮಹದೇವ (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	:	11.07.2018.
ಉತ್ತರಿಸುವ ಸಚಿವರು	:	ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ & ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಪಡಿತರ ಆಹಾರ ಪಡೆಯಲು ಹೆಬ್ಬೆಟ್ಟು ಗುರುತು ಪಡೆಯುವ ಪದ್ಧತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಪಿಓಎಸ್ ವ್ಯವಸ್ಥೆ ಜಾರಿಗೆ ತಂದಿದ್ದು, ಬಯೋ-ಮೆಟ್ರಿಕ್ ಮೂಲಕ ಪಡಿತರ ವಿತರಣೆಯನ್ನು ಜಾರಿಗೊಳಿಸಲಾಗಿದೆ.
ಆ)	ಇದರಿಂದ ಪಡಿತರ ಆಹಾರ ಪಡೆಯಲು ಅನಾನುಕೂಲವಾಗುತ್ತಿದ್ದು, ಹೆಬ್ಬೆಟ್ಟು ಗುರುತು ಪಡೆಯುವ ಪದ್ಧತಿಯನ್ನು ರದ್ದುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಇಲ್ಲ.
ಇ)	ಪಡಿತರ ಆಹಾರ ಪಡೆಯಲು ಇರುವ ಮಾನದಂಡವೇನು?	ರಾಜ್ಯದಲ್ಲಿ ಪಿಓಎಸ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. 20,088 ನ್ಯಾಯಬೆಲೆ ಅಂಗಡಿಗಳ ಪೈಕಿ 18,765 ನ್ಯಾಯಬೆಲೆ ಅಂಗಡಿಗಳಲ್ಲಿ ಪಿಓಎಸ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಪಡಿತರ ಪಡೆಯಲು ಪಡಿತರ ಚೀಟಿದಾರರ ಕುಟುಂಬದ ಓರ್ವ ಸದಸ್ಯರು ನ್ಯಾಯಬೆಲೆ ಅಂಗಡಿಗಳಲ್ಲಿ ಬಯೋ-ಮೆಟ್ರಿಕ್ ಮೂಲಕ ಪಡಿತರ ಪಡೆಯುತ್ತಾರೆ. ಬಯೋ-ಮೆಟ್ರಿಕ್ ಹೊಂದಾಣಿಕೆಯಲ್ಲಿ ಸಮಸ್ಯೆಯಾದಲ್ಲಿ (ವೃದ್ಧರು, ಅಂಗವಿಕಲರು, ರೋಗಿಗಳು ಇತ್ಯಾದಿ) ಅವರಿಗೆ ಬಯೋ-ಮೆಟ್ರಿಕ್ ಹೊರತುಪಡಿಸಿ ಪಡಿತರ ವಿತರಿಸುವ ಅವಕಾಶವನ್ನೂ ಕಲ್ಪಿಸಲಾಗಿದೆ.

ಆನಾಸ 166 ಡಿಆರ್ಎ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	439
ಸದಸ್ಯರ ಹೆಸರು	ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಖಾತೆಗಳನ್ನು ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಭೂ ಪರಿವರ್ತಿಸದ ಜಮೀನುಗಳಿಗೆ ವಿನ್ಯಾಸ ಅನುಮೋದನೆ ಪಡೆಯದೇ ಅನಧಿಕೃತ ಬಡಾವಣೆ/ರೆವಿನ್ಯೂ ಬಡಾವಣೆಗಳನ್ನು ನಿರ್ಮಾಣ ಮಾಡಿ ನಿವೇಶನಗಳನ್ನು ನೋಂದಣಿ ಮಾಡಿಕೊಂಡು ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಿಸುವುದರಿಂದ ಸಾರ್ವಜನಿಕರಿಗೆ ಮತ್ತು ಯೋಜಿತ ಬೆಳವಣಿಗೆಗಳಿಗೆ ಪ್ರತಿಕೂಲ ಪರಿಣಾಮಗಳು ಉಂಟಾಗುತ್ತದೆ. ಈ ರೀತಿ ಭೂ ಪರಿವರ್ತನೆಯಾಗದ ಮತ್ತು ವಿನ್ಯಾಸ ಅನುಮೋದನೆಯಾಗದ ನಿವೇಶನಗಳಿಗೆ ಸ್ಥಳೀಯ ಸಂಸ್ಥೆಗಳು ನಿಯಮಬಾಹಿರವಾಗಿ ಖಾತಾ ನೀಡುತ್ತಿರುವ ಬಗ್ಗೆ ಸರ್ಕಾರದ ಹಂತದಲ್ಲಿ ಹಲವಾರು ದೂರುಗಳು ಸ್ವೀಕೃತವಾದ್ದರಿಂದ, ಇದನ್ನು ತಡೆಗಟ್ಟಲು ದಿನಾಂಕ:22/03/2017ರ ಸರ್ಕಾರದ ಸುತ್ತೋಲೆಯಲ್ಲಿ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೇ ಇರುವ ನಿವೇಶನಗಳಿಗೆ ಖಾತೆ ನೀಡಬಾರದೆಂದು ಸೂಚಿಸಲಾಗಿದೆ ಹಾಗೂ ಪೌರಾಡಳಿತ ನಿರ್ದೇಶನಾಲಯದ ದಿನಾಂಕ:05/01/2018ರ ಸುತ್ತೋಲೆಯಲ್ಲಿ ನಿಯಮ ಬಾಹಿರ ಖಾತಾ ವರ್ಗಾವಣೆಗಳನ್ನು ಗುರುತಿಸಿ ರದ್ದುಪಡಿಸಲು ಸೂಚಿಸಲಾಗಿದೆ.
(ಆ)	ಖಾತೆಗಳನ್ನು ಮಾಡುವುದಕ್ಕೆ ಸರ್ಕಾರದ ಮಾನದಂಡಗಳೇನು?	ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಆಸ್ತಿಗಳ ಖಾತಾ ವರ್ಗಾವಣೆಯನ್ನು ಮಾಡಲು ಭೂ ಪರಿವರ್ತನೆಯ ಆದೇಶದ ಪ್ರತಿ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡ ಲೇಔಟ್ ಆದೇಶದ ಪ್ರತಿ ಮತ್ತು ಲೇಔಟ್ ನಕ್ಷೆಗಳನ್ನು ನಿಯಮಾನುಸಾರ ಪರಿಶೀಲಿಸಿಕೊಂಡು ಅಗತ್ಯ ಕ್ರಮ ಕೈಗೊಳ್ಳಾಗುತ್ತಿದೆ.
(ಇ)	ಶಿಡ್ಲಘಟ್ಟ ನಗರಸಭೆಯಲ್ಲಿ ಖಾತೆಗಳನ್ನು ಮಾಡದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ;	ಶಿಡ್ಲಘಟ್ಟ ನಗರಸಭೆಯಲ್ಲಿ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಪಾಲಿಸುವಲ್ಲಿ ಸಮಸ್ಯೆಗಳನ್ನು ವಿವರಿಸಿ, ಮನವಿಗಳು ಸ್ವೀಕೃತವಾಗಿವೆ.
(ಈ)	ಖಾತೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು?	ಮೇಲ್ಕಂಡ ಸುತ್ತೋಲೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ, ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿದ್ದು, ಅಕ್ರಮ-ಸಕ್ರಮ ಯೋಜನೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಈ ಹಂತದಲ್ಲಿ ಇಂತಹ ಪ್ರಕರಣಗಳ ಕುರಿತು ಕ್ರಮಕೈಗೊಳ್ಳಲು ಅವಕಾಶವಿರುವುದಿಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯ ನೀಡಿರುತ್ತದೆ. ಪ್ರಸ್ತುತದಲ್ಲಿ, ಸದರಿ ಸುತ್ತೋಲೆಗಳ ಕುರಿತು ಅಡ್ವೋಕೇಟ್ ಜನರಲ್ ಇವರ ಅಭಿಪ್ರಾಯ ಪಡೆದ ನಂತರ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 169 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

(ಇ)	ಪ್ರಸ್ತುತ ರಾಜ್ಯದಲ್ಲಿ ಅಧಿಕ ಜನಸಂಖ್ಯೆ ಇರುವ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ, ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳನ್ನಾಗಿ ಪುರಸಭೆಗಳ ನಗರಸಭೆಗಳ ಮೇಲ್ದರ್ಜೆಗೇರಿಸುವಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ಒದಗಿಸುವುದು)	2011ರ ಜನಗಣತಿ ಅನುಸಾರ ಮತ್ತು ನಿಗದಿಪಡಿಸಿರುವ ಮಾನದಂಡಗಳನ್ವಯ ರಾಜ್ಯದಲ್ಲಿನ ಅರ್ಹ ಗ್ರಾಮ ಪಂಚಾಯತಿಗಳಲ್ಲಿ ಒಂದು ನಗರಸಭೆಯನ್ನಾಗಿ, 19 ಪುರಸಭೆಯನ್ನಾಗಿ ಮತ್ತು 41 - ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಅಲ್ಲದೇ ಹಾಲಿ ಅಸ್ತಿತ್ವದಲ್ಲಿದ್ದ 18 ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳನ್ನಾಗಿ ಮತ್ತು 16 ಪುರಸಭೆಗಳನ್ನು ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಅಲ್ಲದೆ, ಈ ಕೆಳಕಂಡ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತವೆ. 1. ಉಡುಪಿ ಜಿಲ್ಲೆ ಬ್ರಹ್ಮಾವರ ಪರಿಸರದ ಎರಡು ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ. 2. ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಹುಣಸಗಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ. 3. ದಕ್ಷಿಣ ಕನ್ನಡ ಜಿಲ್ಲೆ ಸೋಮೇಶ್ವರ ಗ್ರಾಮ ಪಂಚಾಯತಿಯನ್ನು ಪುರಸಭೆಯನ್ನಾಗಿ. 4. ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಯಡ್ರಾಮಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ. 5. ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ನ್ಯಾಮತಿ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ. 6. ಕಲಬುರಗಿ ಜಿಲ್ಲೆ ಕಮಲಾಪುರ ಗ್ರಾಮ ಪಂಚಾಯತಿಯನ್ನುಪಟ್ಟಣ ಪಂಚಾಯತಿಯನ್ನಾಗಿ.

ಸಂಖ್ಯೆ: ನಅಇ 16 ಎಲ್‌ಎಕ್ಯೂ 2018

(ರಮೇಶ ಲ. ಜಾರಕಿಹೊಳಿ)
ಪೌರಾಡಳಿತ, ಬಂದರು ಮತ್ತು ಒಳನಾಡು
ಜಲಸಾರಿಗೆ ಸಚಿವರು

		3 ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು, 4 ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು. ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಬೇಕಾದಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ನಿಯಮ 3(1), 3(2) ಹಾಗೂ 9 ಗಳನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1 ಆ ಪುರಸಭೆಯ ಪ್ರದೇಶದ ಜನಸಂಖ್ಯೆ 50,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 3 ಲಕ್ಷಕ್ಕೆ ಹೆಚ್ಚಿಲ್ಲದಂತಿರಬೇಕು, 2 ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು, 3 ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು, 4 ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 388
ಸದಸ್ಯರ ಹೆಸರು : ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ)
ಉತ್ತರಿಸುವ ದಿನಾಂಕ : 11.07.2018
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತಿಗಳಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರದ ನಿಲುವೇನು?	ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸುವ ಕುರಿತು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ನಿಗದಿಪಡಿಸಿದ ಮಾನದಂಡಗಳನುಸಾರ ಸೂಕ್ತ ಪ್ರಸ್ತಾವನೆ ಬಂದಲ್ಲಿ ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಕುರಿತಂತೆ ನಿಯಮಾನುಸಾರ ಕ್ರಮವಹಿಸಲಾಗುವುದು.
(ಆ)	ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ, ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳ ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸುವಲ್ಲಿ ಇರುವ ಮಾನದಂಡಗಳೇನು?	ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3, 9 ಮತ್ತು 349 ರನ್ವಯ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1 ಆ ಗ್ರಾಮ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 10,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000 ಕ್ಕೆ ಹೆಚ್ಚಿಲ್ಲದಂತಿರಬೇಕು. 2 ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು. 3 ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು: ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ನಿಯಮ 3(1), 3(2) ಮತ್ತು 9 ಗಳನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1 ಅಂತಹ ಪ್ರದೇಶದ ಜನಸಂಖ್ಯೆ 20,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು. 2 ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು.

ಈ	ಹಾಗಾದರೆ, ಹಾಳಾದ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರ ವಿಶೇಷ ಅನುದಾನ ಒದಗಿಸುವುದೇ?	ಯೋಜನೆಯ ಅನುಮೋದಿತ ಅಂದಾಜಿನಲ್ಲಿ ಮಾಡಲಾದ ಅವಕಾಶಕ್ಕೆ ಅನುಗುಣವಾಗಿ, ಒಳಚರಂಡಿ ಕೊಳವೆ ಮಾರ್ಗ ಅಳವಡಿಕೆಗಾಗಿ ಕತ್ತರಿಸಲಾದ ರಸ್ತೆಯನ್ನು ಮರು ನಿರ್ಮಾಣ ಮಾಡಿ ಯಥಾಸ್ಥಿತಿಗೆ ತರಲಾಗಿರುತ್ತದೆ.

ನಅಇ 51 ಯುಡಬ್ಲ್ಯೂಎಲ್ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 480

ಉತ್ತರಿಸಬೇಕಾದವರು : ನಗರಾಭಿವೃದ್ಧಿ ಹಾಗೂ ವಸತಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-07-2018

ಕ್ರ ಸಂ	ಪ್ರಶ್ನೆ	ಉತ್ತರ
ಅ	ಬೈಲಹೊಂಗಲ ಪಟ್ಟಣದಲ್ಲಿ ಒಳಚರಂಡಿ (UGD) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು;	ಬೈಲಹೊಂಗಲ ಪಟ್ಟಣದ ಒಳಚರಂಡಿ (UGD) ಕಾಮಗಾರಿಯನ್ನು 2014 ರಲ್ಲಿ ಪ್ರಾರಂಭಿಸಲಾಗಿದೆ.
ಆ	ಈ ಕಾಮಗಾರಿಗೆ ಮಂಜೂರು ಮಾಡಲಾದ ಅನುದಾನವೆಷ್ಟು; ಇಲ್ಲಿಯವರೆಗೂ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ; (ವಿವರ ನೀಡುವುದು)	ಬೈಲಹೊಂಗಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ರೂ.5700.00 ಲಕ್ಷಗಳ ಯೋಜನೆಗೆ ಸರ್ಕಾರದ ಆದೇಶ ಸಂ.ನಅಇ 08 ಯುಡಿಎಸ್ 2009, ದಿನಾಂಕ 8-2-2010ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಯೋಜನೆಯ ಆರ್ಥಿಕ ಮಾದರಿ ಈ ಕೆಳಗಿನಂತಿರುತ್ತದೆ.

ವಿವರ	ಶೇಕಡಾ	ಮೊತ್ತ	ಬಿಡುಗಡೆಯಾದ ಮೊತ್ತ
ಆರ್ಥಿಕ ಸಂಸ್ಥೆಗಳ ಸಾಲ	50%	ರೂ.2850.00 ಲಕ್ಷಗಳು	ರೂ.2450.00 ಲಕ್ಷಗಳು
ಕರ್ನಾಟಕ ಸರ್ಕಾರದ ಸಾಲ	30%	ರೂ.1710.00 ಲಕ್ಷಗಳು	ರೂ.1710.00 ಲಕ್ಷಗಳು
ಸ್ಥಳೀಯ ಸಂಸ್ಥೆ ವಂತಿಕೆ	20%	ರೂ.1140.00 ಲಕ್ಷಗಳು	ರೂ.1140.00 ಲಕ್ಷಗಳು
ಒಟ್ಟು		ರೂ.5700.00 ಲಕ್ಷಗಳು	ರೂ.5300.00 ಲಕ್ಷಗಳು

ಇ	ಒಳಚರಂಡಿ (UGD) ಕಾಮಗಾರಿಯನ್ನು ಮಾಡಿದ್ದರಿಂದ ಬೈಲಹೊಂಗಲ ಪಟ್ಟಣದಲ್ಲಿನ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪಟ್ಟಣದಲ್ಲಿ ಒಳಚರಂಡಿ ಕೊಳವೆ ಮಾರ್ಗವನ್ನು ರಸ್ತೆಯ ಒಂದು ಬದಿಯಲ್ಲಿ ಅಳವಡಿಸಲಾಗಿದೆ. ಕೊಳವೆ ಮಾರ್ಗವನ್ನು ಅಳವಡಿಸಲು ಕತ್ತರಿಸಲಾದ ರಸ್ತೆಯನ್ನು, ಕೊಳವೆಯನ್ನು ಅಳವಡಿಸಿದ ನಂತರ ಕತ್ತರಿಸಲಾದ ರಸ್ತೆ ಅಗಲಕ್ಕೆ ಅನುಗುಣವಾಗಿ ಮರು ನಿರ್ಮಾಣ ಮಾಡಿ ಯಥಾಸ್ಥಿತಿಗೆ ತರಲಾಗಿರುತ್ತದೆ. ಹಾಗೂ ಪುರಸಭೆಯ ಕೋರಿಕೆ ಮೇರೆಗೆ ಪಟ್ಟಣದ ವಿವಿಧ ಪ್ರದೇಶಗಳಲ್ಲಿನ ಒಟ್ಟು 6 ಕಿ.ಮೀ. ಉದ್ದದ ರಸ್ತೆಯನ್ನು ಪೂರ್ಣ ಅಗಲಕ್ಕೆ ಮರು ನಿರ್ಮಾಣ ಮಾಡುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ.

ಕರ್ನಾಟಕ ವಿಧಾನಸಭೆ

15ನೇ ವಿಧಾನಸಭೆ

1ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	493
ಸದಸ್ಯರ ಹೆಸರು	:	ಶ್ರೀ ಬಿ.ನಾಗೇಂದ್ರ (ಬಳ್ಳಾರಿ)
ಉತ್ತರಿಸುವ ದಿನಾಂಕ	:	11-07-2018
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆ ಮತ್ತು ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಬಳ್ಳಾರಿ ಜಿಲ್ಲೆಗೆ ಮಂಜೂರು ಮಾಡಿರುವ ಹಾಗೂ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಖರ್ಚಾದ ಅನುದಾನ ಎಷ್ಟು (ಜಿಲ್ಲೆಯ ವಿಧಾನಸಭಾ ಕ್ಷೇತ್ರವಾರು ಪೂರ್ಣ ವಿವರಗಳನ್ನು ನೀಡುವುದು)	ಕ್ರ.ಸಂ. ಅ ಮತ್ತು ಆ ಗೆ ಸಂಬಂಧಿಸಿದಂತೆ, 2015-16, 2016-17 ಹಾಗೂ 2017-18ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಮಂಜೂರು ಮಾಡಿರುವ ಅನುದಾನ, ಭರಿಸಲಾದ ವೆಚ್ಚ ಹಾಗೂ ಕಾಮಗಾರಿಗಳ ಪ್ರಸ್ತುತ ಹಂತದ ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ.
ಆ	ಕಳೆದ ಮೂರು ವರ್ಷಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ಮಂಜೂರಾದ ಕಾಮಗಾರಿಗಳು ಎಷ್ಟು; ಅವುಗಳು ಯಾವುವು; ಯಾವ ಹಂತದಲ್ಲಿವೇ? (ವಿಧಾನಸಭಾ ಕ್ಷೇತ್ರವಾರು ಕಾಮಗಾರಿ ಹಾಗೂ ಅನುದಾನದೊಂದಿಗೆ ಪೂರ್ಣ ವಿವರಗಳನ್ನು ನೀಡುವುದು)	
ಇ	ಮಂಜೂರಾಗಿರುವ ಎಲ್ಲಾ ಕಾಮಗಾರಿಗಳು ಪೂರ್ಣವಾಗದೆ ಟೆಂಡರ್‌ಗಳಾಗದೇ ವಿಳಂಬವಾಗುತ್ತಿರಲು ಕಾರಣಗಳೇನು? (ಪೂರ್ಣ ವಿವರಗಳನ್ನು ನೀಡುವುದು)	ಮಂಜೂರಾಗಿರುವ ಎಲ್ಲಾ ಕಾಮಗಾರಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ, ಕಾಮಗಾರಿಗಳಿಗೆ ಗುತ್ತಿಗೆದಾರರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಿದೆ.

ಲೋಇ/431/ಐಎಫ್ಎ/2018

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನಸಭೆ

15ನೇ ವಿಧಾನಸಭೆ

1ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 472

ಸದಸ್ಯರ ಹೆಸರು : ಶ್ರೀ ಅನಿಲ್ ಕುಮಾರ್ ಸಿ. (ಹೆಚ್.ಡಿ. ಕೋಟೆ)

ಉತ್ತರಿಸುವ ದಿನಾಂಕ : 11-07-2018

ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರಕ್ಕೆ ರಾಜ್ಯ ಹೆದ್ದಾರಿ ಸೇರಿದಂತೆ ಲೋಕೋಪಯೋಗಿ ಇಲಾಖೆ ರಸ್ತೆಗಳ ಹಾಗೂ ಕಟ್ಟಡಗಳ ನಿರ್ಮಾಣ, ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ 2015-16 ರಿಂದ ಪ್ರಸಕ್ತ ಸಾಲಿನವರೆಗೂ ಬಿಡುಗಡೆಗೊಂಡ ಅನುದಾನ ಎಷ್ಟು;	2015-16 ರಿಂದ ಪ್ರಸಕ್ತ ಸಾಲಿನವರೆಗೂ ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರಕ್ಕೆ ರಾಜ್ಯ ಹೆದ್ದಾರಿ ಸೇರಿದಂತೆ ಲೋಕೋಪಯೋಗಿ ಇಲಾಖೆ ರಸ್ತೆಗಳ ಹಾಗೂ ಕಟ್ಟಡಗಳ ನಿರ್ಮಾಣ, ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಒದಗಿಸಲಾದ ಅನುದಾನದ ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.
ಆ	ಇದರಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು; (ಲೆಕ್ಕಶೀರ್ಷಿಕೆ ವರ್ಷವಾರು ವಿವರ ನೀಡುವುದು) ಕೇಂದ್ರ ರಸ್ತೆ ನಿಧಿಯಡಿ (ಫೇಸ್-2)ರಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ಹಾಗೂ ಅವುಗಳ ಅನುಷ್ಠಾನ ಪ್ರಕ್ರಿಯೆ ಯಾವ ಹಂತದಲ್ಲಿರುತ್ತದೆ;	ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಕೈಗೊಂಡ ಕಾಮಗಾರಿಗಳ ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಿದೆ. ಕೇಂದ್ರ ರಸ್ತೆ ನಿಧಿಯಡಿ ಫೇಸ್-2ರ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕಾಮಗಾರಿಗಳ ವಿವರಗಳನ್ನು **ಅನುಬಂಧ-3ರಲ್ಲಿ** ಒದಗಿಸಿದೆ. ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಯಥಾಸ್ಥಿತಿಯಲ್ಲಿ ತಡೆಹಿಡಿಯಲಾಗಿದೆ.
ಇ	ಫೇಸ್-2ರಡಿ ಕೈಗೊಳ್ಳಲಾಗಿರುವ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ಯತಾಸ್ಥಿತಿ-ಕಾಪಾಡಲು/ಸ್ಥಗಿತಗೊಳಿಸಲು ಇಲಾಖೆಯಿಂದ ಸೂಚನೆ ನೀಡಲಾಗಿದೆಯೇ;	ಹೌದು
ಈ	ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು; ಟೆಂಡರ್ ಪಡೆದು ಎಂಟು ತಿಂಗಳು ಕಳೆದರು ಕೆಲವು ಕಾಮಗಾರಿಗಳು ಪ್ರಾರಂಭವಾಗದೇ ಸಾರ್ವಜನಿಕರಿಗೆ ತೊಂದರೆಯಾಗಿದ್ದು ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು?	ಆರ್ಥಿಕ ಇಲಾಖೆಯು ಸಿಆರ್ಎಫ್ ಕಾಮಗಾರಿಗಳನ್ನು ವಾರ್ಷಿಕ ರೂ.500.00 ಕೋಟಿಗಳಿಗೆ ಮಿತಿಗೊಳಿಸಲು ತಿಳಿಸಿದ ಪ್ರಕಾರ ಫೇಸ್-2ರಡಿಯ ಕಾಮಗಾರಿಗಳ ಗುತ್ತಿಗೆ / ಟೆಂಡರ್ ಪ್ರಕ್ರಿಯೆಯನ್ನು ಯಥಾಸ್ಥಿತಿಯಲ್ಲಿ ತಡೆಹಿಡಿಯಲಾಗಿದೆ. ಆದರೆ ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಫೇಸ್-1ರಡಿ ಎರಡು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಲೋಇ/427/ಐಎಫ್ಎ/2018

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	482
ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ)
ಉತ್ತರಿಸುವ ದಿನಾಂಕ	:	11/07/2018
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರದಲ್ಲಿ ಬರುವ ಬೈಲಹೊಂಗಲ ಮುನವಳ್ಳಿ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರ ವ್ಯಾಪ್ತಿಯ ಬೈಲಹೊಂಗಲ-ಮುನವಳ್ಳಿ ರಸ್ತೆಯು ರಾಜ್ಯ ಹೆದ್ದಾರಿ-103 ರ ಭಾಗವಾಗಿರುತ್ತದೆ. ಸದರಿ ಭಾಗದ ರಸ್ತೆಯು 23.00 ಕಿ.ಮೀ ಉದ್ದವಿದ್ದು, ಇದರಲ್ಲಿ 2012-13, 2013-14 ಮತ್ತು 2014-15ನೇ ಸಾಲಿನಲ್ಲಿ 6.90 ಕಿ.ಮೀ ಉದ್ದಕ್ಕೆ ನವೀಕರಣ ಮಾಡಲಾಗಿರುತ್ತದೆ. ಬಾಕಿ ಉಳಿದ ರಸ್ತೆಯಲ್ಲಿ ಸುಗಮ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ಮುನವಳ್ಳಿ ಗ್ರಾಮದಲ್ಲಿ ಶ್ರೀ ರೇಣುಕಾ ಶುಗರ್ಸ್ ಸಕ್ಕರೆ ಕಾರ್ಖಾನೆ ಇರುವ ಪ್ರಯುಕ್ತ ಅತಿ ಭಾರದ ಹೆಚ್ಚಿನ ವಾಹನ ಸಾಂದ್ರತೆಯಿಂದ್ದ ರಸ್ತೆಯು ಪದೇ ಪದೇ ಹಾಳಾಗುತ್ತಿರುವ ಹಿನ್ನೆಲೆಯಲ್ಲಿ, ಮರುನಿರ್ಮಾಣದ ಅವಶ್ಯಕತೆ ಇದ್ದು, ಪ್ರಸ್ತುತ ವಾರ್ಷಿಕ ನಿರ್ವಹಣೆಗೆ ಒದಗಿಸಲಾದ ಅನುದಾನಕ್ಕನುಗುಣವಾಗಿ ರಸ್ತೆಯನ್ನು ನಿರ್ವಹಣೆ ಮಾಡಲಾಗುತ್ತಿದೆ. 2016-17ನೇ ಸಾಲಿಗೆ ರೂ.18.69 ಲಕ್ಷಗಳು ಹಾಗೂ 2017-18ನೇ ಸಾಲಿಗೆ ರೂ.19.40 ಲಕ್ಷಗಳನ್ನು ಸದರಿ ರಸ್ತೆ ನಿರ್ವಹಣೆಗೆ ವೆಚ್ಚ ಮಾಡಲಾಗಿರುತ್ತದೆ. ಆದಾಗ್ಯೂ, ಸದರಿ ರಸ್ತೆಯನ್ನು ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆಯ ಮೇರೆಗೆ ಮುಂಬರುವ ಆಯವ್ಯಯದಲ್ಲಿ ಪ್ರಸ್ತಾಪಿಸಿ, ಮರುನಿರ್ಮಾಣ ಮಾಡುವ ಕುರಿತು ಯೋಜಿಸಲಾಗುತ್ತಿದೆ.
ಇ)	ಸದರಿ ರಸ್ತೆಗೆ ಹೊಂದಿಕೊಂಡಿರುವ ಹೊಸೂರು ಗ್ರಾಮದ ಹತ್ತಿರವಿರುವ ಹಳ್ಳಕ್ಕೆ ಮಳೆ ನೀರು ಬರುವುದರಿಂದ ಮತ್ತು ಮಲಪ್ರಭಾ ಹಿನ್ನೀರಿನಿಂದಾಗಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿದೆ.
ಈ)	ಹಾಗಾದರೆ, ಸದರಿ ಸೇತುವೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?	ಬೈಲಹೊಂಗಲ-ಮುನವಳ್ಳಿ ರಾಜ್ಯ ಹೆದ್ದಾರಿ-103 ರ ಕಿ.ಮೀ 75.80 ರಲ್ಲಿ ಹೊಸೂರ ಹಳ್ಳಕ್ಕೆ ನಿರ್ಮಿಸಲಾಗಿರುವ ಕೆಳಮಟ್ಟದ cause way (25 ಸಾಲುಗಳ, 1.20 ಮೀ ವ್ಯಾಸದ ಪೈಪ್ ಕಲ್ವರ್ಟ್) 6.00 ಮೀಟರ ಅಗಲದ ಕ್ಯಾರೇಜ್ ವೇ ಹೊಂದಿದ್ದು, ಮಳೆಗಾಲದಲ್ಲಿ ನೀರು ಸೇತುವೆ ಮೇಲೆ ಹರಿದು ವಾಹನ ಸಂಚಾರಕ್ಕೆ ತೊಂದರೆಯನ್ನುಂಟು ಮಾಡುತ್ತದೆ. ಆದ್ದರಿಂದ ಹೊಸೂರು ಹಳ್ಳಕ್ಕೆ ಮೇಲ್ಮಟ್ಟದ ಸೇತುವೆಯನ್ನು ನಿರ್ಮಿಸಬೇಕಾಗಿರುತ್ತದೆ. ಈ ಸೇತುವೆಯ ನಿರ್ಮಾಣಕ್ಕೆ ರೂ.10.00 ಕೋಟಿಗಳ ಅನುದಾನ ತಗಲಬಹುದೆಂದು ಅಂದಾಜಿಸಲಾಗಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆಯ ಮೇರೆಗೆ ಮುಂಬರುವ ಆಯವ್ಯಯದಲ್ಲಿ ಪ್ರಸ್ತಾಪಿಸಿ ಸದರಿ ಸೇತುವೆ ನಿರ್ಮಾಣ ಮಾಡುವ ಕುರಿತು ಯೋಜಿಸಲಾಗುತ್ತಿದೆ.

ಲೋಇ 64 ಸಿಕ್ಯೂಎನ್ 2018

(ಹೆಚ್.ಡಿ.ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
1ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 312

ಸದಸ್ಯರ ಹೆಸರು : ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಉತ್ತರಿಸುವ ದಿನಾಂಕ : 11-07-2018

ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ರಸ್ತೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಬಂದ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಲ್ಲಿ ಪೂರ್ಣಗೊಂಡಿರುವ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳಾವುವು; (ವಿವರಗಳನ್ನು ನೀಡುವುದು)	2015-16, 2016-17 ಮತ್ತು 2017-18ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳ ವಿವರಗಳು ಹಾಗೂ ಸದರಿ ಕಾಮಗಾರಿಗಳ ಪ್ರಸ್ತುತ ಹಂತದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.
ಆ)	ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ ರಸ್ತೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ನೀಡುತ್ತಿರುವ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆಯೇ;	ಕ್ರ.ಸಂ (ಆ) ಮತ್ತು (ಇ) ಗಳಿಗೆ ಸಂಬಂಧಿಸಿದಂತೆ, ರಸ್ತೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿರುವ ರಸ್ತೆ ಕಾಮಗಾರಿಗಳಿಗೆ ರಾಜ್ಯದ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಂಡು ನಂತರ ಅನುದಾನವನ್ನು ಕೇಂದ್ರದಿಂದ ಮರುಭರಣ ಮಾಡಿಕೊಳ್ಳಲಾಗುತ್ತಿದ್ದು, ಬಿಡುಗಡೆಯಾದ ಪೂರ್ಣ ಅನುದಾನ ವಿನಿಯೋಗಿಸಿಕೊಳ್ಳಲಾಗುತ್ತಿದೆ.
ಇ)	ಕೇಂದ್ರ ಸರ್ಕಾರ ನೀಡುತ್ತಿರುವ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಸರ್ಕಾರಕ್ಕಿರುವ ತೊಂದರೆಗಳೇನು (ವಿವರ ನೀಡುವುದು)	

ಲೋಇ/422/ಐಎಫ್ಎ/2018

(ಹೆಚ್.ಡಿ ರೇವಣ್ಣ)
ಲೋಕೋಪಯೋಗಿ ಸಚಿವರು

ಈಶಾನ್ಯ ವಲಯ

ಕ್ರ ಸಂ	ಜಿಲ್ಲೆ	2015-16						2016-17						2017-18					
		3054-ರಾಜ್ಯ ಹೆದ್ದಾರಿಗಳ ನಿರ್ವಹಣೆ			3054-ಜಿಲ್ಲಾ ಮತ್ತು ಇತರ ರಸ್ತೆಗಳ ನಿರ್ವಹಣೆ			3054-ರಾಜ್ಯ ಹೆದ್ದಾರಿಗಳ ನಿರ್ವಹಣೆ			3054-ಜಿಲ್ಲಾ ಮತ್ತು ಇತರ ರಸ್ತೆಗಳ ನಿರ್ವಹಣೆ			3054-ರಾಜ್ಯ ಹೆದ್ದಾರಿಗಳ ನಿರ್ವಹಣೆ			3054-ಜಿಲ್ಲಾ ಮತ್ತು ಇತರ ರಸ್ತೆಗಳ ನಿರ್ವಹಣೆ		
		ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ
1	ಕಲಬುರಗಿ	1635.11	1635.11	1633.08	1470.18	1470.18	1450.48	1904.99	1904.99	1850.32	744.78	744.78	682.03	1458.10	1458.10	1107.90	699.80	699.80	659.37
2	ಯಾದಗಿರಿ	399.73	399.73	397.88	1111.17	1111.17	1111.14	270.31	270.31	270.31	1147.75	1147.75	1147.72	622.00	622.00	619.50	961.61	961.61	961.03
3	ಬೀದರ	1310.44	1310.44	1310.42	1283.91	1283.91	1283.91	1876.80	1876.80	1876.78	631.77	631.77	631.75	1313.35	1313.35	1227.28	1250.98	1250.98	1220.24
4	ಬಳ್ಳಾರಿ	1432.00	1432.00	1333.00	1908.96	1908.96	1853.96	1428.21	1428.21	1428.21	1711.21	1711.21	1711.22	1983.57	1983.57	1937.40	1962.73	1962.73	1959.40
5	ರಾಯಚೂರು	594.60	594.60	594.60	910.22	910.22	910.05	1028.34	1028.34	995.86	452.87	452.87	452.78	1231.47	1231.47	1231.47	1244.91	1244.91	1244.91
6	ಕೊಪ್ಪಳ	575.13	575.13	575.13	1254.77	1254.77	1254.77	816.36	816.36	816.36	1009.10	1009.10	1009.01	1024.63	1024.63	1021.91	1011.38	1011.38	1011.38
	ಒಟ್ಟು ವಲಯ	5947.01	5947.01	5844.11	7939.21	7939.21	7864.31	7325.01	7325.01	7237.84	5697.48	5697.48	5634.51	7633.12	7633.12	7145.46	7131.41	7131.41	7056.33

ಅನುಬಂಧ–1

(ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 313)

2015–16, 2016–17 ಮತ್ತು 2017–18ನೇ ಸಾಲಿನಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿಗಾಗಿ ಒದಗಿಸಲಾದ ಅನುದಾನ ಹಾಗೂ ಭರಿಸಿದ ವೆಚ್ಚದ ಜಿಲ್ಲಾವಾರು ವಿವರ

ಉತ್ತರ ವಲಯ

- 1 -

(ರೂ.ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಯ ಹೆಸರು	2015–16						2016–17						2017–18					
		3054 ಜಿ ಮು ರಸ್ತೆಗಳು			3054 ರಾ ಹೆ ರಸ್ತೆಗಳು			3054 ಜಿ ಮು ರಸ್ತೆಗಳು			3054 ರಾ ಹೆ ರಸ್ತೆಗಳು			3054 ಜಿ ಮು ರಸ್ತೆಗಳು			3054 ರಾ ಹೆ ರಸ್ತೆಗಳು		
		ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ	ಅನುದಾನ	ಬಿಡುಗಡೆ	ವೆಚ್ಚ
1	ಧಾರವಾಡ ಜಿಲ್ಲೆ	1719.29	1719.29	1719.29	562.31	562.31	562.31	1148.14	1148.14	1148.14	562.62	562.62	562.62	1427.88	1427.88	1427.88	1119.39	1119.39	1119.39
2	ಗದಗ ಜಿಲ್ಲೆ	1073.00	1073.00	1072.99	684.50	684.50	684.50	783.14	783.14	783.14	785.31	785.31	785.31	613.02	613.02	613.02	685.74	685.74	685.74
3	ಹಾವೇರಿ ಜಿಲ್ಲೆ	2152.52	2152.52	2152.52	507.06	507.06	507.06	1463.98	1463.98	1463.98	445.58	445.58	445.58	1043.33	1043.33	1043.33	381.02	381.02	381.02
4	ಕಾರವಾರ ಜಿಲ್ಲೆ	1613.65	1613.65	1613.65	1703.20	1703.20	1703.20	1526.35	1526.35	1526.35	1518.21	1518.21	1518.21	1768.13	1768.13	1768.13	2357.79	2357.79	2357.79
5	ಬೆಳಗಾವಿ ಜಿಲ್ಲೆ	3157.84	3157.84	3157.83	5677.37	5677.37	5677.37	6090.86	6090.86	6090.86	2866.97	2866.97	2866.97	4030.06	4030.06	4030.06	5703.67	5703.67	5703.67
6	ವಿಜಯಪುರ ಜಿಲ್ಲೆ	1587.85	1587.85	1587.85	764.68	764.68	764.68	1257.40	1257.40	1257.40	483.88	483.88	483.88	939.07	939.07	939.07	802.23	802.23	802.23
7	ಬಾಗಲಕೋಟ ಜಿಲ್ಲೆ	2101.41	2101.41	2101.41	931.33	931.33	931.33	1460.40	1460.40	1460.40	780.21	780.21	780.21	1239.00	1239.00	1239.00	777.57	777.57	777.57
	ಒಟ್ಟು	13405.56	13405.56	13405.54	10830.45	10830.45	10830.45	13730.27	13730.27	13730.27	7442.78	7442.78	7442.78	11060.49	11060.49	11060.49	11827.41	11827.41	11827.41

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
1ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	**313**
ಸದಸ್ಯರ ಹೆಸರು	:	**ಶ್ರೀ ಬಸವರಾಜ ಎಸ್ ಬೊಮ್ಮಾಯಿ (ಶಿಗ್ಗಾಂವ್)**
ಉತ್ತರಿಸುವ ದಿನಾಂಕ	:	**11-07-2018**
ಉತ್ತರಿಸುವ ಸಚಿವರು	:	**ಮಾನ್ಯ ಲೋಕೋಪಯೋಗಿ ಸಚಿವರು**

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ಉತ್ತರ ಕರ್ನಾಟಕ ಜಿಲ್ಲೆಗಳ ಲೋಕೋಪಯೋಗಿ ರಸ್ತೆಗಳ ದುರಸ್ತಿಗಾಗಿ ರಾಜ್ಯ ಸರ್ಕಾರ ನಿಗಧಿಪಡಿಸಿ, ಬಿಡುಗಡೆ ಮಾಡಿ, ವೆಚ್ಚ ಮಾಡಿರುವ ಮೊತ್ತವೆಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)	2015-16, 2016-17 ಮತ್ತು 2017-18ನೇ ಸಾಲಿನಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿಗಾಗಿ ಒದಗಿಸಲಾದ ಅನುದಾನ ಹಾಗೂ ಭರಿಸಿದ ವೆಚ್ಚದ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ
ಆ)	ಅನುದಾನದ ಕೊರತೆಯಿಂದಾಗಿ ಕೆಲವು ಲೋಕೋಪಯೋಗಿ ರಸ್ತೆಗಳು ದುರಸ್ತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗಮನಕ್ಕೆ ಬಂದಿದೆ.
ಇ)	ಹಾಗಿದ್ದಲ್ಲಿ, ಹೆಚ್ಚಿನ ಅನುದಾನವನ್ನು ನೀಡಿ ತ್ವರಿತವಾಗಿ ರಸ್ತೆಗಳನ್ನು ದುರಸ್ತಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಪ್ರಸ್ತುತ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಸದರಿ ಜಿಲ್ಲೆಗಳಲ್ಲಿ ದುರಸ್ತಿಯಾಗದೆ ಇರುವ ರಸ್ತೆಗಳಲ್ಲಿ ಆದ್ಯತೆಯ ಮೇಲೆ ನಿರ್ವಹಣಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮವಹಿಸಲಾಗುವುದು.
ಈ)	ರಸ್ತೆಗಳ ದುರಸ್ತಿ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು; (ಜಿಲ್ಲಾವಾರು ವಿವರಗಳನ್ನು ನೀಡುವುದು)	

ಲೋಇ/423/ಐಎಫ್ಎ/2018

(ಹೆಚ್.ಡಿ.ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	294
ಸದಸ್ಯರ ಹೆಸರು	:	ಶ್ರೀ ಅಂಗಾರ ಎಸ್ (ಸುಳ್ಯ)
ಉತ್ತರಿಸುವ ದಿನಾಂಕ	:	11.07.2018
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ಸುಳ್ಯ ತಾಲ್ಲೂಕಿನ ಶಾಂತಮಂಗಲ – ಅಜ್ಜಾವರ ರಸ್ತೆಗೆ ಸಿ.ಆರ್‌ಎಫ್ ಯೋಜನೆಯಡಿಯಲ್ಲಿ ಅನುದಾನ ಮಂಜೂರುಗೊಂಡು ಗುತ್ತಿಗೆಯನ್ನು ಕರೆದು ಟೆಂಡರ್ ಓಪನ್ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ ಎಷ್ಟು ಸಮಯದಲ್ಲಿ ಟೆಂಡರ್ ಓಪನ್ ಮಾಡಲಾಗುವುದು: ಕಾಮಗಾರಿಯನ್ನು ಎಷ್ಟು ಸಮಯದಲ್ಲಿ ಮುಕ್ತಾಯ ಮಾಡಲಾಗುವುದು ?	ಆರ್ಥಿಕ ಇಲಾಖೆಯು ಕೇಂದ್ರ ಸರ್ಕಾರದಿಂದ ಮಂಜೂರಾದ ಸಿ.ಆರ್.ಎಫ್ ಕಾಮಗಾರಿಗಳನ್ನು ವಾರ್ಷಿಕ ರೂ.500.00 ಕೋಟಿಗಳ ವೆಚ್ಚದೊಳಗೆ ಕೈಗೊಳ್ಳುವಂತೆ ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ, ಸರ್ಕಾರವು ಪತ್ರ ಸಂಖ್ಯೆ.ಲೋಇ:31:ಸಿಆರ್‌ಎಫ್: 2016 ದಿನಾಂಕ 20.02.2018ರಲ್ಲಿ ಮುಖ್ಯ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ಇವರಿಗೆ ಪತ್ರ ಬರೆದು, ಸಿ.ಆರ್.ಎಫ್ ಕಾಮಗಾರಿಗಳ ಗುತ್ತಿಗೆ/ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿದು, ಯಥಾಸ್ಥಿತಿಯನ್ನು (Status quo) ಕಾಪಾಡುವಂತೆ ಸೂಚಿಸಲಾಗಿರುತ್ತದೆ. ಅನುದಾನ ಲಭ್ಯವಾದ ನಂತರ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಲೋಇ 35 ಸಿಆರ್‌ಎಫ್ 2018.

(ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	481
ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ)
ಉತ್ತರಿಸುವ ದಿನಾಂಕ	:	11/07/2018
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ.	ಬೆಳಗಾವಿ ಜಿಲ್ಲೆಯ ಬೈಲಹೊಂಗಲದಿಂದ ಹಲಕಿ ಕ್ರಾಸ್‌ವರೆಗಿನ (ವಯಾ-ಮುರಗೋಡ) ರಸ್ತೆ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಸರ್ಕಾರದ ಗಮನಕ್ಕೆ ಬಂದಿದೆ.
ಆ.	ಬಂದಿದ್ದಲ್ಲಿ, ಸದರಿ ರಸ್ತೆಯನ್ನು ದುರಸ್ತಿಗೊಳಿಸಲು ಕೈಗೊಂಡ ಕ್ರಮಗಳೇನು?	ಬೆಳಗಾವಿ ಜಿಲ್ಲೆಯ ಬೈಲಹೊಂಗಲದಿಂದ ಹಲಕಿ ಕ್ರಾಸ್‌ವರೆಗಿನ (ವ್ಹಾಯಾ: ಮುರಗೋಡ) ರಸ್ತೆಯು ರಾಜ್ಯ ಹೆದ್ದಾರಿ-140 ಮತ್ತು ರಾಜ್ಯ ಹೆದ್ದಾರಿ-103 ರ ಭಾಗವಾಗಿದ್ದು, ಬೈಲಹೊಂಗಲದಿಂದ ಹಲಕಿ ಕ್ರಾಸ್‌ವರೆಗಿನ (ವ್ಹಾಯಾ: ಮುರಗೋಡ) ರಸ್ತೆಯು 15.11 ಕಿ.ಮೀ ಉದ್ದವಾಗಿದ್ದು, 2012-13ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ನವೀಕರಣ ಅಡಿ ರಾಜ್ಯ ಹೆದ್ದಾರಿ-140 ರಲ್ಲಿ 3.40 ಕಿ.ಮೀ. ಉದ್ದಕ್ಕೆ ಮಾತ್ರ ಮರುಡಾಂಬರೀಕರಣ ಮಾಡಲಾಗಿರುತ್ತದೆ. ಇನ್ನುಳಿದ ರಸ್ತೆಯನ್ನು ಮರುನಿರ್ಮಾಣ ಮಾಡಿ ದುರಸ್ಥಿಗೊಳಿಸುವುದು ಅವಶ್ಯವಾಗಿರುತ್ತದೆ. ಆದಾಗ್ಯೂ, ಸಾರ್ವಜನಿಕ ಸಂಚಾರಕ್ಕೆ ಅನುವು ಮಾಡಿಕೊಡಲು ಸದರಿ ರಸ್ತೆಯನ್ನು ವಾರ್ಷಿಕ ನಿರ್ವಹಣೆಗೆ ಲಭ್ಯವಿರುವ ಅನುದಾನದಡಿ ನಿರ್ವಹಣೆ ಮಾಡಲಾಗುತ್ತಿದೆ. 15.11 ಕಿ.ಮೀ. ಉದ್ದದ ರಸ್ತೆಯನ್ನು ಮರು ನಿರ್ಮಾಣ ಮಾಡಲು ರೂ.15.00 ಕೋಟಿಗಳ ಅನುದಾನ ತಗಲಬಹುದೆಂದು ಅಂದಾಜಿಸಲಾಗಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಆದ್ಯತೆಯ ಮೇರೆಗೆ ಮುಂಬರುವ ಆಯವ್ಯಯದಲ್ಲಿ ಪ್ರಸ್ತಾಪಿಸಿ ಸದರಿ ರಸ್ತೆಯನ್ನು ಮರುನಿರ್ಮಾಣ ಮಾಡುವ ಕುರಿತು ಯೋಜಿಸಲಾಗುತ್ತಿದೆ.

ಲೋಇ 63 ಸಿಕ್ಯೂಎನ್ 2018

(ಹೆಚ್.ಡಿ.ರೇವಣ್ಣ)
ಲೋಕೋಪಯೋಗಿ ಸಚಿವರು

		ಮಾಡಿಸುವುದು ಮತ್ತು ಸದರಿ ಅವಧಿಯೊಳಗೆ ಲೆಕ್ಕಪರಿಶೋದನಾ ವರದಿಯನ್ನು ಪಡೆಯುವುದು. 15) ಲೆಕ್ಕಪರಿಶೋದನಾ ವರಧಿಯನ್ನು ಪರಿಗಣಿಸುವುದು. ಲೆಕ್ಕಪರಿಶೋದನೆಯಲ್ಲಿ ಪತ್ತೆ ಹಚ್ಚಿದ ಯಾವುದೇ ದೋಷಗಳನ್ನು ಸರಿಪಡಿಸಲು ಮತ್ತು ಯಾವುದೇ ಅಕ್ರಮಗಳಿಗೆ ಕ್ರಮ ಕೈಗೊಳ್ಳುವುದು. ಸಾಮಾನ್ಯ ಸಭೆಯ ಮುಂದೆ ವರದಿಗಳನ್ನು ಮಂಡಿಸುವುದು. 16) ವಿಚಾರಣಾ ಅಥವಾ ಪರಿಶೀಲನಾ ವರದಿಗಳನ್ನು ಪರಿಗಣಿಸುವುದು ವಿಚಾರಣೆ ಅಥವಾ ಪರಿಶೀಲನೆಯನ್ನು ಪತ್ತೆ ಹಚ್ಚಲಾದ ಯಾವುದೇ ಅಕ್ರಮಗಳಿಗೆ ಕ್ರಮ ಕೈಗೊಳ್ಳುವುದು. ಸಾಮಾನ್ಯ ಸಭೆಯ ಮುಂದೆ ವರದಿಗಳನ್ನು ಮಂಡಿಸುವುದು. 17) ಸಾಮಾನ್ಯ ಸಭೆಯ ಅನುಮೋದನೆಗೆ ವಾರ್ಷಿಕ ವರದಿ. ವಾರ್ಷಿಕ ಹಣಕಾಸು ತಃಖ್ತೆಗಳನ್ನು ವಾರ್ಷಿಕ ಯೋಜನೆ ಮತ್ತು ಆಯವ್ಯಯ ಮಂಡಿಸುವುದು. 18) ಸಂಘದ ಹಣವನ್ನು ದುರ್ವಿನಿಯೋಗ ಮಾಡುವ ಮೂಲಕ ಅಥವಾ ಸಂಘಕ್ಕೆ ನಷ್ಟವನ್ನುಂಟು ಮಾಡುವ ಮೂಲಕ ಸೀಮಿತ ಅಥವಾ ಕ್ರಿಮಿನಲ್ ಹೊಣೆಗಾರಿಕೆ ಗುರಿಯಾಗಿರುವಂತಹ ಯಾರೇ ವ್ಯಕ್ತಿಯ ವಿರುದ್ದ ಸಂದರ್ಭಾನುಸಾರ ಸೀಮಿತ ಕ್ರಿಮಿನಲ್ ಮತ್ತು ಶಿಸ್ತು ಕ್ರಮವನ್ನು ಪ್ರಾರಂಭಿಸುವುದು. 19) ಸಕಾಲದಲ್ಲಿ ಅವಶ್ಯಕವಾದಲ್ಲಿ ಮತ್ತು ಕೋರಿಕೆಯ ಮೇರೆಗೆ ವಿಶೇಷ ಸಾಮಾನ್ಯ ಸಭೆಗಳನ್ನು ನಡೆಸುವುದು. 20) ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ನಗದು ಶಿಲ್ಕಿನ ಮಿತಿ ನಿಗದಿಪಡಿಸುವುದು. 21) ಸಂಘದ ಸರಿಯಾದ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಅವಶ್ಯಕ ನಿಯಮಗಳನ್ನು ರಚಿಸುವುದು. 22) ಮುಖ್ಯ ಕಾರ್ಯನಿರ್ವಾಹಕರ ಹುದ್ದೆ ಖಾಲಿಯಾದಲ್ಲಿ ತಾತ್ಕಾಲಿಕವಾಗಿ ತಕ್ಷಣ ವ್ಯವಸ್ಥೆ ಮಾಡುವುದು. 23) ಸಂಘದ ಮುಖ್ಯ ಕಾರ್ಯನಿರ್ವಾಹಕನಿಂದ ಆದಾಯ-ವೆಚ್ಚ ಮಾರಾಟ ಮತ್ತು ಖರೀದಿಸಿದ ಸಾಮಾನುಗಳ ದಾಸ್ತಾನು ಮೊದಲಾದ ಮಾಹೆವಾರು ಮಾಹಿತಿಗಳನ್ನು ಪಡೆದು ಅವುಗಳನ್ನು ಪರಿಶೀಲಿಸಿ ಒಪ್ಪುವುದು ಮತ್ತು ಸಾಮಾನ್ಯ ಸಭೆಯ ಅನುಮೋದಿಸಿದ ವರ್ಷದ ಆದಾಯ-ವೆಚ್ಚಗಳ ಮುಂಗಡ ಪತ್ರಕ್ಕೆ ಒಳಪಟ್ಟು ಖರ್ಚುಗಳಿಗೆ ಒಪ್ಪಿಗೆ ನೀಡುವುದು. 24) ಸಂಘವು ಸಂಯೋಜನೆ ಹೊಂದಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಸಲಹೆ ಮೇರೆಗೆ ಹಾಲು. ತುಪ್ಪ. ಪಶು ಆಹಾರ ಮತ್ತು ಇತರೆ ಅವಶ್ಯಕ ಸಾಮಾಗ್ರಿಗಳನ್ನು ಖರೀದಿಸುವುದು ಮತ್ತು ಮಾರಾಟ ಮಾಡುವುದು. 25) ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ನಿರ್ದೇಶನದ ಪ್ರಕಾರ ಪಶು ಸಂಗೋಪನೆಯನ್ನೊಳಗೊಂಡು ಹಾಲಿನ ಉತ್ಪತ್ತಿಯನ್ನು ಹೆಚ್ಚಿಸುವ ಸಲುವಾಗಿ ಎಲ್ಲಾ ಜಾನುವಾರುಗಳ ಪಾಲನೆಯ ಚಟುವಟಿಕೆಗಳನ್ನು ಕೈಗೊಳ್ಳುವುದು. 26) ಮಂಡಳಿಯ ಚುನಾವಣೆ ನಡೆಸಲು ಬೇಕಾಗುವ ಅವಶ್ಯ ಮಾಹಿತಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸುವುದು. 27) ಸಂಘದ ಆಡಳಿತ ವೆಚ್ಚಗಳಾದ ಪೀಠೋಪಕರಣಗಳನ್ನೊಳಗೊಂಡ ಕಛೇರಿಯ ಕಾರ್ಯಗಳಿಗೆ ಅವಶ್ಯವಾದ ಲೇಖನ ಸಾಮಾಗ್ರಿ. ಬಾಡಿಗೆ ಮತ್ತು ಇನ್ನಿತರೆ ವೆಚ್ಚಗಳನ್ನು ಮಂಜೂರು ಮಾಡುವುದು. 28) ಅಧಿನಿಯಮ. ನಿಯಮಗಳಡಿಯಲ್ಲಿ ಅಗತ್ಯಪಡಿಸಬಹುದಾದಂತಹ ಅಥವಾ ಸಾಮಾನ್ಯ ಸಭೆಯು ಪ್ರತ್ಯಾಯೋಜಿಸ ಬಹುದಾದಂತಹ ಇತರೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅಂತಹ ಇತರೆ ಕಾರ್ಯಗಳನ್ನು ಮಾಡುವುದು.

ಸಂಖ್ಯೆ: ಸಿಒ 86 ಸಿಸಿಬಿ 2018

(ಬಂಡೆಪ್ಪ ಖಾಶೆಂಪೂರ)
ಸಹಕಾರ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 448
ಸದಸ್ಯರ ಹೆಸರು : ಶ್ರೀ ಎಸ್.ಟಿ. ಸೋಮಶೇಖರ್
ಉತ್ತರಿಸಬೇಕಾದ ದಿನಾಂಕ : 11.07.2018

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಯಶವಂತಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ?	ಯಶವಂತಪುರ ವಿಧಾನ ಸಭಾ ಕ್ಷೇತ್ರದ ಕಾರ್ಯವ್ಯಾಪ್ತಿಯಲ್ಲಿ ಒಟ್ಟು 95 ಹಾಲು ಉತ್ಪಾದಕರ ಸಹಕಾರ ಸಂಘಗಳಿರುತ್ತದೆ. ಈ ಪೈಕಿ 02 ಸಂಘಗಳು ಸಮಾಪನೆಯಲ್ಲಿರುತ್ತವೆ.
ಆ)	ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಆಯ್ಕೆಯಾಗುವ ಪ್ರತಿನಿಧಿಗಳ ಜವಾಬ್ದಾರಿಗಳೇನು. (ವಿವರ ನೀಡುವುದು)	ಸಹಕಾರ ಸಂಘಗಳ ಪ್ರತಿನಿಧಿಗಳು (ನಿರ್ದೇಶಕರುಗಳು) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28(ಸಿ) ರಡಿಯಲ್ಲಿ ತಿಳಿಸಿರುವ ಅಧಿಕಾರ ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಬೇಕಾಗಿದೆ ಹಾಗೂ ಸಹಕಾರ ಸಂಘಗಳ ಅಧಿನಿಯಮ ಹಾಗೂ ನಿಯಮಗಳ ಚೌಕಟ್ಟಿನಲ್ಲಿ ಆಯಾ ಸಹಕಾರ ಸಂಘದ ಉಪನಿಯಮಗಳಲ್ಲಿ ಅಳವಡಿಸಿಕೊಂಡಿರುವ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿರುತ್ತದೆ. ಸಾಮಾನ್ಯವಾಗಿ ಹಾಲು ಉತ್ಪಾದಕರ ಸಹಕಾರ ಸಂಘದ ಉಪ ನಿಯಮಗಳಲ್ಲಿ ನಿರ್ದೇಶಕ ಮಂಡಳಿಯ ಅಧಿಕಾರ ಮತ್ತು ಪ್ರಕಾರ್ಯಗಳ ಹಾಗೂ ಪ್ರಮುಖ ಜವಾಬ್ದಾರಿಗಳು ಈ ಕೆಳಕಂಡಂತಿರುತ್ತವೆ. 1) ಸದಸ್ಯರನ್ನು ಸೇರಿಸಿಕೊಳ್ಳುವುದು. 2) ಷೇರುಗಳ ಹಂಚಿಕೆ ಸಂಬಂಧಿಸಿದಂತೆ ಅರ್ಜಿಗಳನ್ನು ವಿಲೆ ಮಾಡುವುದು. 3) ಸಂಪನ್ಮೂಲಗಳ ಕ್ರೋಢೀಕರಿಸುವುದು ಮತ್ತು ನಿಧಿಗಳನ್ನು ಸಂಗ್ರಹಿಸುವುದು. 4) ಸದಸ್ಯರಿಗೆ ಶುದ್ಧವಾದ ಹಾಲನ್ನು ಉತ್ಪಾದಿಸುವುದಕ್ಕೆ ಮತ್ತು ಹಾಲನ್ನು ಸಂಗ್ರಹಿಸಿ ಯೋಗ್ಯ ದರವನ್ನು ಹಾಗೂ ಸೌಲಭ್ಯವನ್ನು ಒದಗಿಸುವುದು. 5) ಆಯಾ ತಿಂಗಳ ಜಮಾ-ಖರ್ಚು ವೆಚ್ಚಗಳನ್ನು ಪರಿಶೀಲಿಸುವುದು ಹಾಗೂ ಒಪ್ಪಿಗೆ ನೀಡುವುದು. 6) ಸಂಘವು ಸಂಯೋಜನೆ ಹೊಂದಿದ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಕ್ಕೆ ಮತ್ತು ಸದಸ್ಯತ್ವ ಹೊಂದಿದ ಇತರೆ ಸಂಸ್ಥೆಗಳಿಗೆ ತನ್ನ ಪ್ರತಿನಿದಿಯಾಗಿ ಮಂಡಳಿಯ ಒಬ್ಬ ನಿರ್ದೇಶಕರನ್ನು ಕಳುಹಿಸುವುದು. 7) ಸದಸ್ಯರಿಗೆ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಒದಗಿಸುವುದು ಮತ್ತು ಕೈಗೊಳ್ಳಬೇಕಾದ ಸೌಲಭ್ಯಗಳನ್ನು ನಿರ್ಧರಿಸುವುದು. 8) ಯಾವುದೇ ಬಾಕಿಯ ವಸೂಲಾತಿಗಾಗಿ ಕಾನೂನು ಕ್ರಮ ಜರುಗಿಸುವುದು. 9) ಸಂಘದ ಉದ್ದೇಶಗಳನ್ನು ಸಾಧಿಸಲು ಅಗತ್ಯವಿರುವ ಚರ ಮತ್ತು ಸ್ಥಿರ ಸ್ವತ್ತನ್ನು ಖರೀದಿಸುವುದು. 10) ಸಂಘದ ಸಿಬ್ಬಂದಿಯ ವೃಂದ ಬಲ, ಪ್ರತಿ ಉದ್ಯೋಗಿಯ ಅರ್ಹತೆಗಳು, ವೇತನ ಶ್ರೇಣಿ ಮತ್ತು ಅಂಗೀಕಾರಾರ್ಹವಾದ ಇತರೆ ಭತ್ಯೆಗಳನ್ನು ನಿರ್ಧರಿಸುವುದು ಮತ್ತು ಅವರಿಗೆ ಕೆಲಸಗಳನ್ನು ವಹಿಸುವುದು. ಅವರ ಸೇವಾ ನಿಯಮಗಳನ್ನು ರಚಿಸಿ ನಿಬಂಧಕರಿಂದ ಮಂಜೂರು ಪಡೆಯುವುದು. ಹಾಗೂ ಅವರ ಸೇವಾ ರಿಜಿಸ್ಟರನ್ನು ನಿರ್ವಹಿಸುವುದು. 11) ಕರ್ತವ್ಯ ಚ್ಯುತಿ ಉದ್ಯೋಗಿಗಳ ವಿರುದ್ಧ ನಡತೆ ಮತ್ತು ಶಿಸ್ತು ನಿಯಮಗಳನ್ನು ರೂಪಿಸುವುದು. ಉಪ ವಿಧಿಗಳ ಉಪಬಂಧಗಳಿಗೆ ಒಳಪಟ್ಟು ಆರೋಪಗಳ ಗಂಭೀರತೆಯ ಪ್ರಮಾಣಕ್ಕನುಸಾರವಾಗಿ ದಂಡಗಳನ್ನು ವಿಧಿಸುವುದು. 12) ಸಂಘದ ಉದ್ದೇಶಗಳನ್ನು ಸಾಧಿಸಲು ನಿರ್ದಿಷ್ಟ ಗುರಿಗಳನ್ನು ರೂಪಿಸಿಕೊಳ್ಳುವುದು. 13) ವಾರ್ಷಿಕ ಆಯ-ವ್ಯಯಗಳ ಉಪಬಂಧಗಳಿಗೆ ಒಳಪಟ್ಟು ಸಂಘದ ವ್ಯವಹಾರಗಳಿಗೆ ಅವಶ್ಯಕವಾದ ವೆಚ್ಚವನ್ನು ಅನುಮೋದಿಸುವುದು. 14) ನಿರ್ದಿಷ್ಟ ಕಾಲಮಿತಿಯೊಳಗೆ ಸಂಘದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಯನ್ನು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 629

ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್(ಪುತ್ತೂರು)

ಉತ್ತರಿಸುವ ದಿನಾಂಕ : 11.07.2018

ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ರಸ್ತೆಯ ಶಿರಾಡಿ ಘಾಟ್ ಪ್ರದೇಶದಲ್ಲಿ ನಡೆಯುತ್ತಿರುವ ಕಾಮಗಾರಿ ಪೂರ್ಣಗೊಂಡಿದೆಯೇ. ಪೂರ್ಣಗೊಳ್ಳದಿದ್ದಲ್ಲಿ ಯಾವಾಗ ಪೂರ್ಣಗೊಳ್ಳುತ್ತದೆ.	ರಾಷ್ಟ್ರೀಯ ಹೆದ್ದಾರಿ 48(75) ಕಿ.ಮೀ.250.62 ರಿಂದ 263.00 ರವರೆಗಿನ 12.38ಕಿಮೀ ಗಳ ಉದ್ದದ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿದೆ. ಕ್ಯೂರಿಂಗ್ ಕಾರ್ಯವು ಪ್ರಗತಿಯಲ್ಲಿದೆ. ಸದರಿ ರಸ್ತೆಯ ಶೋಲ್ಡರ್ ಬಲಪಡಿಸುವ ಕಾಮಗಾರಿ, ಹಾಗೂ ಸುರಕ್ಷತಾ ಕಾಮಗಾರಿಗಳಾದ ರಕ್ಷಣಾ ಗೋಡೆ, ಸೂಚನಾ ಫಲಕಗಳನ್ನು ಅಳವಡಿಸುವುದು ಇತ್ಯಾದಿ ಕಾಮಗಾರಿಗಳು ತ್ವರಿತಗತಿಯಲ್ಲಿ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿಯೇ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.
ಆ.	ಹೆದ್ದಾರಿಯ ಕೆಲಸ ಪೂರ್ಣವಾದರೆ ವಾಹನ ಸಂಚಾರಕ್ಕೆ ಯಾವ ದಿನಾಂಕದಿಂದ ಅವಕಾಶ ಮಾಡಿಕೊಡಲಾಗುತ್ತದೆ?	ಶೀಘ್ರದಲ್ಲಿಯೇ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.

ಸಂಖ್ಯೆ: ಲೋಇ 209 ಸಿಎನ್‌ಹೆಚ್ 2018.

((ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	468
ಸದಸ್ಯರ ಹೆಸರು	ಶ್ರೀ. ಟಿ. ವೆಂಕಟರಮಣಯ್ಯ (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ದೊಡ್ಡಬಳ್ಳಾಪುರ ನಗರ ಸಭೆಯ ವ್ಯಾಪ್ತಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಸಂಖ್ಯೆ ಇದ್ದು, ಕುಡಿಯುವ ನೀರಿಗೆ ಕೊಳವೆ ಬಾವಿ ಮತ್ತು ಜಕ್ಕಲ ಮಡಗು ಜಲಾಶಯದ ನೀರಿನ ಮೇಲೆ ಅವಲಂಭಿತವಾಗಿದ್ದು, ಬೇಡಿಕೆಗಿಂತ ಕೊರತೆ ಇರುವುದರಿಂದ, ಕಾವೇರಿ ನೀರು ಸರಬರಾಜು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ದೊಡ್ಡಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ 2011ರ ಜನಗಣತಿಯಂತೆ 93105 ಜನಸಂಖ್ಯೆ ಇರುತ್ತದೆ. ನಗರದಲ್ಲಿ ನೀರಿನ ಬೇಡಿಕೆ 13.50 ಎಂ.ಎಲ್.ಡಿ. ಇದ್ದು, ಹಾಲಿ 5.40 ಎಂ.ಎಲ್.ಡಿ ನೀರು ಸರಬರಾಜು ಮಾಡಲಾಗುತ್ತಿದೆ. ಕೊಳವೆ ಬಾವಿಗಳಿಂದ 4.40 ಎಂಎ.ಎಲ್.ಡಿ ಹಾಗು ಉಳಿದ 1.00 ಎಂ.ಎಲ್.ಡಿ ನೀರನ್ನು ಜಕ್ಕಲ ಮಡಗು ಜಲಾಶಯದಿಂದ ಸರಬರಾಜು ಆಗುತ್ತಿರುತ್ತದೆ. ದೊಡ್ಡಬಳ್ಳಾಪುರ ನಗರಕ್ಕೆ ಕಾವೇರಿ ನೀರು ಸರಬರಾಜು ಮಾಡುವ ಕುರಿತು ಸರ್ಕಾರದ ಹಂತದಲ್ಲಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
(ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ದೊಡ್ಡಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ ಯು.ಐ.ಡಿ.ಎಸ್.ಎಸ್.ಎಂ.ಟಿ ಯೋಜನೆಯಡಿ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/181/ಸಿ.ಎಸ್.ಎಸ್/2013 ದಿನಾಂಕ:19.12.2013 ರಲ್ಲಿ ರೂ.3315.45ಲಕ್ಷಗಳು ಮಂಜೂರಾಗಿದ್ದು, ಯೋಜನೆಯು ಪ್ರಗತಿಯಲ್ಲಿರುತ್ತದೆ. ಈ ಯೋಜನೆಯಲ್ಲಿ ಮೇಲ್ಮಟ್ಟದ ಜಲ ಸಂಗ್ರಹಗಾರಗಳು, ನೆಲಮಟ್ಟದ ಜಲಸಂಗ್ರಹಗಾರಗಳು, ಹೆಚ್.ಡಿ.ಪಿ.ಇ ಪೈಪ್‌ಲೈನ್ ಗಳನ್ನು ಹಾಕಿ, ಮನೆಮನೆಗೆ ಮೀಟರ್‌ಗಳನ್ನು ಅಳವಡಿಸುವುದು ಮತ್ತು ಕೊಳವೆಬಾವಿಗಳನ್ನು ಕೊರೆಯುವ ಕಾಮಗಾರಿಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ ಈ ಯೋಜನೆಯು ಪ್ರಗತಿಯ ಹಂತದಲ್ಲಿರುತ್ತದೆ.

ಸಂಖ್ಯೆ: ನಅಇ 172 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 695
ಮಾನ್ಯ ಸದಸ್ಯರ ಹೆಸರು : ಶ್ರೀ ಸುರೇಶಗೌಡ
ಉತ್ತರಿಸಬೇಕಾದ ದಿನಾಂಕ : 11.07.2018
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಯವರು.

ಕ್ರಸ	ಪ್ರಶ್ನೆ	ಉತ್ತರ
ಅ	ನಾಗಮಂಗಲ ತಾಲ್ಲೂಕಿನಲ್ಲಿ ಎಷ್ಟು ಜನರ ಮೇಲೆ ರೌಡಿಶೀಟರ್ ತೆರೆಯಲಾಗಿದೆ (ಹೆಸರು ಮತ್ತು ವಿಳಾಸದೊಂದಿಗೆ ವಿವರ ನೀಡುವುದು)	ನಾಗಮಂಗಲ ತಾಲ್ಲೂಕಿನಲ್ಲಿ ಒಟ್ಟು 392 ಜನರ ಮೇಲೆ ರೌಡಿಶೀಟ್ ತೆರೆಯಲಾಗಿದೆ. ಪೊಲೀಸ್ ಠಾಣಾವಾರು ವಿವರ ಕೆಳಗಿನಂತಿದೆ. ಕ್ರಸ / ಪೊಲೀಸ್ ಠಾಣೆ / ರೌಡಿಶೀಟ್‌ಗಳ ಸಂಖ್ಯೆ 1 / ನಾಗಮಂಗಲ ಟೌನ್ ಪೊಲೀಸ್ ಠಾಣೆ / 97 2 / ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆ / 115 3 / ಬೆಳ್ಳೂರು ಪೊಲೀಸ್ ಠಾಣೆ / 87 4 / ಬಿಂಡಿಗನವಿಲೆ ಪೊಲೀಸ್ ಠಾಣೆ / 93 **ಒಟ್ಟು** / **392** **ಗೌಪ್ಯತೆ ಮತ್ತು ಭದ್ರತೆಯ ದೃಷ್ಟಿಯ ಆಧಾರದ ಮೇರೆಗೆ ರೌಡಿಶೀಟರ್ ವ್ಯಕ್ತಿಗಳ ಹೆಸರು, ವಿಳಾಸ ಮತ್ತು ಪ್ರಕರಣಗಳ ವಿವರ ತಡೆಹಿಡಿಯಲಾಗಿದೆ.**
ಆ	ರೌಡಿ ಶೀಟರ್‌ನ್ನು ತೆರೆಯಲು ಯಾವ ಮಾನದಂಡವನ್ನು ಅನುಸರಿಸಲಾಗುವುದು	**ರೌಡಿ ಪಟ್ಟಿಗೆ ಸೇರಿಸಲು ಇರುವ ಮಾನದಂಡಗಳು (ಪೊಲೀಸ್ ಮ್ಯಾನ್ಯುಯಲ್ ಅನುಚ್ಛೇದ 1059)** 1. ಸ್ತ್ರೀಯರಿಗೆ ಮತ್ತು ಶಾಲಾ, ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಅಸಭ್ಯ ಟೀಕೆ ಮಾಡುವವರಿಗೆ. 2. ಶಾಂತಿ ಪಾಲಿಸುವ ವ್ಯಕ್ತಿಗಳಿಗೆ ಹಿಂಸಿಸುವುದು, ಬಲಪ್ರಯೋಗ, ಬೆದರಿಕೆ ಹಾಕುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವವರಿಗೆ. 3. ದೌರ್ಜನ್ಯದಿಂದ ವಂತಿಗೆ ವಸೂಲಿ ಮಾಡುವವರಿಗೆ. 4. ಸಣ್ಣ ಜಗಳದಲ್ಲಿ ಭೂಮಾಲೀಕರು ಮತ್ತು ಗೇಣಿದಾರರು ಅಥವಾ ಬಾಡಿಗೆದಾರರು ಇವರಲ್ಲಿ ಪಕ್ಷವಹಿಸುವುದು ಮತ್ತು ವಿರುದ್ಧ ಪಕ್ಷದವರನ್ನು ಬೆದರಿಸುವುದು. 5. ಅಸಭ್ಯ ವರ್ತನೆ, ದೊಂಬಿಯಲ್ಲಿ ತೊಡಗುವವರಿಗೆ. 6. ಸರಗಳ್ಳತನ ಮತ್ತು ದರೋಡೆ ಮಾಡುವುದು. 7. ಮಹಿಳೆಯ ಮೇಲೆ ದೌರ್ಜನ್ಯ ಎಸಗುವ, ಮಹಿಳೆಯರನ್ನು ಚುಡಾಯಿಸುವ, ಅವರ ಮೇಲೆ ಹಲ್ಲೆ ಮಾಡುವ, ಸಾರ್ವಜನಿಕರ ಮೇಲೆ ಮಾರಣಾಂತಿಕ ಹಲ್ಲೆ ಮಾಡುವ ವ್ಯಕ್ತಿಗಳ ಮೇಲೆ ನಿರಂತರ ನಿಗಾವಣೆ ಇಡಲು ರೌಡಿ ಹಾಳೆಯನ್ನು ತೆರೆಯಲಾಗುತ್ತದೆ. 8. ಘೋರ ಅಪರಾಧ ಪ್ರಕರಣಗಳಲ್ಲಿ ಶಿಕ್ಷೆಯಾದ, ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಮತ್ತು ಇತರ ಪ್ರಮುಖ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿಗಳ ವಿರುದ್ಧ ರೌಡಿ ಹಾಳೆಗಳನ್ನು ತೆರೆಯಲಾಗುವುದು.
ಇ	ನಾಗಮಂಗಲ ತಾಲ್ಲೂಕಿನಲ್ಲಿ ರಾಜಕೀಯ ದ್ವೇಷದಿಂದ ಅಮಾಯಕರ ಮೇಲೆ ರೌಡಿಶೀಟರ್ ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ನಾಗಮಂಗಲ ತಾಲ್ಲೂಕಿನಲ್ಲಿ ರಾಜಕೀಯ ದ್ವೇಷದಿಂದ ಅಮಾಯಕರ ಮೇಲೆ ಯಾವುದೇ ರೌಡಿಶೀಟರ್‌ಗಳನ್ನು ತೆರೆದಿರುವುದಿಲ್ಲ. ಕಾನೂನು ಬಾಹಿರ ಚಟುವಟಿಕೆಗಳಲ್ಲಿ / ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ, ಸಾರ್ವಜನಿಕರಿಗೆ ತೊಂದರೆ ನೀಡುವಂತಹ ವ್ಯಕ್ತಿಗಳ ವಿರುದ್ಧ, ರೌಡಿ ಆಸಾಮಿಗಳು ನಡೆಸುವಂತಹ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಣದಲ್ಲಿಡಲು ಕಾನೂನಿನನ್ವಯ ಕ್ರಮ ಕೈಗೊಳ್ಳಲಾಗಿರುತ್ತದೆ.
ಈ	ಹಾಗಿದ್ದಲ್ಲಿ, ಅಂತಹ ಪ್ರಕರಣ ಗಳನ್ನು ತೆರವು ಮಾಡಲು ಸರ್ಕಾರ ಕ್ರಮ ಜರುಗಿಸುವುದೇ?	ಅನ್ವಯಿಸುವುದಿಲ್ಲ

ಹೆಚ್‌ಡಿ 392 ಎಸ್‌ಎಸ್‌ಟಿ 2018

(ಡಾ|| ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿಯವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	519
ಸದಸ್ಯರ ಹೆಸರು	:	ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)
ಉತ್ತರಿಸಬೇಕಾದ ದಿನಾಂಕ	:	11-07-2018
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಪುರ ಪಂಚಾಯತಿಗಳಿಗೆ ಪ್ರತಿ ವರ್ಷ ನಿಗದಿಪಡಿಸಿದ್ದ ನಗರೋತ್ಥಾನ ಯೋಜನೆಯ ಅನುದಾನ ಎಷ್ಟು? (ವಿವರ ನೀಡುವುದು)	ನಗರೋತ್ಥಾನ ಯೋಜನೆಯಡಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಿದ ಮೊತ್ತದ ವಿವರಗಳನ್ನು ಈ ಕೆಳಕಂಡ ಅನುಬಂಧಗಳಲ್ಲಿ ನೀಡಿದೆ.

ಯೋಜನೆ	ಅನುಬಂಧ
ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ ಹಂತ-2	ಅನುಬಂಧ-1
ನಗರೋತ್ಥಾನ (ಮುನಿಸಿಪಾಲಿಟಿ)-3.	ಅನುಬಂಧ-2
ಕಲಬುರಗಿ ಸಚಿವ ಸಂಪುಟ ಅನುಮೋದಿತ ಯೋಜನೆ	ಅನುಬಂಧ-3

ಸಂಖ್ಯೆ: ನಅಇ 398 ಸಮಸ 2018

(ರಮೇಶ ಲ. ಜಾರಕಿಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	302
2.	ಸದಸ್ಯರ ಹೆಸರು	:	ಶ್ರೀ ದೊಡ್ಡನಗೌಡ ಜಿ ಪಾಟೀಲ್ (ಹುನಗುಂದ)
3.	ಉತ್ತರಿಸಬೇಕಾದ ದಿನಾಂಕ	:	11-07-2018
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಇಳಕಲ್ ನಗರ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿಯನ್ನು ಯಾವಾಗಿನಿಂದ ಪ್ರಾರಂಭಗೊಳಿಸಲಾಗಿದೆ;	ಎ.ಡಿ.ಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ಅಡಿಯಲ್ಲಿ ಇಳಕಲ್ ನಗರ ವ್ಯಾಪ್ತಿಯಲ್ಲಿ ಒಳಚರಂಡಿ ಹಾಗೂ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಕಾಮಗಾರಿಯನ್ನು ದಿನಾಂಕ:18/10/2010 ರಂದು ಪ್ರಾರಂಭಗೊಳಿಸಲಾಗಿದೆ.
ಆ)	ಇಲ್ಲಿಯವರೆಗೂ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣವೇನು;	ಇಳಕಲ್ ನಗರದ ಒಳಚರಂಡಿ ಕಾಮಗಾರಿಯ ಗುತ್ತಿಗೆಯನ್ನು ಮೆ॥ ಶ್ಯಾಮರಾಜು & ಕಂಪನಿ (ಇಂಡಿಯಾ) ಪ್ರೈ.ಲಿ ಬೆಂಗಳೂರು ರವರಿಗೆ ದಿನಾಂಕ: 18.10.2010 ರಂದು ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆ ಒಪ್ಪಂದದ ಪ್ರಕಾರ 18 ತಿಂಗಳ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು, ಆದರೆ, ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಮಂದಗತಿಯಲ್ಲಿ ನಿರ್ವಹಿಸಿ, ಸದರಿ ಗುತ್ತಿಗೆ ಅವಧಿಯಲ್ಲಿ 14% ಕಾಮಗಾರಿಯ ಪ್ರಗತಿ ಸಾಧಿಸಿದ್ದುದ್ದರಿಂದ, ಗುತ್ತಿಗೆ ಒಪ್ಪಂದವನ್ನು ದಿನಾಂಕ: 26/04/2012 ರಂದು ರದ್ದು ಮಾಡಿ, ಮರು ಟೆಂಡರ್ ಕರೆದು, ಮೆ॥ ಯುಪಿಎಲ್ ಎನ್‌ವಿರಾನ್‌ಮೆಂಟಲ್ ಇಂಜಿನಿಯರ್ಸ್ ಗುಜರಾತ್ (ಜೆವಿ ವಿತ್ ಮೆ॥ಗಾರಪುರೆ ಇಂಜಿನಿಯರಿಂಗ್ & ಕನ್‌ಸ್ಟ್ರಕ್ಷನ್ ಲಿ. ಪುಣೆ ಮಹಾರಾಷ್ಟ್ರ) ರವರಿಗೆ ಗುತ್ತಿಗೆ ನೀಡಿ ಕಾಮಗಾರಿಯನ್ನು ಪುನಃ ದಿನಾಂಕ: 24/03/2014 ರಂದು ಪ್ರಾರಂಭಿಸಲಾಗಿದೆ. ಸದರಿ ಕಾಮಗಾರಿ ನಡೆಯುವಾಗ ಕೆಲ ಸ್ಥಳೀಯ ಸಮಸ್ಯೆಗಳಿಂದ ಹಾಗೂ ವಿನ್ಯಾಸ ಬದಲಾವಣೆಯಿಂದ ಪೂರ್ಣಗೊಳಿಸುವಲ್ಲಿ ವಿಳಂಬವಾಗಿದ್ದು, ಪ್ರಸ್ತುತ 97% ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಈ ಸಂಬಂದ ಮಂದಗತಿಯಲ್ಲಿ ಕಾಮಗಾರಿ ನಿರ್ವಹಿಸಿದ್ದ ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿದೆ.
ಇ)	ಯಾವ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು?	ದಿನಾಂಕ:31-08-2018 ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

ನಅಇ 223 ಪಿಆರ್‌ಜೆ 2018

(ಯು.ಟಿ ಖಾದರ್)
ನಗರಾಭಿವೃದ್ಧಿ ಸಚಿವರು.

		ಈಗಾಗಲೇ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಜನವರಿ 2022ಕ್ಕೆ ಕಾಮಗಾರಿಗಳು ಪೂರ್ಣಗೊಳ್ಳಲಿದೆ. 2018-19ನೇ ಸಾಲಿನ ಆಯವ್ಯಯದಲ್ಲಿ ಕುಡಿಯುವ ನೀರಿನ ಯೋಜನೆಗಳು ಮತ್ತು ನಿರ್ವಹಣೆಗಾಗಿ ಒಟ್ಟು ರೂ.3875.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಲಾಗಿದೆ. ಪಾಲಿಕೆ ನಿಧಿ ಮತ್ತು ಎಲ್ಲಾ ಅನುದಾನಗಳಿಂದ ಜೂನ್ 2018ರ ತಿಂಗಳ ಅಂತ್ಯಕ್ಕೆ ಕುಡಿಯುವ ನೀರಿನ ಯೋಜನೆಗಳು ಮತ್ತು ನಿರ್ವಹಣೆಗಾಗಿ ಒಟ್ಟು ರೂ.597.32 ಲಕ್ಷಗಳ ಮೊತ್ತ ಪಾವತಿಸಲಾಗಿರುತ್ತದೆ.

ನಅಇ: 24 ಎಸಿಡಿ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

(1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 397
(2) ಸದಸ್ಯರ ಹೆಸರು : ಶ್ರೀ ಎಸ್.ಎ ರವೀಂದ್ರನಾಥ್
(3) ಉತ್ತರಿಸುವ ದಿನಾಂಕ : 11-07-2018
(4) ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ನಿವಾಸಿಗಳಿಗೆ ತಿಂಗಳಲ್ಲಿ ಕೇವಲ 2 ಬಾರಿ ಕುಡಿಯುವ ನೀರು ಪೂರೈಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎರಡು ಕೆರೆಗಳು ಇದ್ದು, ಆ ಪೈಕಿ ಟಿ.ವಿ.ಸ್ಟೇಷನ್ ಕೆರೆಯಲ್ಲಿ ಹಾಲಿ 4.50 ಮೀ. ನೀರಿನ ಸಂಗ್ರಹ ಮತ್ತು ಕುಂದುವಾಡ ಕೆರೆಯಲ್ಲಿ ಹಾಲಿ 1.20 ಮೀ. ನೀರಿನ ಸಂಗ್ರಹವಿರುತ್ತದೆ. ನಾಲೆಯಿಂದ ನೀರು ಬಿಡುವವರೆಗೂ ಸಂಗ್ರಹವಿರುವ ನೀರನ್ನು ನಗರಕ್ಕೆ 7 ದಿನಕ್ಕೆ ಒಮ್ಮೆ ಸರಬರಾಜು ಮಾಡಲಾಗುತ್ತಿದೆ.
ಆ	ದಾವಣಗೆರೆ ನಗರಕ್ಕೆ ನೀರಿನ ಪೂರೈಕೆ ಮಾಡಲು ಸಾಕಷ್ಟು ಮೂಲಗಳಿಂದ ಅವಕಾಶವಿದ್ದರೂ, ಸಾರ್ವಜನಿಕರ ಅವಶ್ಯಕತೆಗೆ ತಕ್ಕಂತೆ ನೀರನ್ನು ಪೂರೈಕೆ ಮಾಡದಿರಲು ಕಾರಣಗಳೇನು;	ಕುಡಿಯುವ ನೀರಿನ ಮೂಲಗಳು: **1.ಭದ್ರಾ ನಾಲೆ 2. ತುಂಗಭದ್ರಾ ನದಿ** ಭದ್ರಾ ನಾಲೆಯಲ್ಲಿ ಮೇ 8ರಂದು ನೀರನ್ನು ನಿಲ್ಲಿಸಲಾಗಿದೆ. ಡ್ಯಾಂನಲ್ಲಿ 155 ಅಡಿ ಬಂದ ನಂತರ ಅಂದಾಜು ಅಗಸ್ಟ್ 8ನೇ ದಿನಾಂಕದಂದು ನೀರು ಬಿಡುವ ಸಂಭವವಿದೆ. ನೀರು ಬಂದ ನಂತರ ಕೆರೆಗೆ ತುಂಬಿಸಿಕೊಂಡು ಸಾರ್ವಜನಿಕರಿಗೆ ಪೂರೈಸಲಾಗುವುದು. ತುಂಗಭದ್ರಾ ನದಿಯಲ್ಲಿ ಹಾಲಿ ನೀರು ಬರುತ್ತಿದ್ದು, ಬರುತ್ತಿರುವ ನೀರನ್ನು ಪೂರೈಸಲಾಗುತ್ತಿದೆ. ದಿನಕ್ಕೆ 80 ಎಂ.ಎಲ್.ಡಿ. ನೀರು ಅವಶ್ಯಕತೆ ಇದ್ದು, ಇದರಲ್ಲಿ 50 ಎಂ.ಎಲ್.ಡಿ ನೀರನ್ನು ಪೂರೈಸಲಾಗುತ್ತಿದೆ. 30 ಎಂ.ಎಲ್.ಡಿ ನೀರು ನಗರಕ್ಕೆ ಸರಬರಾಜು ಮಾಡಲು ಕಡಿಮೆಯಾಗುತ್ತಿದೆ.
ಇ	ದಾವಣಗೆರೆ ನಗರಕ್ಕೆ ಸಮರ್ಪಕ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರ ಯಾವ ಕ್ರಮ ವಹಿಸಿದೆ; ಯಾವಾಗ ಪ್ರತಿನಿತ್ಯ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುವುದು	ದಾವಣಗೆರೆ ನಗರಕ್ಕೆ 24/7 ಕುಡಿಯುವ ನೀರು ಸರಬರಾಜು ಮಾಡಲು ಎ.ಡಿ.ಬಿ, ಅಮೃತ್ ಹಾಗೂ ರಾಜ್ಯ ಸರ್ಕಾರದ ಹಣದ ನೆರವಿನಿಂದ "ಜಲಸಿರಿ" ಯೋಜನೆಯಡಿ ತುಂಗಭಧ್ರಾ ನದಿಯಿಂದ ನೀರು ಸರಬರಾಜು ಮಾಡಲು ಕ್ರಮವಹಿಸಲಾಗಿದೆ. ಅಂದರೆ ಜನವರಿ 2022ರಿಂದ ಪ್ರತಿ ನಿತ್ಯ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುವುದು.
ಈ	ಕುಡಿಯುವ ನೀರಿನ ಪೂರೈಕೆಗೆ ಎಷ್ಟು ಅನುದಾನವನ್ನು ಯಾವ ಯೋಜನೆಯಡಿ ಮೀಸಲಿಡಲಾಗಿದೆ; ಎಷ್ಟು ಅನುದಾನ ಬಿಡುಗಡೆಯಾಗಿದೆ, ಎಷ್ಟು ಹಣ ವೆಚ್ಚ ಮಾಡಲಾಗಿದೆ? (ವಿವರ ನೀಡುವುದು)	ಕುಡಿಯುವ ನೀರಿನ ಪೂರೈಕೆಗಾಗಿ ರೂ.471.50 ಕೋಟಿಗಳ ಅನುದಾನ ಮಂಜೂರಾಗಿದ್ದು ವಿವರ ಈ ಕೆಳಗಿನಂತಿದೆ. 1. ಎ.ಡಿ.ಬಿ. ವತಿಯಿಂದ ರೂ.129.50 ಕೋಟಿಗಳು 2. ಅಮೃತ್ ಯೋಜನೆಯ ರೂ.174.96 ಕೋಟಿಗಳು 3. ಕರ್ನಾಟಕ ಸರ್ಕಾರದ ಅನುದಾನ ರೂ.167.04 ಕೋಟಿಗಳು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 685
ಉತ್ತರಿಸಬೇಕಾದ ದಿನಾಂಕ : 11.7.2018
ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸುವ ಸಚಿವರು : ವಸತಿ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ತೇರದಾಳ ಕ್ಷೇತ್ರದಲ್ಲಿ ಬರುವ ರಬಕವಿ ಪಟ್ಟಣದಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳೆಷ್ಟು; ಎಷ್ಟು ಮನೆಗಳನ್ನು ಕಟ್ಟಲಾಗಿದೆ; ಉಳಿದವುಗಳನ್ನು ಯಾವಾಗ ಕಟ್ಟಲಾಗುವುದು; ಯಾವ ಹಂತದಲ್ಲಿವೆ; (ಸಂಪೂರ್ಣ ಮಾಹಿತಿ ಒದಗಿಸುವುದು)	ತೇರದಾಳ ಕ್ಷೇತ್ರದಲ್ಲಿ ಬರುವ ರಬಕವಿ ಬನಹಟ್ಟಿ ನಗರಸಭೆ ವ್ಯಾಪ್ತಿಯಲ್ಲಿ ರಬಕವಿ ರಿ.ಸ.ನಂ. 64ರ 27 ಎಕರೆ ಜಮೀನಿನಲ್ಲಿ 2012-13ನೇ ಸಾಲಿನ ವಾಜಪೇಯಿ ನಗರ ವಸತಿ ಯೋಜನೆಯಡಿ 750 ಮನೆಗಳ ಗುಂಪು ಮನೆಗಳನ್ನು ನಿರ್ಮಿಸಲು ಮಂಜೂರು ಮಾಡಲಾಗಿರುತ್ತದೆ. ಸದರಿ 750 ಮನೆಗಳ ಪೈಕಿ 525 ಮನೆಗಳು ಪೂರ್ಣಗೊಂಡಿದ್ದು, 50 ಮನೆಗಳು ಪ್ರಗತಿಯಲ್ಲಿವೆ. 75 ಮನೆಗಳು ಇನ್ನೂ ಪ್ರಾರಂಭವಾಗಬೇಕಿವೆ. ಸದರಿ ಮನೆಯ ಪ್ರತಿ ಘಟಕ ವೆಚ್ಚವು ರೂ.1.80 ಲಕ್ಷಗಳಾಗಿದ್ದು, ಇದರಲ್ಲಿ ರೂ. 75,000/- ಸಹಾಯಧನ, ರೂ.75,000/- ಬ್ಯಾಂಕ್ ಸಾಲ ಮತ್ತು ರೂ.30,000 ಫಲಾನುಭವಿ ವಂತಿಕೆಯನ್ನು ಒಳಗೊಂಡಿದೆ. ಫಲಾನುಭವಿಗಳಿಗೆ ಬ್ಯಾಂಕ್ ಸಾಲ ದೊರೆಯದೆ ಇದ್ದುದರಿಂದ ಅನುದಾನದ ಕೊರತೆಯಿಂದಾಗಿ ಇನ್ನೂ ಕೆಲವು ಮನೆಗಳು ಪ್ರಗತಿಯ ಹಂತದಲ್ಲಿ ಮತ್ತು ಪ್ರಾರಂಭವಾಗದೇ ಉಳಿದಿವೆ.
(ಆ)	ಸದರಿ ಮನೆಗಳನ್ನು ಕಟ್ಟಿಸಿ 6 ವರ್ಷಗಳಾದರೂ ಇನ್ನೂ ಫಲಾನುಭವಿಗಳಿಗೆ ಕೊಡದೇ ಇರಲು ಕಾರಣವೇನು; ಸದರಿ ಕಾಲೋನಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕಳೆದ 3 ವರ್ಷಗಳಲ್ಲಿ ನೀಡಿದ ಅನುದಾನ ಎಷ್ಟು; ನೀಡದಿದ್ದಲ್ಲಿ ಕಾರಣಗಳೇನು (ಸಂಪೂರ್ಣ ಮಾಹಿತಿ ನೀಡುವುದು)	525 ಮನೆಗಳ ಪೈಕಿ 128 ಮನೆಗಳಲ್ಲಿ ಫಲಾನುಭವಿಗಳು ವಾಸವಾಗಿದ್ದಾರೆ. ಉಳಿದ ಮನೆಗಳ ಫಲಾನುಭವಿಗಳು ಬ್ಯಾಂಕ್ ಸಾಲದ ಮೊತ್ತವನ್ನು ನೀಡದೇ ಇರುವುದರಿಂದ ಸದರಿ ಮನೆಗಳನ್ನು ಹಸ್ತಾಂತರಿಸಲು ತೊಂದರೆ ಉಂಟಾಗಿದೆ. ಸದರಿ ಕಾಲೋನಿಯಲ್ಲಿ ಮೂಲಭೂತ ಸೌಲಭ್ಯಗಳಾದ ನೀರು, ರಸ್ತೆ, ಒಳಚರಂಡಿ, ಚರಂಡಿ ಒದಗಿಸಲು ರೂ. 3,79,67,000/-ಗಳ ಕಾಮಗಾರಿಗೆ ಅನುಮೋದನೆ ನೀಡಿದ್ದು, ಈವರೆಗೂ ರೂ. 3,41,20,000/-ಗಳನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರಿಗೆ ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ಸುಮಾರು 90% ರಷ್ಟು ಕಾಮಗಾರಿ ಮುಗಿದಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ಉಳಿದ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ವಇ 175 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಗೊಳಿಸುವುದು. ಪ್ರಸ್ತುತ ಸ್ವಚ್ಛತಾ ಕಾರ್ಯವನ್ನು ಟೆಂಡರ್/ಒಪ್ಪಂದದ ಮುಖಾಂತರ ನಿರ್ವಹಿಸುತ್ತಿರುವ ಗುತ್ತಿಗೆದಾರರ / ಸಂಸ್ಥೆಗಳ ಒಪ್ಪಂದವನ್ನು ಚಾಲ್ತಿ ಅವಧಿಯವರೆಗೆ ಮಾತ್ರ ಮುಂದುವರೆಸುವುದು. ತದನಂತರ ಸ್ವಚ್ಛತಾ ಕಾರ್ಯಗಳಿಗಾಗಿ ಟೆಂಡರ್‌ನ್ನು ಮುಂದುವರೆಸುವುದಾಗಲೀ ಅಥವಾ ಮರು-ಟೆಂಡರ್ ಕರೆಯುವುದನ್ನಾಗಲೀ ಮಾಡುವಂತಿಲ್ಲ.

ದಿನಾಂಕ 12.07.2017 ರಂದು ನಡೆದ 17ನೇ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಿ:470/2017 ರಲ್ಲಿ ಕೈಗೊಂಡ ನಿರ್ಣಯದನ್ವಯ ಈ ಆದೇಶವನ್ನು ಹೊರಡಿಸಲಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ನಗರಾಭಿವೃದ್ಧಿ ಇಲಾಖೆ (ಎಂ.ಎ-2 ಮತ್ತು ಮಂಡಳಿ)
7/8

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ, ಬೆಂಗಳೂರು – ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಮತ್ತು 100 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

ಇವರಿಗೆ,

1) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
3) ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ,
4) ರಾಜ್ಯದ ಎಲ್ಲಾ ಯೋಜನಾ ನಿರ್ದೇಶಕರುಗಳು, ಜಿಲ್ಲಾ ನಗರಾಭಿವೃದ್ಧಿ ಕೋಶ
5) ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರುಗಳು
6) ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳು

} ಪೌರಾಡಳಿತ ನಿರ್ದೇಶನಾಲಯದ ಮುಖಾಂತರ

7) ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು
8) ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆಗಳು, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ (ರಿ). ಮೈಸೂರು ಮಹಾನಗರ ಪಾಲಿಕೆ ಆವರಣ, ಮೈಸೂರು-570024.
9) ವಾರದ/ಮಾಸಿಕ ರಾಜ್ಯಪತ್ರದಲ್ಲಿ ಪ್ರಕಟಣೆಗಾಗಿ.
10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿಯನ್ನು:

1) ಸರ್ಕಾರದ ಮುಖ್ಯಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ (ಪ್ರಕರಣ ಸಂಖ್ಯೆ: ಸಿ:470/2017)
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
3) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ, ಇಲಾಖೆ.
4) ಸರ್ಕಾರದ ಉಪ-ಕಾರ್ಯದರ್ಶಿ-2, ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.

10 17 32

(ಅ) ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ), ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ರಚನೆ ಮಾಡಲಾಗಿರುವ ಈ ಕೆಳಕಂಡ ನಿಯಮಗಳಿಗೆ ಅನುಮೋದನೆ ನೀಡಿದೆ.

1. ಕರ್ನಾಟಕ ಪೌರಸಭೆಗಳ (ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು.

2. ಕರ್ನಾಟಕ ಮಹಾನಗರಪಾಲಿಕೆಗಳ (ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು.

3. ಕರ್ನಾಟಕ ಮಹಾನಗರಪಾಲಿಕೆಗಳ (ಮಹಾನಗರಪಾಲಿಕೆಗಳಲ್ಲಿ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು. (ಬಿಬಿಎಂಪಿ)

(ಆ) ಮೇಲ್ಕಂಡ ನಿಯಮಗಳಂತೆ ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಪ್ರಸುತ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡುವುದು. ಹಾಗೂ ಪ್ರಸ್ತುತ ಕ್ಷೇಮಾಭಿವೃದ್ಧಿ, ದಿನಗೂಲಿ, ಗುತ್ತಿಗೆ, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಪೌರಕಾರ್ಮಿಕರಿಗೆ ಆದ್ಯತೆ ನೀಡುವುದು.

(ಇ) ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಸೇರಿದಂತೆ ಎಲ್ಲ ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲಾ ಮೂಲಗಳಿಂದ ಒಟ್ಟಾರೆ ಪೌರಕಾರ್ಮಿಕರುಗಳ ಸಂಖ್ಯೆಯನ್ನು ಪ್ರತಿ 700 ಜನಸಂಖ್ಯೆಗೆ ಒಬ್ಬರಂತೆ ಸೀಮಿತಗೊಳಿಸುವುದು.

(ಈ) ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ಪೌರಕಾರ್ಮಿಕರನ್ನು ನೇರವಾಗಿ ಕೆಲಸಕ್ಕೆ ತೆಗೆದುಕೊಳ್ಳುವುದರ ಸಲುವಾಗಿ ಕಾರ್ಮಿಕ ಗುತ್ತಿಗೆ (ನಿಯಂತ್ರಣ ಮತ್ತು ರದ್ಧತಿ) ಅಧಿನಿಯಮ, 1970ರ ಕಲಂ 31ರ ಅಡಿಯಲ್ಲಿ ವಿನಾಯತಿ ನೀಡುವುದು. ಹಾಗೂ ಈ ಸಂಬಂಧ ಅಗತ್ಯ ಅಧಿಸೂಚನೆಯನ್ನು ಕಾರ್ಮಿಕ ಇಲಾಖೆಯು ಹೊರಡಿಸುವುದು.

(ಉ) ತದನಂತರ, ಹಾಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಅಗತ್ಯಕ್ಕೆ ಅನುಗುಣವಾಗಿ, ಅಂದರೆ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರಂತೆ (ಖಾಯಂ ಪೌರಕಾರ್ಮಿಕರನ್ನು ಸೇರಿ) ನೇರವಾಗಿ ಕೆಲಸಕ್ಕೆ ತೆಗೆದುಕೊಂಡು, ಅವರಿಗೆ ಸ್ಥಳೀಯ ಸಂಸ್ಥೆಗಳಿಂದ ಸಂಭಾವನೆಯನ್ನು ನೇರವಾಗಿ ನೀಡುವುದು.

(ಊ) ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸುವುದನ್ನು ಸ್ಥಗಿತ

(6) ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಸೇರಿದಂತೆ ಎಲ್ಲ ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಲ್ಲಾ ಮೂಲಗಳಿಂದ ಒಟ್ಟಾರೆ ಪೌರಕಾರ್ಮಿಕರುಗಳ ಸಂಖ್ಯೆಯನ್ನು ಪ್ರತಿ 700 ಜನಸಂಖ್ಯೆಗೆ ಒಬ್ಬರಂತೆ ಸೀಮಿತಗೊಳಿಸುವುದು.

ಮೇಲೆ ಓದಲಾದ (9)ರ ದಿನಾಂಕ 29.06.2017 ರಲ್ಲಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ರವರು ಪಾಲಿಕೆಯಲ್ಲಿ ನೇರ ನೇಮಕಾತಿ ಅಡಿಯಲ್ಲಿ ಮಂಜೂರಾದ 8000 ಹುದ್ದೆಗಳ ಪೈಕಿ 2514 ಖಾಯಂ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ 5486 ಹುದ್ದೆಗಳು ಖಾಲಿಯಿದ್ದು ನೇರ ನೇಮಕಾತಿಯಿಂದ ಭರ್ತಿ ಮಾಡಲು ಪರಿಗಣಿಸಬಹುದಾಗಿದೆಯೆಂದು ತಿಳಿಸಲಾಗಿದೆ.

ಮೇಲೆ ಓದಲಾದ (10)ರ ಪತ್ರದಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸಲ್ಲಿಸಿರುವ ಮಾಹಿತಿಯಂತೆ ರಾಜ್ಯದಲ್ಲಿನ ಮಹಾನಗರ ಪಾಲಿಕೆಗಳು, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಮಂಜೂರಾದ ಹುದ್ದೆಗಳ ಪೈಕಿ 13039 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಬಹುದಾಗಿರುತ್ತದೆಂದು ಹಾಗೂ ಪ್ರಸ್ತುತ 7626 ಖಾಯಂ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು 5413 ಹುದ್ದೆಗಳು ಖಾಲಿಯಿದ್ದು ನೇರ ನೇಮಕಾತಿಯಿಂದ ಭರ್ತಿ ಮಾಡಲು ಪರಿಗಣಿಸಬಹುದಾಗಿದೆ ಎಂದು ತಿಳಿಸಿರುತ್ತಾರೆ. ಈ ಸಂಬಂಧ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಮತ್ತು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಈ ಕೆಳಕಂಡಂತೆ ಕರಡು ನಿಯಮಗಳನ್ನು ರಚನೆ ಮಾಡಿ ಸಲ್ಲಿಸಿರುತ್ತಾರೆ.

1) ಕರ್ನಾಟಕ ಪೌರಸಭೆಗಳ (ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು.

2) ಕರ್ನಾಟಕ ಮಹಾನಗರಪಾಲಿಕೆಗಳ (ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು.

3) ಕರ್ನಾಟಕ ಮಹಾನಗರಪಾಲಿಕೆಗಳ (ಮಹಾನಗರಪಾಲಿಕೆಗಳಲ್ಲಿ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು. (ಬಿಬಿಎಂಪಿ)

ಪ್ರಸ್ತಾವನೆ ಬಗ್ಗೆ ಆರ್ಥಿಕ ಇಲಾಖೆ, ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಕಾರ್ಮಿಕ ಇಲಾಖೆಯ ಅಭಿಪ್ರಾಯಗಳನ್ನು ಪಡೆದು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ನಅಇ 126 ಟಿಎಂಎಸ್ 2016,
ಬೆಂಗಳೂರು, ದಿನಾಂಕ 7ನೇ ಆಗಸ್ಟ್ 2017

ಪ್ರಸ್ತಾವನೆಯಲ್ಲಿ ತಿಳಿಸಿರುವ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ), ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳ ಅನುಮೋದನೆ ಮತ್ತು ಆಯಾ ಸ್ಥಳೀಯ ಸಂಸ್ಥೆಗಳು ಹೊರಗುತ್ತಿಗೆ ಪೌರಕಾರ್ಮಿಕರಿಗೆ ನೇರವಾಗಿ ಸಂಭಾವನೆ ಪಾವತಿಸುವ ಕುರಿತು ಈ ಕೆಳಕಂಡಂತೆ ಅನುಮೋದನೆ ನೀಡಿದೆ.

ಮೇಲೆ ಓದಲಾದ (8)ರ ದಿನಾಂಕ 23.06.2017ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು, ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು, ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮತ್ತು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

(1) ದಿನಾಂಕ 4/5/2016ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಆದೇಶಿಸಿರುವಂತೆ ಹಾಗೂ ದಿನಾಂಕ 13/2/2017ರ ಸಭೆಯಲ್ಲಿ ತೀರ್ಮಾನಿಸಿರುವಂತೆ ವಿಶೇಷ ನೇಮಕಾತಿ ನಿಯಮಗಳನ್ನು ರಚನೆ ಮಾಡಿ ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ಪಟ್ಟಣ ಪಂಚಾಯತಿ, ಪುರಸಭೆ ಮತ್ತು ನಗರಸಭೆಗಳಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ 10,000 ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸುವುದು.

(2) ಮೇಲ್ಕಂಡ ನೇಮಕಾತಿಯಲ್ಲಿ ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ಪಟ್ಟಣ ಪಂಚಾಯತಿ, ಪುರಸಭೆ ಮತ್ತು ನಗರಸಭೆಗಳಲ್ಲಿ ದಿನಗೂಲಿ, ಗುತ್ತಿಗೆ ಕ್ಷೇಮಾಭಿವೃದ್ಧಿ, ಸಮಾನ ಕೆಲಸಕ್ಕೆ ಸಮಾನ ವೇತನ ಪೌರಕಾರ್ಮಿಕರುಗಳಿಗೆ ಹಾಗೂ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆದ್ಯತೆ ನೀಡುವುದು.

(3) ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ಪೌರಕಾರ್ಮಿಕರನ್ನು ನೇರವಾಗಿ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು, ಕಾರ್ಮಿಕ ಗುತ್ತಿಗೆ (ನಿಯಂತ್ರಣ ಮತ್ತು ರದ್ಧತಿ) ಅಧಿನಿಯಮ, 1970ರ ಕಲಂ 31 ರಡಿ ವಿನಾಯತಿ ನೀಡುವ ಸಂಬಂಧ ಅಗತ್ಯ ಅಧಿಸೂಚನೆಯನ್ನು ಕಾರ್ಮಿಕ ಇಲಾಖೆಯು ಹೊರಡಿಸುವುದು.

(4) ಕಾರ್ಮಿಕ ಇಲಾಖೆಯು ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳಿಗೆ ಕಾರ್ಮಿಕ ಗುತ್ತಿಗೆ (ನಿಯಂತ್ರಣ ಮತ್ತು ರದ್ಧತಿ) ಅಧಿನಿಯಮ, 1970ರ ಕಲಂ 31 ರಡಿಯಲ್ಲಿ ವಿನಾಯತಿ ನೀಡಿ ಅಧಿಸೂಚನೆ ಹೊರಡಿಸಿದ ನಂತರ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರುಗಳನ್ನು ನೇರವಾಗಿ ಗುತ್ತಿಗೆ ಮೇಲೆ ತೆಗೆದುಕೊಂಡು ಅವರುಗಳಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ನೇರವಾಗಿ ಸಂಭಾವನೆಯನ್ನು ಪಾವತಿಸುವುದು.

(5) ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಒಳಗೊಂಡಂತೆ), ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ಮೂಲಕ ನಿರ್ವಹಿಸುವುದನ್ನು ಸ್ಥಗಿತಗೊಳಿಸುವುದು. ಪ್ರಸ್ತುತ ಸ್ವಚ್ಛತಾ ಕಾರ್ಯವನ್ನು ಟೆಂಡರ್/ಒಪ್ಪಂದದ ಮುಖಾಂತರ ನಿರ್ವಹಿಸುತ್ತಿರುವ ಗುತ್ತಿಗೆದಾರರ / ಸಂಸ್ಥೆಗಳ ಒಪ್ಪಂದವನ್ನು ಚಾಲ್ತಿ ಅವಧಿ ಮುಗಿಯುವವರೆಗೆ ಮಾತ್ರ ಮುಂದುವರೆಸುವುದು. ಪ್ರಸ್ತುತ ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ಪದ್ಧತಿಯಲ್ಲಿ ಮುಂದುವರೆಸಬಾರದು.

ಸೂಕ್ತವಿರುವುದರಿಂದ, ಹೊರಗುತ್ತಿಗೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳ ಸೇವೆಯನ್ನು ಸಕ್ರಮಗೊಳಿಸುವ ವಿಷಯದ ಬಗ್ಗೆ ಕೂಲಂಕಷವಾಗಿ ಪುನರ್ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರ ದಿನಾಂಕ 13.02.2017 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವರವಾದ ಚರ್ಚೆಯ ನಂತರ ಇಲಾಖೆಗೆ ಖಾಲಿಯಿರುವ ಹುದ್ದೆಗಳನ್ನು ತುಂಬಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲು ಹಾಗೂ ಸದರಿ ಹುದ್ದೆಗಳನ್ನು ಹಂತ ಹಂತವಾಗಿ ತುಂಬಿಕೊಳ್ಳಲು ಸೂಚಿಸಿದರು ಹಾಗೂ ಸಫಾಯಿ ಕರ್ಮಚಾರಿಗಳ ಆಯೋಗದ ಹಿಂದಿನ ಮತ್ತು ಇಂದಿನ ಅಧ್ಯಕ್ಷರೊಂದಿಗೆ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಹರಿಯಾಣ ಮತ್ತು ಪಂಜಾಬ್ ರಾಜ್ಯಕ್ಕೆ ಭೇಟಿ ನೀಡಿ ಅಲ್ಲಿನ ಪದ್ಧತಿಯಲ್ಲಿ ಅಧ್ಯಯನ ಮಾಡಿ ನಮ್ಮ ರಾಜ್ಯದಲ್ಲಿಯೂ ಜಾರಿಗೆ ತರುವ ಬಗ್ಗೆ ಪರಿಶೀಲಿಸಲು ಸೂಚಿಸಲಾಗಿತ್ತು.

ಮೇಲೆ ಓದಲಾದ (4)ರ ಆದೇಶ ದಿನಾಂಕ **01.03.2017**ರಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರು, ಹಿಂದಿನ ಅಧ್ಯಕ್ಷರು ಮತ್ತು ಇಲಾಖಾ ಅಧಿಕಾರಿಗಳ ತಂಡವನ್ನು ರಚಿಸಿ ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಿಗೆ ಭೇಟಿ ನೀಡಿ ಅಲ್ಲಿನ ಪದ್ಧತಿಯನ್ನು ಅಧ್ಯಯನ ಮಾಡಿ ನಮ್ಮ ರಾಜ್ಯದಲ್ಲಿಯೂ ಸಹ ಆ ವ್ಯವಸ್ಥೆಯನ್ನು ಜಾರಿಗೆ ತರುವ ಸಂಬಂಧ ವರದಿ ಸಲ್ಲಿಸುವ ಬಗ್ಗೆ ಆದೇಶಿಸಲಾಗಿತ್ತು.

ಮೇಲೆ ಓದಲಾದ (5)ರಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರು ಮತ್ತು ಹಿಂದಿನ ಅಧ್ಯಕ್ಷರು ಹಾಗೂ ಅಧಿಕಾರಿಗಳ ತಂಡವು ದಿನಾಂಕ 06.03.2017 ರಿಂದ 09.03.2017 ರವರೆಗೆ ಹರಿಯಾಣ ಮತ್ತು ಪಂಜಾಬ್ ರಾಜ್ಯಗಳಿಗೆ ಭೇಟಿ ನೀಡಿ ದಿನಾಂಕ 22.03.2017 ರಂದು ಸಲ್ಲಿಸಿರುವ ವರದಿಯಲ್ಲಿ ಸಮಿತಿಯು ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪೌರಕಾರ್ಮಿಕರ ಹೊರಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ಹರಿಯಾಣ ರಾಜ್ಯದ ಮಾದರಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಮೂಲಕ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳನ್ನು ವಿಶೇಷ ನೇಮಕಾತಿ ನಿಯಮಗಳನ್ನು ರಚನೆ ಮಾಡಿ ಮಂಜೂರಾಗಿರುವ ಪೌರಕಾರ್ಮಿಕ ಹುದ್ದೆಗಳ ಎದುರಾಗಿ ನೇಮಕ ಮಾಡಿಕೊಂಡು ಸ್ಥಳೀಯ ಸಂಸ್ಥೆಗಳ ಮೂಲಕ ವೇತನವನ್ನು ನೇರವಾಗಿ ಪೌರಕಾರ್ಮಿಕರ ಬ್ಯಾಂಕ್ ಖಾತೆಗೆ ಜಮಾ ಮಾಡಲು ಹಾಗೂ ಇ.ಪಿ.ಎಫ್. ಮೊತ್ತವನ್ನು ನೇರವಾಗಿ ಕಾರ್ಮಿಕರ ಇ.ಪಿ.ಎಫ್.ಖಾತೆಗೆ ಜಮಾ ಮಾಡಲು ಕ್ರಮ ಕೈಗೊಳ್ಳುವಂತೆ ತಂಡವು ಶಿಫಾರಸ್ಸು ಮಾಡಿರುತ್ತದೆ.

ಮೇಲೆ ಓದಲಾದ (6)ರ ದಿನಾಂಕ 24.05.2017ರ ಮನವಿಯಲ್ಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಾನಗರಪಾಲಿಕೆಗಳು, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ ಇವರು ಸಲ್ಲಿಸಿರುವ ಬೇಡಿಕೆಯಲ್ಲಿ ತಮಗೆ ಸಂಭಾವನೆಯನ್ನು ನೇರವಾಗಿ ನಗರ ಸ್ಥಳೀಯ ಸಂಸ್ಥೆಗಳಿಂದ ನೀಡುವಂತೆ ಹಾಗೂ ಹೊರಗುತ್ತಿಗೆ ಪದ್ಧತಿಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ಮುಷ್ಕರ ಪ್ರಾರಂಭಿಸಿದ್ದರು. ಈ ಕುರಿತು ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು, ಮಾನ್ಯ ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಮತ್ತು ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರು ಹೊರಗುತ್ತಿಗೆ ಪೌರಕಾರ್ಮಿಕರುಗಳಿಗೆ ಇಂಧೋರ್ (ಮಧ್ಯಪ್ರದೇಶ), ಚೆನ್ನೈ (ತಮಿಳುನಾಡು), ವಾಣಿವಿಲಾಸ ನೀರು ಸರಬರಾಜು ಕೇಂದ್ರ, ಮೈಸೂರು ಮಹಾನಗರಪಾಲಿಕೆ ನೀಡುತ್ತಿರುವಂತೆ ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಸಹ ವೇತನವನ್ನು ನೇರವಾಗಿ ಪಾವತಿಸಲು ಕ್ರಮ ವಹಿಸುವಂತೆ ಸೂಚಿಸಲಾಗಿತ್ತು.

ಮೇಲೆ ಓದಲಾದ (7)ರ ದಿನಾಂಕ 30.05.2016ರ ಪತ್ರದಲ್ಲಿ ದಿನಾಂಕ 04.05.2016ರ ಸಚಿವ ಸಂಪುಟ ತೀರ್ಮಾನದನ್ವಯ ಮಾರ್ಚ್ 2017 ರೊಳಗೆ ಗುತ್ತಿಗೆ ಪದ್ಧತಿಯನ್ನು ರದ್ದುಮಾಡಿ ಗುತ್ತಿಗೆ ಪೌರಕಾರ್ಮಿಕರನ್ನು ಖಾಯಂ ಮಾಡಬೇಕಾಗಿರುವುದರಿಂದ ಟೆಂಡರ್ ಪ್ರಕ್ರಿಯೆಯನ್ನು 2017 ರೊಳಗೆ ಪೂರ್ಣಗೊಳಿಸಿ ಆದೇಶ ನೀಡಬೇಕೆಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಇವರು ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿನ ಮಹಾನಗರಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ), ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳ ಅನುಮೋದನೆ ಮತ್ತು ಆಯಾ ಸ್ಥಳೀಯ ಸಂಸ್ಥೆಗಳು ಹೊರಗುತ್ತಿಗೆ ಪೌರಕಾರ್ಮಿಕರಿಗೆ ನೇರವಾಗಿ ಸಂಭಾವನೆ ಪಾವತಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ನಅಇ 124 ಟಿಎಂಎಸ್ 2012, ದಿನಾಂಕ 18.05.2016.
2) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರ ಏಕಕಡತ ಸಂಖ್ಯೆ: ಡಿಎಂಎ 64 ಎಸ್‌ಡಬ್ಲ್ಯೂಎಂ 2016–17.
3) ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 13.02.2017 ರಂದು ನಡೆದ ಸಭೆಯ ನಡವಳಿಗಳು.
4) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ 20 ಟಿಎಂಎಸ್ 2017, ದಿನಾಂಕ 01.03.2017.
5) ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಈಗಿನ ಮತ್ತು ಹಿಂದಿನ ಅಧ್ಯಕ್ಷರು ಮತ್ತು ಅಧಿಕಾರಿಗಳ ತಂಡವು ಸಲ್ಲಿಸಿರುವ ವರದಿ ದಿನಾಂಕ 22.03.2017.
6) ಅಧ್ಯಕ್ಷರು, ಕರ್ನಾಟಕ ರಾಜ್ಯ ಮಹಾನಗರಪಾಲಿಕೆಗಳು, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ ಇವರ ಮನವಿ ದಿನಾಂಕ 24.05.2017.
7) ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಇವರ ಪತ್ರ ಸಂಖ್ಯೆ: ಕರಾಸಕಆ/ಸಿಆರ್/122/2016–17, ದಿನಾಂಕ 30.05.2016.
8) ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 23.06.2017 ರಂದು ನಡೆದ ಸಭೆಯ ನಡವಳಿಗಳು.
9) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಇವರ ಪತ್ರ ಸಂಖ್ಯೆ: ಬಿ12(2)ಪಿಆರ್/46/2017–18, ದಿನಾಂಕ 29.06.2017.
10) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಇವರ ಪತ್ರ ಸಂಖ್ಯೆ: 13651 ಡಿಎಂಎ 10 ಡಿಡಬ್ಲ್ಯೂಡಿ 2017, ದಿನಾಂಕ 28.06.2017.

ಪ್ರಸ್ತಾವನೆ:

ಮೇಲೆ ಓದಲಾದ (1)ರ ದಿನಾಂಕ: 18.05.2016ರ ಸರ್ಕಾರದ ಆದೇಶದಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಹಲವು ಸೌಲಭ್ಯಗಳನ್ನು ನೀಡಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ (2) ರಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರು ಏಕಕಡತದಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳ ಸೇವೆಯನ್ನು ಸಕ್ರಮಗೊಳಿಸುವ ಪ್ರಕ್ರಿಯೆಯಲ್ಲಿ ಹಲವಾರು ಆಡಳಿತಾತ್ಮಕ, ಕಾನೂನಾತ್ಮಕ ಹಾಗೂ ಆರ್ಥಿಕ ತೊಂದರೆ ತೊಡಕುಗಳಿರುವುದರಿಂದ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಸ್ತುತ ಇರುವ ಪದ್ಧತಿಯನ್ನೇ ಮುಂದುವರೆಸಿಕೊಂಡು ಹೋಗುವುದು

ಆ	ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಪೌರ ಕಾರ್ಮಿಕರ ಹುದ್ದೆಗಳ ಸಂಖ್ಯೆ ಎಷ್ಟು; ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ವಿವರ ನೀಡುವುದು)	ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಹಾಲಿ 396 ಮಂಜೂರಾದ ಪೌರ ಕಾರ್ಮಿಕರ ಹುದ್ದೆಗಳು ಖಾಲಿ ಇರುತ್ತವೆ. ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ 1099 ಜನ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. (1099 ಹೊರಗುತ್ತಿಗೆ ಕಾರ್ಮಿಕರಲ್ಲಿ ಪೌರಕಾರ್ಮಿಕರು-713, ಲೋಡರ್ಸ್-176, ಎಪಿಡೆಮಿಕ್, ಮಲೇರಿಯಾ ಮತ್ತು ಯುಜಿಡಿ ಹೆಲ್ಪರ್-ಒಟ್ಟು 130, ಟಾಯ್ಲೆಟ್ ಕ್ಲೀನರ್-22, ಸೂಪರ್‌ವೈಸರ್-38, ಕಾವಲುಗಾರರು-20 ಸಹ ಒಳಗೊಂಡಿರುತ್ತಾರೆ)
ಇ	ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಬ್ಯಾಂಕ್ ಮೂಲಕ ವೇತನ ಬಟವಾಡೆ ಮಾಡಲು ಸರ್ಕಾರದ ನಿರ್ದೇಶನವಿದೆಯೇ; ಈ ಬಗ್ಗೆ ಎಷ್ಟು ಬಾರಿ ನಿರ್ದೇಶನ ನೀಡಲಾಗಿದೆ; (ಪ್ರತಿಗಳನ್ನು ನೀಡುವುದು) ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ;	ಹೌದು. (ಮಾಹಿತಿ ಪ್ರತಿ ಅನುಬಂಧದಲ್ಲಿ ನೀಡಲಾಗಿದೆ) ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಹೊರಗುತ್ತಿಗೆ ಮೇ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಸಂಬಂಧಪಟ್ಟ ಗುತ್ತಿಗೆದಾರರಿಂದ ಸದರಿ ಕಾರ್ಮಿಕರ ಬ್ಯಾಂಕ್ ಖಾತೆಗೆ ವೇತನ ಜಮಾ ಮಾಡಲಾಗುತ್ತಿದೆ.
ಈ	ಪೌರ ಕಾರ್ಮಿಕರನ್ನು ಸರಕಾರದಿಂದ ನೇಮಕ ಮಾಡಿಕೊಳ್ಳುವ ಉದ್ದೇಶವು ಸರಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಮಾಡಿಕೊಳ್ಳಲಾಗುವುದು?	ಹೌದು. ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳಲ್ಲಿನ ಪೌರಕಾರ್ಮಿಕರ ನೇಮಕಾತಿ (ವಿಶೇಷ) ನಿಯಮಗಳು-2017 ರ ರೀತಿ ಬೆಳಗಾವಿ ಮಹಾನಗರ ಪಾಲಿಕೆಗೆ 548 ಪೌರಕಾರ್ಮಿಕರನ್ನು ನೇರ ನೇಮಕಾತಿ ಮಾಡಲು, ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಇವರು ದಿನಾಂಕ:-23/02/2018 ರಂದು ಅಧಿಸೂಚನೆಯನ್ನು ಹೊರಡಿಸಿ ಅರ್ಜಿ ಆಹ್ವಾನಿಸಿರುತ್ತಾರೆ. ಪೌರಕಾರ್ಮಿಕರ ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

ನಅಇ: 29 ಎಸಿಬಿ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

(1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 490
(2) ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್
(3) ಉತ್ತರಿಸುವ ದಿನಾಂಕ : 11-07-2018
(4) ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಮತ್ತು ವಸತಿ ಸಚಿವರು

	ಪ್ರಶ್ನೆ	ಉತ್ತರ
ಅ	ಬೆಳಗಾವಿ ಮಹಾನಗರ ಪಾಲಿಕೆಯ ವಿವಿಧ ವಾರ್ಡುಗಳಲ್ಲಿ ನೀಡಿರುವ ಸ್ವಚ್ಛತಾ ಗುತ್ತಿಗೆಯ ಅವಧಿಯು ಯಾವಾಗ ಮುಗಿದಿರುತ್ತದೆ: ಪ್ರಸ್ತುತ ಗುತ್ತಿಗೆ ಪ್ರಕ್ರಿಯೆಯನ್ನು ನಡೆಸಿ ಗುತ್ತಿಗೆದಾರರನ್ನು ನೇಮಕ ಮಾಡಲಾಗಿದೆಯೇ; ಅಥವಾ ಅನಧಿಕೃತವಾಗಿ ಈಗಿರುವವರನ್ನೇ ಮುಂದುವರೆಸಲಾಗಿದೆಯೇ; ಹೀಗೆ ಮಾಡಲು ಕಾನೂನಿನಲ್ಲಿ ಅವಕಾಶ ಇದೆಯೇ; ಇಲ್ಲವಾದಲ್ಲಿ ಸರಕಾರವು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದೇ;	ಬೆಳಗಾವಿ ಮಹಾನಗರ ಪಾಲಿಕೆಯ 47 ವಾರ್ಡುಗಳಲ್ಲಿ ರಸ್ತೆ ಕಸ ಗುಡಿಸುವ ಹಾಗೂ ಇತರೆ ಸ್ವಚ್ಛತೆಯ ಕೆಲಸಗಳ 22 ಪ್ಯಾಕೇಜುಗಳಿಗೆ ಗುತ್ತಿಗೆ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:01/08/2015 ರಿಂದ ಟೆಂಡರನ್ನು ನೀಡಲಾಗಿದ್ದು, ದಿನಾಂಕ:-31/07/2016 ರಂದು ಟೆಂಡರ್ ಅವಧಿ ಮುಕ್ತಾಯವಾಗಿರುತ್ತದೆ. ಸದರಿ 47 ವಾರ್ಡಗಳ 22 ಪ್ಯಾಕೇಜುಗಳಿಗೆ ಬೀದಿ ಕಸ ಗುಡಿಸುವಿಕೆಯ ಹೊಸ ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ಹಾಗೂ ಹೊಸ ಟೆಂಡರ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಹಳೆಯ ಟೆಂಡರ್‌ನ್ನು ಮುಂದುವರೆಸಲು ದಿನಾಂಕ:-04/04/2016 ರಂದು ಪರಿಷತ್ ಸಭೆಯಲ್ಲಿ ಅಂಗೀಕರಿಸಲಾಗಿದ್ದು, ಅದರಂತೆ, ದಿನಾಂಕ:-28/10/2016 ರಂದು ನಿರ್ದೇಶಕರು, ಪೌರಾಡಳಿತ, ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ, ದಿ: 16.02.2017 ರಂದು ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆದು, ಅದರಂತೆ ದಿನಾಂಕ: 10.03.2017 ರಂದು ಬೆಳಗಾವಿ ಪಾಲಿಕೆಯಿಂದ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಯಾರೂ ಬಿಡ್‌ದಾರರು ಭಾಗವಹಿಸದೇ ಇದ್ದುದರಿಂದ 2ನೇ ಬಾರಿ ದಿನಾಂಕ:-12/05/2017 ರಂದು ಮರುಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿಯೂ ಸಹ ಯಾರೂ ಬಿಡ್‌ದಾರರು ಭಾಗವಹಿಸಿರುವುದಿಲ್ಲ. ಪ್ರಯುಕ್ತ 3 ನೇ ಬಾರಿ ದಿನಾಂಕ:-26/06/2017 ರಂದು ಮತ್ತೊಮ್ಮೆ ಮರುಟೆಂಡರ್ ಕರೆಯಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ/126/ಟಿಎಂಎಸ್/2016 ರಲ್ಲಿ ದಿನಾಂಕ:07/08/2017 ರಂತೆ ಸದರಿ ಆದೇಶದ ದಿನಾಂಕದಿಂದ ಮರುಟೆಂಡರ್ ಕರೆಯಲು ಅವಕಾಶವಿಲ್ಲದ್ದರಿಂದ 2015-16 ರಲ್ಲಿ ನೀಡಿದ ಟೆಂಡರ್‌ನ್ನು ಮುಂದುವರೆಸಲಾಗಿದೆ. ಹಾಗೂ ಸದರಿ ಆದೇಶದಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು 700 ಜನಸಂಖ್ಯೆಗೆ ಒಬ್ಬರಂತೆ ಭರ್ತಿ ಮಾಡಲು ಸಹ ಕ್ರಮವಹಿಸಲಾಗುತ್ತದೆ.

ಕ್ರ ಸಂ.	ಪ್ರಶ್ನೆ	ಉತ್ತರ
		ಅನುದಾನದಲ್ಲಿ ಒಳಚರಂಡಿಗೆ ಅನುದಾನ ಕಾಯ್ದಿರಿಸಿ, ಪೈಪುಗಳ ಬದಲಾವಣೆ ಮತ್ತು ಮ್ಯಾನ್-ಹೋಲ್ ದುರಸ್ಥಿಯನ್ನು ಹಂತ-ಹಂತವಾಗಿ ಕೈಗೊಳ್ಳಲಾಗುತ್ತಿದೆ. 2018-19ನೇ ಸಾಲಿನಲ್ಲಿ ಸಹಾ ಒಳಚರಂಡಿ ದುರಸ್ಥಿಗಾಗಿ ರೂ. 5.00 ಲಕ್ಷ ಅನುದಾನವನ್ನು ಮೀಸಲಿರಿಸಿದೆ. ಅಲ್ಲದೆ, **Faecal Sludge and Septage Management** ಯೋಜನೆಗೆ ರೂ. 45.00 ಲಕ್ಷವನ್ನು ಕಾಯ್ದಿರಿಸಿದೆ.

ಸಂಖ್ಯೆ: ನಲಇ 164 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	389
ಸದಸ್ಯರ ಹೆಸರು	ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಲ್ಮಷಗಳ ತ್ಯಾಜ್ಯ ಸಂಸ್ಕರಣೆ ಮತ್ತು ನಿರ್ವಹಣೆ (State Faecal Sludge and Septage Management Policy) ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?	**ಘನತ್ಯಾಜ್ಯ ನಿರ್ವಹಣೆ ಶಾಖೆ:-** ರಾಜ್ಯದಲ್ಲಿ ಕಲ್ಮಷಗಳ ತ್ಯಾಜ್ಯ ಸಂಸ್ಕರಣೆ ಮತ್ತು ನಿರ್ವಹಣೆ (State Faecal Sludge and Septage Management Policy) ಯೋಜನೆಯನ್ನು ಮೊದಲ ಹಂತದಲ್ಲಿ, ಒಳಚರಂಡಿ ವ್ಯವಸ್ಥೆ ಹೊಂದಿರದ 50 ನಗರಗಳಲ್ಲಿ ಮಾರ್ಗಸೂಚಿಯನ್ವಯ ಪರಿಶೀಲಿಸಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.
ಆ)	ಉಡುಪಿ ಜಿಲ್ಲೆಯ ಕಾರ್ಕಳ ನಗರದ ಒಳಚರಂಡಿ ಅವ್ಯವಸ್ಥೆಯಿಂದ ಕಲುಷಿತ ನೀರು ಸರಿಯಾಗಿ ಹರಿಯದ್ದೆ ಸಾಂಕ್ರಾಮಿಕ ರೋಗಗಳಿಗೆ ಜನಸಾಮಾನ್ಯರು ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಈಗಾಗಲೇ ಕಾರ್ಕಳ ಪುರಸಭಾ ವ್ಯಾಪ್ತಿಯಲ್ಲಿ ಶೇ. 10 ರಷ್ಟು ಒಳಚರಂಡಿ ಇದ್ದು, 1.2mld ಸಾಮರ್ಥ್ಯದ ಆಕ್ಸಿಡೇಷನ್ ಪಾಂಡ್‌ಗಳು ಇರುತ್ತದೆ. ಉಳಿದಂತೆ ಶೇ. 90 ಭಾಗದಲ್ಲಿ ಶೌಚಗುಂಡಿಗಳು ಬ್ಲಾಕ್ ಆದಾಗ **Sucking cum Jetting Machine** ಮೂಲಕ ಸ್ವಚ್ಛಗೊಳಿಸಲಾಗುತ್ತಿದೆ. ಒಳಚರಂಡಿ ವ್ಯವಸ್ಥೆಯಲ್ಲಿಯೇ ಕಲುಷಿತ ನೀರು ಹರಿಯುತ್ತಿದ್ದು, ಒಳಚರಂಡಿ ಪೈಪು ಬ್ಲಾಕ್ ಆದಾಗ ಮಾತ್ರ ನೀರು ಹೊರಬಂದಾಗ ಅದನ್ನು ಜೆಟ್ಟಿಂಗ್ ಯಂತ್ರದ ಮೂಲಕ ಸ್ವಚ್ಛಗೊಳಿಸಲಾಗುತ್ತಿದೆ.
ಇ)	ಕಾರ್ಕಳ ನಗರ ಒಳಚರಂಡಿ ಅವ್ಯವಸ್ಥೆಯನ್ನು ಸರಿಪಡಿಸುವಲ್ಲಿ ಕಲ್ಮಷಗಳ ತ್ಯಾಜ್ಯ ಸಂಸ್ಕರಣೆ ಮತ್ತು ನಿರ್ವಹಣೆ ಯೋಜನೆಯನ್ನು ಅನುಷ್ಠಾನಗೊಳಿಸಲು ಇರುವ ತೊಡಕುಗಳೇನು?	ಕಾರ್ಕಳ ಪುರಸಭಾ ವ್ಯಾಪ್ತಿಯ ಒಳಚರಂಡಿ ವ್ಯವಸ್ಥೆಯು ಸುಮಾರು 20 ವರ್ಷಗಳ ಹಳೇಯದಾಗಿದ್ದು, ಪೈಪುಗಳು ಮತ್ತು ಆಳುಗುಂಡಿಗಳು ದುರಸ್ಥಿಯಲ್ಲಿರುವುದರಿಂದ ಒಳಚರಂಡಿ ಅವ್ಯವಸ್ಥೆಗೆ ಕಾರಣವಾಗುತ್ತಿದ್ದು, 14ನೇ ಹಣಕಾಸು ಆಯೋಗದ ಅನುದಾನದಲ್ಲಿ 2017-18ನೇ ಸಾಲಿಗೆ ರೂ. 6.20 ಲಕ್ಷ ಮೀಸಲಿರಿಸಿದೆ. ... ಒಳಚರಂಡಿಯ ಆಯ್ದ ಮ್ಯಾನ್-ಹೋಲ್ ಮತ್ತು ಪೈಪುಗಳ ಬದಲಾವಣೆ ಮಾಡಲಾಗಿದೆ. ಉಳಿದಂತೆ ಹಂತ-ಹಂತವಾಗಿ ಆಯಾ ವರ್ಷಗಳ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	693
ಸದಸ್ಯರ ಹೆಸರು	ಶ್ರೀ ಕೆ. ಮಹದೇವ (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ.ಸ.	ಪ್ರಶ್ನೆ	ಉತ್ತರ
(ಅ)	ಪಿರಿಯಾಪಟ್ಟಣ ಪುರಸಭೆಯಲ್ಲಿ 20 ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರಿಗೆ ಸಂಬಳ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವೇತನ ನೀಡಲು ಕೈಗೊಂಡಿರುವ ಕ್ರಮಗಳೇನು?	ಪಿರಿಯಾಪಟ್ಟಣ ಪುರಸಭೆಯ 1995ರ ನಂತರ ಕೆಲವು ದಿನಗೂಲಿ ನೌಕರರು ಕೌನ್ಸಿಲ್ ನಿರ್ಣಯದ ಮೇರೆಗೆ ನೇಮಕಗೊಂಡಿದ್ದು, ಸದರಿಯವರ ನೇಮಕಾತಿಯು ಅಸಿಂಧುವಾಗಿರುವುದರಿಂದ ಸಂಬಂಧಿಸಿದ ಕೌನ್ಸಿಲ್ ನಿರ್ಣಯವನ್ನು ಕರ್ನಾಟಕ ಪುರಸಭೆಗಳ ಕಾಯ್ದೆ 1964 ಕಲಂ 306ರ ರೀತ್ಯಾ ನಿರ್ಣಯ ರದ್ದು ಪಡಿಸಲು ದಿನಾಂಕ 19/04/2018 ಹಾಗೂ 0707/2018 ರಂದು ಪ್ರಸ್ತಾವನೆ ಸಲ್ಲಿಸಿದ್ದು, ಮುಖ್ಯಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಯವರ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.
(ಆ)	ಸದರಿ ದಿನಗೂಲಿ ನೌಕರರನ್ನು ಖಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ದಿನಗೂಲಿ ಪೌರಕಾರ್ಮಿಕರನ್ನು ಕರ್ನಾಟಕ ಪುರಸಭೆ(ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳ ರೀತ್ಯಾ ನೇರ ನೇಮಕಾತಿ ಖೋಟಾದಡಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ಮಾತ್ರ ಖಾಯಂ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳ ಹಂತದಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಉಳಿದಂತೆ ಇತರೆ ದಿನಗೂಲಿ ನೌಕರರ ಸೇವೆಯನ್ನು ಖಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ: ನಅಇ 158 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	475
2	ಸದಸ್ಯರ ಹೆಸರು	:	ಶ್ರೀ ಅರವಿಂದ ಲಿಂಬಾವಳಿ
3	ಉತ್ತರಿಸುವ ದಿನಾಂಕ	:	11-07-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ	2017-18ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ.ಯ ವಿವಿಧ ಯೋಜನೆಗಳಿಗೆ ರಾಜ್ಯ ಸರ್ಕಾರದ ಅನುದಾನದಲ್ಲಿ ಬಿಡುಗಡೆಯಾದ ಅನುದಾನವೆಷ್ಟು; (ವಿವರ ನೀಡುವುದು)	2017-18ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ. ವಿವಿಧ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ: (ಕೆಳಗಿನ ಕೋಷ್ಟಕ)
ಆ	ಬೆಂಗಳೂರು ರಸ್ತೆಗಳ ಅಭಿವೃದ್ಧಿ ಹಾಗೂ ಹೊಸ ಯೋಜನೆಗಳಿಗೆ ಕೈಗೊಂಡ ಕಾರ್ಯಕ್ರಮಗಳು ಯಾವುವು; (ವಿವರ ನೀಡುವುದು)	2017-18ನೇ ಸಾಲಿನ ಸರ್ಕಾರದ ಆದೇಶ ಸಂಖ್ಯೆ: ನಅಇ 185 ಎಂಎನ್‌ವೈ 2017, ದಿನಾಂಕ:26-12-2017 ರಲ್ಲಿ ರಸ್ತೆಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ವೈಟ್ ಟ್ಯಾಪಿಂಗ್ ರಸ್ತೆ ಅಭಿವೃದ್ಧಿ, ಟೆಂಡರ್‌ಶ್ಯೂರ್ ಮಾದರಿ ಅಭಿವೃದ್ಧಿ, ಹೆಚ್ಚಿನ ವಾಹನ ಸಾಂದ್ರತೆಯ ಕಾರಿಡಾರ್‌ಗಳ ಅಭಿವೃದ್ಧಿ, ಪಾದಚಾರಿ ಮಾರ್ಗ ಅಭಿವೃದ್ಧಿ, ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ, ರೈಲ್ವೆ ಕೆಳಸೇತುವೆ/ ಮೇಲುಸೇತುವೆ ನಿರ್ಮಾಣ, ಸಂಚಾರಿ ಇಂಜಿನಿಯರ್ ಸಂಬಂಧಿತ ಹಾಗೂ ರಸ್ತೆ ಅಗಲೀಕರಣ ಕಾಮಗಾರಿಗಳಿಗೆ ಹಾಗೂ 1000 ಶೌಚಾಲಯಗಳನ್ನು ನಿರ್ಮಿಸಲು ಒಟ್ಟು ರೂ. 2191.00 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.
ಇ	ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ 2018-19ಕ್ಕೆ ನಿಗಧಿಪಡಿಸಿರುವ ಯೋಜನೆಗಳು ಯಾವುವು; ಇದಕ್ಕೆ ನಿಗಧಿಪಡಿಸಿರುವ ಅನುದಾನ ಎಷ್ಟು; (ವಿವರಗಳನ್ನು ಒದಗಿಸುವುದು)	2018-19ನೇ ಸಾಲಿಗೆ ಮಹದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ಯೋಜನೆಗಳು ಮಂಜೂರಾಗಿರುವುದಿಲ್ಲ.

ಕ್ರಸಂ.	ಅನುದಾನದ ವಿವರ	ಮೊತ್ತ (ರೂ. ಲಕ್ಷಗಳಲ್ಲಿ)
1	ಎಸ್.ಎಫ್.ಸಿ.	75867.58
2	ನಗರೋತ್ಥಾನ	86500.00
3	ಕೆರೆಗಳು	5000.00
4	ವಿಶೇಷ ಮೂಲಭೂತ ಸೌಕರ್ಯ	203100.00
5	ಇಂದಿರಾ ಕ್ಯಾಂಟೀನ್	5000.00

ಸಂಖ್ಯೆ: ನಅಇ 370 ಎಂಎನ್‌ವೈ 2018

(ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **359**
ಸದಸ್ಯರ ಹೆಸರು : ಶ್ರೀ ಆರ್. ಅಶೋಕ
ಉತ್ತರಿಸುವ ದಿನಾಂಕ: : 11-07-2018
ಉತ್ತರಿಸುವವರು : ಮಾನ್ಯ ಉಪ ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ)	ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ಸಮಸ್ಯೆಯು ಉಲ್ಬಣಗೊಂಡಿದ್ದು, ಬಹುತೇಕ ತ್ಯಾಜ್ಯ ಸಂಸ್ಕರಣಾ ಘಕಟಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಸುಬ್ಬರಾಯನಪಾಳ್ಯ ತ್ಯಾಜ್ಯ ಸಂಸ್ಕರಣ ಘಟಕ ಮತ್ತು ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣ ಘಟಕಗಳು ಸ್ಥಗಿತಗೊಂಡಿರುತ್ತವೆ. ಆದರೆ, 6 ಘಟಕಗಳಿಂದ ಪ್ರತಿ ದಿವಸ ಕಸ ಸಂಸ್ಕರಣೆ ಮಾಡಲಾಗುತ್ತಿದೆ (ಚಿಕ್ಕನಾಗಮಂಗಲ, ದೊಡ್ಡಬಿದರಕಲ್ಲು, ಕನ್ನಹಳ್ಳಿ, ಕೆಸಿಡಿಸಿ, ಲಿಂಗದೀರನಹಳ್ಳಿ ಮತ್ತು ಸೀಗೆಹಳ್ಳಿ ಘಟಕಗಳು)
ಆ)	ಹಾಗಿದ್ದಲ್ಲಿ, ತ್ಯಾಜ್ಯ ವಿಲೇವಾರಿ ಸಂಸ್ಕರಣಾ ಘಟಕವು ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುವುದಿಲ್ಲವೇ;	ಹೌದು.
ಇ)	ತ್ಯಾಜ್ಯ ವಿಲೇವಾರಿಯ ಸಂಸ್ಕರಣಾ ಘಟಕಗಳನ್ನು ಮರು ಚಾಲನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?	ಸುಬ್ಬರಾಯನಪಾಳ್ಯ ತ್ಯಾಜ್ಯ ಸಂಸ್ಕರಣಾ ಘಟಕವು ಈ ಹಿಂದೆ ಸ್ಥಗಿತಗೊಂಡಿದ್ದು, ನಂತರದಲ್ಲಿ ಪ್ರಾರಂಭವಾಗಿ ಸ್ಥಳೀಯ ಸಮಸ್ಯೆಗಳಿಂದ ಸ್ಥಗಿತಗೊಂಡಿರುತ್ತದೆ. ಮಾವಳ್ಳಿಪುರ ತ್ಯಾಜ್ಯ ಸಂಸ್ಕರಣಾ ಘಟಕವು ಈ ಹಿಂದೆ ಮೆ:ರಾಮ್ಕೀ ಸಂಸ್ಥೆಯಿಂದ ಪಿ.ಪಿ.ಪಿ ಮಾಡೆಲ್ ನಿಂದ ನಡೆಯುತ್ತಿದ್ದು, ಅವರ ಕಾರ್ಯವೈಖರಿ ಸರಿಯಿಲ್ಲದ ಪ್ರಯುಕ್ತ ಟೆಂಡರ್‌ನ್ನು ರದ್ದು ಮಾಡಿ ಬಿ.ಬಿ.ಎಂ.ಪಿ.ವತಿಯಿಂದ ನಡೆಸಲಾಗುತ್ತಿತ್ತು. ಸಧ್ಯ ಈ ಘಟಕವು ಸಹಾ ಸ್ಥಗಿತಗೊಂಡಿರುತ್ತದೆ. ಈ ಎರಡು ಘಟಕಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 369 ಎಂಎನ್‌ವೈ 2018

(ಡಾ|| ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ